"ಹರಿಶ್ಚಂದ್ರ ಕಾವ್ಯದಲ್ಲಿ ಪ್ರತಿರೋಧದ ನೆಲೆಗಳು"

ಕನ್ನಡ ವಿಶ್ವವಿದ್ಯಾನಿಲಯಕ್ಕೆ ಎಂ.ಫಿಲ್
ಪದವಿಗಾಗಿ ಅರ್ಪಿಸಿದ ಪ್ರಬಂಧ.

ಸಂಶೋಧಕರು

ಆಶಾಲತಾ

ಮಾರ್ಗದರ್ಶಕರು

ಡಾ. ಬಿ.ಪಿ. ಸಂಪತ್ ಕುಮಾರ
ಮುಖ್ಯಸ್ಥರು, ಕನ್ನಡ ವಿಭಾಗ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು,
ಉಜಿರೆ

ಡಾ. ಹಾ.ಮಾ.ನಾ. ಸಂಶೋಧನಾ ಕೇಂದ್ರ,
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು
ಉಜಿರೆ

(ಕನ್ನಡ ವಿಶ್ವವಿದ್ಯಾನಿಲಯ, ಹಂಪಿ)

2007

238

"ಹರಿಶ್ಚಂದ್ರ ಕಾವ್ಯದಲ್ಲಿ ಪ್ರತಿರೋಧದ ನೆಲೆಗಳು"

ಕನ್ನಡ ವಿಶ್ವವಿದ್ಯಾನಿಲಯಕ್ಕೆ ಎಂ.ಫಿಲ್
ಪದವಿಗಾಗಿ ಅರ್ಪಿಸಿದ ಪ್ರಬಂಧ.

ಸಂಶೋಧಕರು

ಆಶಾಲತಾ

ಮಾರ್ಗದರ್ಶಕರು

ಡಾ. ಬಿ.ಪಿ. ಸಂಪತ್ ಕುಮಾರ
ಮುಖ್ಯಸ್ಥರು, ಕನ್ನಡ ವಿಭಾಗ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು,
ಉಜಿರೆ

ಡಾ. ಹಾ.ಮಾ.ನಾ. ಸಂಶೋಧನಾ ಕೇಂದ್ರ,
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು
ಉಜಿರೆ

(ಕನ್ನಡ ವಿಶ್ವವಿದ್ಯಾನಿಲಯ, ಹಂಪಿ)
2007

ಅರ್ಹತಾ ಪತ್ರ

ಶ್ರೀಮತಿ ಆಶಾಲತಾ ಇವರು 'ಹರಿಶ್ಚಂದ್ರ ಕಾವ್ಯದಲ್ಲಿ ಪ್ರತಿರೋಧದ ನೆಲೆಗಳು' ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಪದವಿಯ ಆಂಶಿಕ ಪೂರೈಕೆಗಾಗಿ ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಸಂಶೋಧನೆಯ ಮೂಲಕ ರೂಪುಗೊಂಡಿದೆ. ಈ ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಲೀ ಉದ್ದೇಶಗಳಿಗಾಗಲೀ ಇವರು ಒಪ್ಪಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : 21-05-2007

ಸ್ಥಳ : ಉಜಿರೆ

(ಡಾ. ಬಿ.ಪಿ. ಸಂಪತ್ ಕುಮಾರ್)
ಮಾರ್ಗದರ್ಶಕರು
ಮುಖ್ಯಸ್ಥರು, ಕನ್ನಡ ವಿಭಾಗ,
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು,
ಉಜಿರೆ

ಪ್ರಮಾಣ ಪತ್ರ

'ಹರಿಶ್ಚಂದ್ರ ಕಾವ್ಯದಲ್ಲಿ ಪ್ರತಿರೋಧದ ನೆಲೆಗಳು' ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಪದವಿಯ ಆಂಶಿಕ ಪೂರೈಕೆಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಡಾ. ಬಿ.ಪಿ. ಸಂಪತ್ ಕುಮಾರ, ಮುಖ್ಯಸ್ಥರು, ಕನ್ನಡ ವಿಭಾಗ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಈ ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಲೀ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲವೆಂದು ಘೋಷಿಸುತ್ತೇನೆ.

ದಿನಾಂಕ : 21-05-2007

ಸ್ಥಳ : ಉಜಿರೆ

ಆಶಾಲತಾ

(ಆಶಾಲತಾ)

ಸಂಶೋಧನಾ ವಿದ್ಯಾರ್ಥಿ

ಡಾ. ಹಾ.'ಮಾ.ನಾ' ಸಂಶೋಧನಾ ಕೇಂದ್ರ,

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು,

ಅಧ್ಯಾಯಗಳು

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ರಾಘವಾಂಕ ಮಧ್ಯಕಾಲೀನ ಕನ್ನಡ ಸಾಹಿತ್ಯದ ದೊಡ್ಡ ಕವಿ. ಈತನ ಕೃತಿಯಾದ 'ಹರಿಶ್ಚಂದ್ರ ಕಾವ್ಯ' ಸಾಹಿತ್ಯಕ್ಕಿಂತ ಹೆಚ್ಚಾಗಿ ಸಾಮಾಜಿಕ ಸಂಗತಿಗಳಿಗೆ ತೆರೆದುಕೊಂಡ ಕೃತಿ.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದಾಗ 'ಪ್ರತಿರೋಧ'ದ ಅಂಶಗಳು ನಮಗೆ ಉದ್ದಕ್ಕೂ ಗೋಚರಿಸುತ್ತವೆ. ಪಂಪ, ರನ್ನರ ಕೃತಿಗಳಲ್ಲಿ ವಚನಗಳಲ್ಲಿ ಹರಿಹರ ರಾಘವಾಂಕರ ಕೃತಿಗಳಲ್ಲಿ ಪ್ರತಿರೋಧವನ್ನು ನಾವು ಗಮನಿಸಬಹುದು. ಪರಂಪರಾಗತವಾದ ಸಾಮಾಜಿಕ, ಧಾರ್ಮಿಕ ಸಂಗತಿಗಳ ವಿರುದ್ಧ ಪ್ರತಿಭಟನೆಯ ಕೂಗು ಮೊದಲು ನಮಗೆ ಗೋಚರಿಸುವುದು ಪಂಪನಲ್ಲಿ. ಆತನ ವಿಕ್ರಮಾರ್ಜುನ ವಿಜಯದಲ್ಲಿ ಕುಲವೆಂದರೇನು? ಎಂಬ ಪ್ರಶ್ನೆ ಮುಂದೊಡ್ಡುತ್ತದೆ. ಅದಕ್ಕೆ ಪಂಪ ಕರ್ಣನ ಮೂಲಕ ಮಾರ್ಮಿಕವಾಗಿ ಉತ್ತರ ನೀಡುತ್ತಾನೆ.

ಆ ಬಳಿಕ ಶಿವಶರಣರ ಕಾಲಘಟ್ಟದಲ್ಲಿ ಸಾಮಾಜಿಕ ಅಸಮಾನತೆಯ ವಿರುದ್ಧ ಬೃಹತ್ ಪ್ರತಿರೋಧ ವ್ಯಕ್ತವಾಯಿತು. ಶಿವಶರಣರ ವಚನಗಳಲ್ಲಿ ಇದಕ್ಕೆ ನಿದರ್ಶನಗಳು ನಮಗೆ ಗೋಚರವಾಗುತ್ತವೆ. ಈ ರೀತಿಯ ಸಾಮಾಜಿಕ ಅಸಮಾನತೆಯ ವಿರುದ್ಧದ ಹೋರಾಟ ಕೀರ್ತನೆಕಾರರ ಕಾಲದಲ್ಲೂ ಮುಂದುವರಿದಿರುವುದನ್ನು ನೋಡುವಾಗ ಆ ಕಾಲದಲ್ಲೂ ವರ್ಗ ಭೇದಗಳು ಸಂಪೂರ್ಣವಾಗಿ ಮರೆಯಾಗಿರಲಿಲ್ಲವೆನ್ನುವುದು ಸ್ಪಷ್ಟವಾಗುತ್ತದೆ.

ವಚನ ಚಳುವಳಿಯ ಕಿರಿದಂತರದಲ್ಲಿ ಕಾಣಿಸಿಕೊಳ್ಳುವ ಹರಿಹರ ಕವಿ ತನ್ನ ಸಾಹಿತ್ಯದಲ್ಲಿ ವಸ್ತು, ಭಾಷೆ, ರೂಪಗಳಲ್ಲಿ ಮುಕ್ತ ಸಮಾಜಕ್ಕೆ ಧ್ವನಿಯಾಗುವ ಉತ್ಸಾಹವೊಂದನ್ನು ಕಾಣಿಸಿದ್ದಾನೆ. ಹೀಗಿದ್ದೂ ಇಲ್ಲಿ ವಸ್ತು-ಧೋರಣೆಗಳಿಗೆ ಸಂಬಂಧಿಸಿದ ಹೋರಾಟವೇ ಸ್ಥಾಯಿಯಾಗಿ ನಿಂತು, ತನಗನುಗುಣವಾದ ಭಾಷೆ, ರೂಪಗಳನ್ನು ಕಟ್ಟಿಕೊಂಡು ಅದು ಮುನ್ನಡೆಯುತ್ತದೆ. ಹೀಗಾಗಿ ಹರಿಹರನು ವಸ್ತು ಧೋರಣೆಗಳಲ್ಲಿ ತಾಳಿದ ಪ್ರಗತಿಪರ ನಿಲುವನ್ನು, ಅದನ್ನು ಪ್ರತಿಪಾದಿಸುವಲ್ಲಿಯೂ ತೋರಿಸಿದ್ದಾನೆ.

ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ವು ಸುಮಾರು 15-16ನೇ ಶತಮಾನದ ಆ ಕಾಲಘಟ್ಟದ ಸಾಮಾಜಿಕ ಪರಿಸರದಲ್ಲಿರುವ ಅಮಾನವೀಯ ಎನ್ನಬಹುದಾದ ಮಾನವನ ನಡತೆಗಳನ್ನು ಪ್ರತಿಬಿಂಬಿಸಿದೆ. ವಿಶಿಷ್ಟವಾದ ಧೋರಣೆಯೊಂದಿಗೆ ಕವಿ ಹರಿಶ್ಚಂದ್ರ ಕಾವ್ಯ ರಚನೆ ಮಾಡಿದುದಲ್ಲದೆ ಹಲವು ದೃಷ್ಟಿಕೋನದಿಂದ ಬದುಕನ್ನು ಅರ್ಥೈಸಿಕೊಳ್ಳುವ ಪ್ರಯತ್ನವನ್ನೂ ನಡೆಸಿದ್ದನು.

'ಹರಿಶ್ಚಂದ್ರ ಕಾವ್ಯದಲ್ಲಿ ಪ್ರತಿರೋಧದ ನೆಲೆಗಳು' ಎಂಬ ಶೀರ್ಷಿಕೆಯಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ಕಾವ್ಯದಲ್ಲಿ ಪ್ರತಿರೋಧದ ನೆಲೆಗಳು ಹೇಗೆ ಪ್ರಕಟಗೊಂಡಿವೆ ಎಂಬುದನ್ನು ಗುರುತಿಸುವುದು ಮುಖ್ಯ ಉದ್ದೇಶವಾಗಿದೆ. ಪಂಪನ ಕಾಲದಲ್ಲಿದ್ದ ಕುಲದ ಪ್ರಶ್ನೆಯು ರಾಘವಾಂಕನ ಕಾಲಘಟ್ಟದಲ್ಲೂ ಹಾಗೆಯೇ ಮುಂದುವರಿದಿರುವುದನ್ನು ಹಾಗೂ ಹಲವು ಕಡೆಗಳಲ್ಲಿ ಈ ಕುಲದ ಪ್ರಶ್ನೆಯು ಪ್ರತಿರೋಧಗಳನ್ನು ಹುಟ್ಟು ಹಾಕುವ ಐತಿಹಾಸಿಕ ಸಂದರ್ಭಗಳನ್ನು ಗಮನಿಸಬಹುದು. ಹಾಗು ಪ್ರಭುತ್ವವರ್ಗ ಮತ್ತು ಅಸಹಾಯಕ ವರ್ಗಗಳ ನಡುವಿನ ತಾರತಮ್ಯ ಮತ್ತು ಜಾತಿಯ ತಾರತಮ್ಯಗಳು ಮೇಳೈಸಿ ಸಾಂಸ್ಕೃತಿಕ ಪರಿಸರದ ಸಂಘರ್ಷವೊಂದಕ್ಕೆ ಹೇಗೆ ಕಾರಣೀಭೂತವಾಗುತ್ತದೆ?ಎಂಬುದನ್ನು ಮನವರಿಕೆ ಮಾಡಿಕೊಂಡು ಪರಿಣಾಮಗಳ ನೆಲೆಗಳನ್ನು ಶೋಧಿಸುವುದು ಈ ಅಧ್ಯಯನದ ಮುಖ್ಯವಾದ ಉದ್ದೇಶವಾಗಿದೆ.

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಹಾಗೂ ವ್ಯಾಪ್ತಿಯಾಗಿರುತ್ತದೆ.

ಅಧ್ಯಾಯ ಎರಡು

"ರಾಘವಾಂಕನ ಸ್ವವಿವರ" ಎಂಬ ಈ ಅಧ್ಯಾಯದಲ್ಲಿ ರಾಘವಾಂಕನ ಜೀವನ ಮತ್ತು ಕೃತಿಗಳ ಬಗ್ಗೆ ವಿವರಗಳನ್ನು ನೀಡಲಾಗುತ್ತದೆ.

ಅಧ್ಯಾಯ ಮೂರು

"ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು" ಎಂಬ ಭಾಗದಲ್ಲಿ ಪಂಪನ "ವಿಕ್ರಮಾರ್ಜುನ ವಿಜಯ", ರನ್ನನ ಗದಾಯುದ್ಧ ಮತ್ತು ಅಜಿತ ಪುರಾಣ ಹಾಗೂ ಜನ್ನನ ಯಶೋಧರ ಚರಿತೆ, ವಚನಕಾರರಾದ ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು ಇವರ ವಚನಗಳಲ್ಲಿ ಹರಿಹರನ ರಗಳೆಗಳಲ್ಲಿ

ಪ್ರತಿರೋಧ ಯಾವ ರೀತಿಯಲ್ಲಿ ವ್ಯಕ್ತವಾಗಿದೆ ಎಂಬ ವಿಷಯವನ್ನು ವಿವರಿಸಿ ನೋಡುವ ಯತ್ನ ಮಾಡಲಾಗಿದೆ.

ಅಧ್ಯಾಯ ನಾಲ್ಕು

"ಹರಿಶ್ಚಂದ್ರ ಕಾವ್ಯದಲ್ಲಿ ಪ್ರತಿರೋಧದ ನೆಲೆಗಳು" ಎಂಬ ಈ ಅಧ್ಯಾಯದಲ್ಲಿ ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಅಭಿವ್ಯಕ್ತಗೊಂಡ ಪ್ರತಿರೋಧದ ನೆಲೆಗಳನ್ನು ಕುರಿತು ಚರ್ಚಿಸಲಾಗುವುದು.

ಅಧ್ಯಾಯ ಐದು

ಈ ಭಾಗದಲ್ಲಿ ಒಟ್ಟು ಅಧ್ಯಯನದ ಫಲಶ್ರುತಿಯನ್ನು ಕುರಿತು ಚರ್ಚಿಸಲಾಗಿದೆ.

ವ್ಯಾಪ್ತಿ

ಈ ಅಧ್ಯಯನದಲ್ಲಿ ಸಂಶೋಧನೆಯ ಉದ್ದೇಶ ಸಾಧನೆಗಾಗಿ ಪಂಪನ ವಿಕ್ರಮಾರ್ಜುನ ವಿಜಯ, ರನ್ನನ ಗದಾಯುದ್ಧ ಮತ್ತು ಅಜಿತ ಪುರಾಣ ಹಾಗೂ ಜನ್ನನ ಯಶೋಧರ ಚರಿತೆ, ವಚನಕಾರರಾದ ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು ಹಾಗೂ ರಗಳೆಯಲ್ಲಿ ಹರಿಹರ ಇವರ ಕೃತಿಗಳನ್ನು ಮುಖ್ಯವಾಗಿ, ರಾಘವಾಂಕನ ಹರಿಶ್ಚಂದ್ರ ಕಾವ್ಯ ಕೃತಿಯನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಳ್ಳಲಾಗಿದೆ.

<u>ಆಕರ</u>

೧) ವಿವೇಕ ರೈ. ಬಿ.ಎ. (ಸಂ.) ಅವರ ರಾಘವಾಂಕನ ಸಮಗ್ರ ಕಾವ್ಯ, ೨) ಡಾ. ವಿದ್ಯಾ ಶಂಕರ್ ಎಸ್., (ಸಂ.) ಅವರ ರಾಘವಾಂಕನ ಸಮಗ್ರ ಕೃತಿಗಳು, ರಾಗೌ ಅವರ 'ರಾಘವಾಂಕ', ಹಿರೇಮಠ ಆರ್.ಸಿ. ಅವರ ಮಹಾಕವಿ ರಾಘವಾಂಕ ಕೃತಿಗಳನ್ನು ಆಕರ ಗ್ರಂಥಗಳನ್ನಾಗಿ ಬಳಸಿಕೊಂಡು ಅಧ್ಯಯನ ಕೈಕೊಳ್ಳಲಾಗಿದೆ.

ಇದುವರೆಗಿನ ಅಧ್ಯಯನಗಳು, ವಿಮರ್ಶೆಗಳೂ ತಲುಪಿರುವ ನೆಲೆಗಳನ್ನು ಸಾಧ್ಯವಾದ ಮಟ್ಟಿಗೆ ಗ್ರಹಣ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

ಅಲ್ಲದೆ ರಾಘವಾಂಕ ಹರಿಶ್ಚಂದ್ರ ಚಾರಿತ್ರದ ಕುರಿತು ವಿಮಲಾ ಎಸ್. ವಿ. ಅವರ "ಹರಿಶ್ಚಂದ್ರನ ಕೃತಿ ಭಾರತೀಯ ಸಾಹಿತ್ಯದಲ್ಲಿ", ಸೂರ್ಯನಾರಾಯಣ ಎಲ್. ಎಸ್. ಅವರ

"ರಾಘವಾಂಕ ಒಂದು ಅಧ್ಯಯನ" ಹಾಗೂ ಹರದಗಟ್ಟೆ ಎಸ್. ಎಂ. ಅವರ ಕವಿ "ರಾಘವಾಂಕ ಮತ್ತು ಅವನ ಕೃತಿಗಳು" ಎಂಬಿತ್ಯಾದಿ ಹಲವು ಸಂಶೋಧನ ಮಹಾ ಪ್ರಬಂಧಗಳು ಪ್ರಕಟವಾಗಿದೆ. ಇವುಗಳನ್ನೂ ಈ ಅಧ್ಯಯನಕ್ಕೆ ಅಗತ್ಯವೆನಿಸಿದಷ್ಟು ಲಕ್ಷಿಸಲಾಗಿದೆ.

ಅಧ್ಯಾಯ - ಎರಡು

"ರಾಘವಾಂಕನ ಸ್ವವಿವರ" ಎಂಬ ಈ ಅಧ್ಯಯನದಲ್ಲಿ ರಾಘವಾಂಕನ ಜೀವನ ಹಾಗೂ ಆತನ ಕೃತಿಗಳ ಕುರಿತಾದ ವಿವರಗಳು

ಪುರಾಣೇತಿಹಾಸ ಪ್ರಸಿದ್ಧವಾದ ಪಂಪಾಕ್ಷೇತ್ರದಲ್ಲಿ ಮಹಾದೇವ ಭಟ್ಟ, ರುದ್ರಾಣಿ ಎಂಬ ದಂಪತಿಗಳಿದ್ದರು. ಇವರು ಪಂಪಾನಾಥನ ಕೃಪಾ ಪ್ರಸಾದದಿಂದ ಪಡೆದ ಮಗುವೇ ರಾಘವಾಂಕ. ಈತನೇ ಮುಂದೆ ಹಂಪೆಯ ಹರೀಶ್ವರನ ವರಸುತನಾಗಿ 'ಚತುರ ಕವಿರಾಯ' 'ಉಭಯಕವಿ ಕಮಲರವಿ' 'ಉಭಯ ಕವಿ ಶರಭ ಭೇರುಂಡ' ಎಂಬ ಹೆಗ್ಗಳಿಕೆಯ ಬಿರುದು ಧರಿಸಿ ಮೆರೆದ ಹಂಪೆಯ ರಾಘವಾಂಕ ಪಂಡಿತ. ಸುಕವಿ ಹಂಪೆಯ ರಾಘವಾಂಕ, ಹಂಪೆಯ ರಾಘವ ಪಂಡಿತ ರಾಘದೇವ, ಹಂಪೆಯ ರಾಘವ ಇವು ಈತನ ಹೆಸರಿನ ಇತರ ರೂಪಗಳು. 'ಸದ್ಭಕ್ತಿ ವನಿತೆಯ ಗರ್ಭದಲ್ಲಿ ಶಿವಪ್ರಸಾದಂ ಜನಿಸಿತೆನೆ' ಜನಿಸಿದವನೀತ. ಪಂಪಾಕ್ಷೇತ್ರದ ಪಾವನ ಪರಿಸರದಲ್ಲಿ ಅದನ್ನು ಸುತ್ತುವರಿದಿದ್ದ ಪ್ರಕೃತಿ ಸೌಂದರ್ಯದ ಮಡಿಲಿನಲ್ಲಿ ಈತನ ಬಾಲ್ಯದ ಆಟ ಪಾಟ ವಿನೋದ ವಿಹಾರಗಳು. ಈತನ ವಿದ್ಯಾ ವ್ಯಾಸಂಗ ನಡೆದುದು ಪಂಪಾಕ್ಷೇತ್ರದ ಸುವಿಖ್ಯಾತ ಗುರುಕುಲವೊಂದರಲ್ಲಿ. 'ಅಭಿನವ ಮಹಾದೇವ' 'ಸಮಸ್ತ ಮುಖ ಜೀವಾನುಕಂಪಿ' ಎಂದೆನಿಸಿದ್ದ ಹಂಪೆಯ ಶಂಕರಪ್ರಭು, 'ಸಕಲಾಗಮಾಚಾರ್ಯ'ನೆಂದೂ 'ಅನಂತವೇದಾರ್ಥ ಸಾಧಕ'ನೆಂದೂ ಹೆಸರು ಪಡೆದಿದ್ದ 'ಗುಪ್ತಲಿಂಗ ಪ್ರೇಮಿ ಹಂಪೆಯ ಮಾದಿರಾಜ', 'ಪ್ರತ್ಯಕ್ಷ ಪಂಪಾನನ' ನೆಂದು ಪ್ರಸಿದ್ಧವಾಗಿದ್ದ ಹಂಪೆಯ ಮಾಯಿದೇವ- ಈ ಮೂವರು ಆ ಗುರುಕುಲದ ಕುಲಪತಿಗಳಾಗಿದ್ದು, ಅದರ ಕೀರ್ತಿ ಪ್ರತಿಷ್ಠೆಗಳನ್ನು ಮಿಗಿಲುಗೊಳಿಸಿದ್ದರು. ಕಡೆಯವನಾದ ಹಂಪೆಯ ಮಾಯಿದೇವರ ಶಿಷ್ಯನಾದ ಹಂಪೆಯ ಹರಿಹರ ದೇವನೇ ರಾಘವಾಂಕನ ಗುರು. ಇವರಿಬ್ಬರಲ್ಲಿ ಗುರುಶಿಷ್ಯ ಸಂಬಂಧವಿದ್ದಿತಲ್ಲದೆ ರಕ್ತ ಬಾಂಧವ್ಯವೂ ಇದ್ದಿತು. ರಾಘವಾಕನು ಹರಿಹರನ ಅಕ್ಕನ ಮಗನೆಂದು ಪದ್ಮಣಾಂಕನ ಹೇಳಿಕೆ.

ರಾಘವಾಂಕನ ಅತ್ಯುದ್ಭುತ ಪ್ರತಿಭೆ, ಗುರುಭಕ್ತಿ, ಗ್ರಹಣ ಶಕ್ತಿಗಳನ್ನು ಕಂಡು ಮೆಚ್ಚಿದ ಹರಿಹರ ದೇವನು ತನ್ನ ಶಿಷ್ಯನಿಗೆ ತನ್ನಲ್ಲಿದ್ದ ಸದ್ವಿದ್ಯೆಯೆಲ್ಲವನ್ನೂ ಅಂತಃ ಕರಣಪೂರ್ವಕವಾಗಿ ಧಾರೆಯೆರೆದನು. ಮುಂದೆ ರಾಘವಾಂಕ ಕನ್ನಡ,

ಸಂಸ್ಕೃತಗಳೆರಡರಲ್ಲಿಯೂ ಪ್ರವೀಣನಾದನು. ಅಲಂಕಾರ, ವ್ಯಾಕರಣ, ನಾಟಕಗಳನ್ನು, ರಸಭರಿತವಾಗಿ ರಚಿಸುವಷ್ಟು ಜಾಣ್ಮೆ ಸಿದ್ಧಿಗಳನ್ನು ಗಳಿಸಿದನು. ತಾನೂ ತನ್ನ ಗುರುವಿನಂತೆ ರಸವತ್ ಕಾವ್ಯಗಳನ್ನು ರಚಿಸಬೇಕೆಂಬುದು ಆತನ ಹೆಬ್ಬಯಕೆಯಾಗಿದ್ದಿತು. ರಾಘವಾಂಕನ ಮೊಟ್ಟ ಮೊದಲನೆಯ ಕೃತಿ 'ಹರಿಶ್ಚಂದ್ರ ಕಾವ್ಯ' ವೆಂದೂ ಅದನ್ನು ಮೊದಲು ಹಂಪೆಯ ಅರಸನಾಗಿದ್ದ ದೇವರಾಜನ ಆಸ್ಥಾನದಲ್ಲಿ ಓದಿ ಕವಿ ರಾಜಮನ್ನಣೆಗೆ ಪಾತ್ರನಾದನೆಂದೂ ತಿಳಿದು ಬರುತ್ತದೆ.

ಆದರೆ ಗುರುವಾದ ಹರಿಹರ ದೇವನಿಗೆ ಮಾತ್ರ, ಈ ಕಾವ್ಯ ಮೆಚ್ಚುಗೆಯಾಗಲಿಲ್ಲ. 'ಹಂಪೆಯರಸನ ಪೊಗಟ್ವ ನಾಲಗೆಯೊಳನ್ಯ ದೈವವ ಭವಿಗಳಂ ಕೀರ್ತಿಸಿದೆನಾದೊಡೆ ಮನಸಿಜಾರಿಯ ಭಕ್ತನಲ್ಲ ತಾನು' ಎಂದು ರಾಘವಾಂಕ ಹೇಳಿಕೊಂಡಿರುವುದನ್ನು ನೋಡಿ ಹರಿಹರನು ಅತಿಶಯವಾಗಿ ಕೋಪಗೊಂಡನು. ಗುರುಶಿಷ್ಯರಿಬ್ಬರಲ್ಲಿ ವಾಗ್ಯುದ್ಧವೇ ಪ್ರಾರಂಭವಾಯಿತು. ಹರಿಶ್ಚಂದ್ರನು ಸತ್ಯವಂತನೂ ಅಲ್ಲ, ಶಿವಭಕ್ತನೂ ಅಲ್ಲ ಎಂದು ಹರಿಹರನ ವಾದ. ಶಿವಭಕ್ತರಾದ ಚೋಳಾದಿಗಳ ಕಥೆಯನೇಕೆ ಪೇಳ್ದಿರಿ? ಎಂದು ರಾಘವಾಂಕನ ಪ್ರತಿವಾದ. ಹರಿಹರನು ಉದ್ವಿಗ್ನಗೊಂಡು ಶಿಷ್ಯನ ದವಡೆಗೆ ಬಲವಾಗಿ ಹೊಡೆದನು. ರಾಘವಾಂಕನ ಪಶ್ಚಾತ್ತಾಪಕ್ಕೆ ಕೊನೆಮೊದಲಿರಲಿಲ್ಲ. ಗುರುವಿನ ಮಾತಿಗೆ ಎದುರಾಡಿದುದು ಒಂದನೆಯ ತಪ್ಪು, ಶಿವಭಕ್ತರನ್ನು ದೂಷಿಸಿದ್ದು ಎರಡನೆಯ ತಪ್ಪು ಎಂಬುದು ಆತನಿಗೆ ಮನವರಿಕೆಯಾಗಿತ್ತು. ತನ್ನ ಗುರುವಿನ ಬಗೆಗೆ ಆತನಿಗೆ ಅಪಾರ ಭಕ್ತಿ. ಹರಿಶ್ಚಂದ್ರನಿಗೆ ವಸಿಷ್ಠರಿದ್ದಂತೆ ಈತನಿಗೆ ಹರಿಹರದೇವ. ಗುರು ಮುನಿದರೆ ಹರನೂ ಕಾಯಲಾರನು ಎಂದು ಬೋಧೆಯಾಯಿತು. ಮತ್ತೆ ಹರಿಹರ ಗುರುವಿನಲ್ಲಿಗೇ ಹೋಗಿ ತನ್ನ ಅಪರಾಧಗಳನ್ನೂ ಸೈರಿಸಬೇಕು ಎಂದು ಬೇಡಿಕೊಳ್ಳುತ್ತ ಸಾಷ್ಟಾಂಗ ನಮಸ್ಕಾರ ಮಾಡಿದನು. ಹರಿಹರನು ಅವನನ್ನು ಓಡಿದೆತ್ತಿ ಇನ್ನು ಮೇಲೆ ಕನಸು ಮನಸ್ಸಿನಲ್ಲಿಯೂ ನರನನ್ನು ಹೊಗಳಬೇಡ. ಶಿವನನ್ನೂ ಶಿವನವರನ್ನೂ ಹೊಗಳುವುದಕ್ಕೆ ನಿನ್ನ ನಾಲಗೆ ಮೀಸಲಾಗಿರಲಿ ಎಂದು ಬೆಸಸಿದನು. ಆಗ ರಾಘವಾಂಕ ಸಮಾಧಾನದ ನಿಟ್ಟುಸಿರು ಬಿಟ್ಟ.

ಇಷ್ಟಾದರೂ ಹರಿಶ್ಚಂದ್ರ ಚಾರಿತ್ರವು ರಾಘವಾಂಕನಿಗೆ ಕೀರ್ತಿ ಗೌರವಗಳನ್ನು ತಂದಿತ್ತು. ಆತನ ಹೆಸರು ಹಂಪೆಯಿಂದ ದ್ವಾರಸಮುದ್ರದವರೆಗೂ ಹರಡಿತು. ಆ ಸಮಯದಲ್ಲಿ ಹೊಯ್ಸಳ ನರಸಿಂಹ ಬಲ್ಲಾಳನಲ್ಲಿ ಪದ್ಮರಸನೆಂಬ ಅಮಾತ್ಯನಿದ್ದ. ಪರಮ

ಶಿವಭಕ್ತ ರಾಘವಾಂಕನ ಕವಿತಾಶಕ್ತಿಗೆ ಮಾರು ಹೋಗಿ ಆತನನ್ನು ಎಂದು ನೋಡಿಯೇನೋ ಎಂಬ ಕಾತರತೆಯಿಂದಿದ್ದ.

ಒಂದು ದಿನ ಪಂಪಾ ಕ್ಷೇತ್ರದಿಂದ ವಿರೂಪಾಕ್ಷನು ಜಂಗಮನ ರೂಪದಿಂದ ಪದ್ಮರಸರಲ್ಲಿಗೆ ಬಂದು 'ಸಿದ್ಧರಾಮ ಪುರಾಣ' ವನ್ನು ಓದತೊಡಗುವನು. ಸೊಬಗಿನ ಸೋನೆಗರೆವಂತೆ ಆತನು ರಾಗ ತಾಳ ಲಯ ಬದ್ಧವಾಗಿ ಹಾಡಿದನು. ಆ ದಿವ್ಯ ಕೃತಿಯನ್ನು ಆಲಿಸುತ್ತಿದ್ದ ಪದ್ಮರಸನು ಅದರ ವಾಗ್ವಿಲಾಸಕ್ಕೆ, ಭಾವ ರಸದ ಲಹರಿಗೆ, ತತ್ವಪ್ರಣಾಳಿಕೆಗೆ, ನಾಟಕೀಯತೆಗೆ ಮೆಚ್ಚಿ ತಲೆದೂಗುತ್ತಿರಲು, ಅನುಚಿತವೆಂಬಂತೆ ತೋರುವ ಒಂದು ಪದ್ಯ ಅವನ ಕಿವಿಯ ಮೇಲೆ ಬಿದ್ದಿತು. ಆ ಪದ್ಯ ಓದುವವರಿಗೆ ಒಂದು ಸವಾಲಿನಂತಿತ್ತು. ಧರೆಗೆ ಸೊನ್ನಲಾ ಪುರವೆ ಕೈಲಾಸ; ಸಿದ್ಧರಾಮನ ಗುಡ್ಡ ಗಣೇಶ್ವರರು; ಅಲ್ಲಿಯ ಮರಗಳೆಲ್ಲ ಕಲ್ಪತರುಗಳು; ಮಡುಗಳೆಲ್ಲ ಸಿದ್ಧರಸದ ಮಡು; ಶಿವನು ಆ ಸಿದ್ಧರಾಮನು ಇದನ್ನು ಅಲ್ಲವೆಂದವನ ನೆತ್ತಿಯ ಮೇಲೆ ನನ್ನ ಪಾದುಕೆಯನ್ನಿಡುತ್ತೇನೆ. ಇದು ನನ್ನ ಪ್ರತಿಜ್ಞೆ ಎಂದಿತ್ತು ಆ ಪದ್ಯದ ತಾತ್ಪರ್ಯ. ಈ ಒರಟುತನ ಪದ್ಮರಸನಿಗೆ ಹಿಡಿಸಲಿಲ್ಲ. ಆ ಜಂಗಮನನ್ನು ಕುರಿತು 'ಈ ಪದನ ನಿಂತು ಪೇಳ್ವುದನುಚಿತ; ಆತನ ಕಂಡು ಶಂಕಿಸುವುದು ಉಚಿತ; ಮಹಾಜನರಿಂತಾಡಬಾರದು' ಎಂದು ನುಡಿಯುವನು. ಆ ನುಡಿಯನ್ನು ಕೇಳಿ ಜಂಗಮನು ರಾಘವಾಂಕನಲ್ಲಿಗೆ ಬಂದು ನಡೆದ ಸಂಗತಿಯನ್ನು ತಿಳಿಸಿದ. ರಾಘವಾಂಕನು ತನ್ನ ವಚನವನ್ನು ಉಳಿಸಿಕೊಳ್ಳಬೇಕಾಯಿತು. ತತ್‌ಕ್ಷಣವೇ ಪಲ್ಲಕ್ಕಿಯನ್ನೇರಿ ತನ್ನ ಪರಿವಾರದೊಂದಿಗೆ ದ್ವಾರಸಮುದ್ರಕ್ಕೆ ಧಾವಿಸಿದ. ಸಮಾಚಾರ ಪದ್ಮರಸನಿಗೆ ಮುಟ್ಟಿತ್ತು. ಆತನ ಆಗಮನವನ್ನೇ ಹಾರೈಸುತ್ತಿದ್ದ ಈತನಿಗೆ ಅತಿಶಯವಾದ ಆನಂದವಾಯಿತು. ಇಡೀ ನಗರವನ್ನೇ ಸಿಂಗರಿಸಿ ರಾಘವಾಂಕನ ಬಿರುದಗಳನ್ನು ತಾನೂ ಹೊಗಳುತ್ತಾ ಅವನಿಗೆ ಶರಣು ಮಾಡಿದನು. ತನ್ನ ಉನ್ನತ ಗೆಳೆಯನಾದ ಹಂಪೆಯ ಹರಿಹರ ದೇವರ ಸೋದರಳಿಯನೂ ಪಟ್ಟ ಶಿಷ್ಯನೂ ಆದ ಮಹಾಕವಿ ರಾಘವಾಂಕನಿಗೆ ಏನೆಲ್ಲಾ ರಾಜೋಪಚಾರಗಳನ್ನು ಸತ್ಕಾರಗಳನ್ನೂ ಅತ್ಯಂತ ವೈಭವದಿಂದ ಮಾಡಿದನು. ಆತನೊಡನೆ ಪ್ರತಿದಿನವೂ ಶಿವಾನುಭವಗೋಷ್ಠಿ ಶಿವಕಥಾ ಪ್ರಸಂಗಗಳಲ್ಲಿ ತಲ್ಲೀನನಾಗಿರುತ್ತಿದ್ದನು. ರಾಘವಾಂಕನು ಪದ್ಮರಸನಿಂದ ವೀರಶೈವಾಚಾರ ಮಾರ್ಗವನ್ನು ಪಡೆದು ಧನ್ಯನಾದನು.

ರಾಘವಾಂಕನು ಕೆಲವು ಕಾಲ ದ್ವಾರಸಮುದ್ರದಲ್ಲಿ ನಿಂತು ರಾಜಸಭೆಯಲ್ಲಿ ತನ್ನ ಕಮನೀಯ ಕಾವ್ಯಗಳನ್ನು ವಾಚಿಸಿ ಸನ್ಮಾನಿತನಾದನು. ಶೈವವಿದ್ವಾಂಸರ,

ಶಿವಕವಿಗಳ, ಶಿವಾನುಭಾವಿಗಳ ಸಂಗ ಸದ್ಗೋಷ್ಠಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ತನ್ನ ಅನುಭವದ ಕೋಶವನ್ನು ತುಂಬಿಕೊಂಡನು. ಆತನಲ್ಲಿದ್ದ ಅಹಂಕಾರ ಮಾಯವಾಗಿ ಶಾಂತಿ ಸಮತೆ ಸಮಾಧಾನಗಳಿಗೆ ಎಡೆಮಾಡಿಕೊಟ್ಟಿತೆಂದೂ ತೋರುವುದು. ದ್ವಾರ ಸಮುದ್ರದಿಂದ ಹಂಪೆಗೆ ಮರಳಿದ ಶಿಷ್ಯನಲ್ಲಿ ಈ ಬದಲಾವಣೆಗಳನ್ನು ಕಂಡು ಹರಿಹರ ದೇವನು ಅತಿಶಯವಾಗಿ ಹರ್ಷಗೊಂಡನು.

ಕಾಕತೀಯರ ಆಸ್ಥಾನದಲ್ಲಿ ಸುಯೋಗ್ಯರಾದ ಸತ್ಕವಿಗಳಿಗೆ ಆಶ್ರಯವಿಲ್ಲದಂತಾಗಿದ್ದಿತು. ಏಕಸಂಧಿ ಗ್ರಾಹಿ, ದ್ವಿಸಂಧಿ ಗ್ರಾಹಿ, ತ್ರಿಸಂಧಿ ಗ್ರಾಹಿ ಎಂಬ ಮೂವರು ಕುಕವಿಗಳು ಸೇರಿಕೊಂಡಿದ್ದರು. ಜ್ಞಾಪಕಶಕ್ತಿ ಅವರ ಆಸ್ತಿ. ಹೊಸ ಕವಿಯೊಬ್ಬನು ತನ್ನ ಕವಿತೆಯನ್ನು ತಂದು ಉತ್ಸಾಹದಿಂದ ದೊರೆಯ ಮುಂದೆ ಓದಿದ ಕೂಡಲೇ ಏಕಸಂಧಿ ಗ್ರಾಹಿ ಆ ಗಳಿಗೆಯಲ್ಲಿಯೇ ಆ ನವಕವಿತೆಯನ್ನು ಪುನರುಚ್ಚರಿಸಿ ಅದು ತಾನೇ ಕಟ್ಟಿದ ಹೊಸ ಕವಿತೆ ಎಂದು ಸಾಧಿಸಿ ಬಿಡುತ್ತಿದ್ದ. ದ್ವಿಸಂಧಿ ಗ್ರಾಹಿ ಮತ್ತು ತ್ರಿಸಂಧಿ ಗ್ರಾಹಿಯೂ ಮತ್ತೆ ಕವನ ಹೇಳಿ ಕವಿತೆಯನ್ನು ತಂದ ಹೊಸ ಕವಿಯನ್ನು ತಬ್ಬಿಬ್ಬಾಗಿ ಮಾಡುತ್ತಿದ್ದರು. ಇವರ ಗುಟ್ಟು ದೊರೆಗೆ ಗೊತ್ತಾಗುವಂತಿರಲಿಲ್ಲ. ಚದುರ ಕವಿಯು ರಾಘವಾಂಕನಿಗೆ ಸಂಗತಿಯನ್ನು ತಿಳಿಸಿ 'ಆ ಕವಿಗಳನ್ನು ಭಂಗಿಸಿ ಕಾಕತೀಯರ ಆಸ್ಥಾನದಲ್ಲಿ ಸತ್ಕವಿಗಳಿಗೆ ಅವಕಾಶ ಮಾಡಿಕೊಡಬೇಕಾದರೆ ನಿನ್ನಂತಹ ಸಮರ್ಥ ಕವಿಯೇ ತಕ್ಕವನು ಎಂದನು. ರಾಘವಾಂಕನಿಗೂ ತನ್ನ ಮನೆದೇವರಾದ ವೀರಭದ್ರನ ದರ್ಶನ ಪಡೆಯಬೇಕೆಂಬ ಹಂಬಲ. ಆ ಕೂಡಲೇ 'ಆಗಲೀ' ಎಂದು ಪಯಣಕ್ಕೆ ಎಲ್ಲ ಸಿದ್ಧತೆಗಳೂ ಆದುವು. ಹರಿಹರ ಗುರುವಿನ ಆಶೀರ್ವಾದವನ್ನು ಪಡೆದು ಆ ಚತುರ ಕವಿಯನೊಡಗೊಂಡು ಹೊರಟನು.

ಪ್ರತಾಪರುದ್ರನು ರಾಘವಾಂಕನನ್ನು ಸಕಲ ಮರ್ಯಾದೆಗಳೊಡನೆ ಎದುರುಗೊಳ್ಳಬೇಕೆಂದೇ ವೀರೇಶನ ಗುಡಿಗೆ, ತನ್ನ ಪರಿವಾರದೊಡನೆ ಅವನು ಅಲ್ಲಿಗೆ ಬರುವುದಕ್ಕೆ ಮುಂಚೆಯೇ ಆಗಮಿಸಿದ್ದ. ರಾಘವಾಂಕನು ತನ್ನನ್ನು ಎದುರುಗೊಳ್ಳಲು ರುದ್ರಪ್ರತಾಪನು ಪರಿಜನ ಪರಿವಾರದೊಂದಿಗೆ ಶ್ರೀ ವೀರಭದ್ರ ದೇವಸ್ಥಾನದಲ್ಲಿರುವ ನೆಂಬುದನ್ನು ಅರಿಯದೆ ದೇವಸ್ಥಾನದ ಮುಂದೆಯೇ ಕುಳಿತು 'ವೀರೇಶ ಚರಿತೆ' ಎಂಬ 'ಮಿಸಲು ಕವಿತೆ'ಯನ್ನು ರಚಿಸಿದ. ರುದ್ರಪ್ರತಾಪನು ರಾಘವಾಂಕನನ್ನು ಬಹು ಸಂಭ್ರಮದಿಂದ ಮೆರೆಸುತ್ತ ಅರಮನೆಗೆ ಬಿಜಯಂಗೆಯ್ಸಿಕೊಂಡನು. ಆತನನ್ನು ಈ ರೀತಿಯಲ್ಲಿ ಸನ್ಮಾನಿಸುತ್ತಿರುವುದು ಏಕ-ದ್ವಿ-ತ್ರಿಸಂಧಿಗಳ ಹೊಟ್ಟೆಯಲ್ಲಿ ಕಿಚ್ಚನ್ನೆಬ್ಬಿಸಿತ್ತು. ಅವರ ಚೇಷ್ಟೆ ಪ್ರಾರಂಭವಾಯಿತು. 'ಮಿಸಲುಗವಿತೆ'ಯ ನಾಂದಿಯ ಮೊದಲ ಪದ್ಯವನ್ನು

ತಾಳಲಯ ಬದ್ಧವಾಗಿ ಹೇಳಿದ. ಅದನ್ನು ಕೇಳಿ 'ತ್ರಿಸಂಧಿಗಳು, ತಬ್ಬಿಬ್ಬಾದರು. 'ಘನತರದ ಛಂದದೊಳೆ ಪರಿತ ಷಟ್ಪದವಲ್ಲ' ಎನ್ನುತ್ತ ತಡಬಡಿಸಿದರು. ಅದನ್ನು ಗ್ರಹಿಸಿ ಪುನರುಚ್ಚರಿಸುವುದು ಅವರಿಂದ ಸಾಧ್ಯವಾಗಲಿಲ್ಲ. 'ತ್ರಿಸಂಧಿಗಳು' ಕಪಟಿಗಳೆಂಬುದು ರುದ್ರದೇವನಿಗೆ ಮನವರಿಕೆಯಾಯಿತು. ಅಂದೇ ಆ ಗಳಿಗೆಯಲ್ಲಿಯೇ ಅವರು ಮೂವರನ್ನು ಆ ಸ್ಥಾನದಿಂದ ಅಷ್ಟೇ ಅಲ್ಲ ಓರುಗಲ್ಲು ಪಟ್ಟಣದಿಂದಲೂ ಹೊರಹಾಕಿದನು.

ರುದ್ರಪ್ರತಾಪ ವೀರೇಶ ಚರಿತೆಯನ್ನು ಆದ್ಯಂತ ಆಲೈಸಿ ಆನಂದಿಸಿ ಕವಿಯನ್ನೂ, ಕವಿ ಕೃತಿಯನ್ನೂ ಆನೆಯ ಮೇಲೆ ಏರಿಸಿ ನಗರದಲ್ಲೆಲ್ಲ ಮೆರವಣಿಗೆ ಮಾಡಿದ. ರುದ್ರಪ್ರತಾಪನು ವರಕವಿ ರಾಘವಾಂಕನಿಗೂ ತನ್ನ ಆಸ್ಥಾನದಲ್ಲಿದ್ದ ಇತರ ಸತ್ಕವಿಗಳಿಗೂ ಬಹು ವೈಭವದಿಂದ ಕನಕಾಭಿಷೇಕ ಮಾಡಿಸಿ ರಾಘವಾಂಕನಿಗೆ ರತ್ನಾಭರಣಗಳನ್ನೂ, ನವವಸ್ತ್ರಗಳನ್ನೂ ಕೊಟ್ಟು ನಮಸ್ಕರಿಸಿ ಸ್ವೀಕರಿಸಬೇಕೆಂದು ಬೇಡಿಕೊಳ್ಳುತ್ತಾನೆ. ಅದಕ್ಕೆ ರಾಘವಾಂಕನು ಅದನ್ನು ನಿರಾಕರಿಸಿದನು. ಮತ್ತೆ ರುದ್ರದೇವನು ರಾಘವಾಂಕನಲ್ಲಿ "ನೀವೇನೋ ಶಿವನೊಲುಮೆಯನ್ನು ಗಳಿಸಿಕೊಂಡವರು, ಹೊನ್ನುಗಳು ನಿಮಗೆ ಬೇಡ, ಈ ಬಡ ಕವಿಗಳ ಪಾಡೇನು? ನಾವು ಅಭಿಮಾನದಿಂದ ಕೊಟ್ಟ ಹೊನ್ನುಗಳನ್ನು ತೆಗೆದುಕೊಂಡು ತಮ್ಮ ದಾರಿದ್ರ್ಯವನ್ನು ನೀಗಿಕೊಂಡರು ಅವರಿಗೆ ನಿರಾಶೆಯಾಗುವುದಲ್ಲ".

"ಪಾರ್ವತೀರಮಣನ ಭಕ್ತರಿಗೆ ನೀವು ಕೊಡುವ ಕೊಡುಗೆ ಯಾವ ಲೆಕ್ಕ? ಆದುದರಿಂದಲೇ ನೀವು ಐಶ್ವರ್ಯವನ್ನೆಲ್ಲ ನಮ್ಮಂಥವರಿಗೆ ಬಿಟ್ಟು ಭಿಕ್ಷುಕರಾಗುವುದು" ಈ ಮಾತು ರಾಘವಾಂಕನನ್ನು ಕೆರಳಿಸಿತು. ವೀರಭದ್ರನೆದುರಿಗೆ ನಿಂತು ಅತ್ಯುತ್ಕಟ ಭಕ್ತಿಯಿಂದ ಹೊನ್ನಿನ ಮಳೆಗರೆಯಬೇಕೆಂದು ಪ್ರಾರ್ಥಿಸಿದ. ಇವನ ಇಚ್ಛೆಯಂತೆ ಕನಕದ ಮಳೆ ಸುರಿಯಿತು. ದೊರೆ ಬೆಕ್ಕಸ ಬೆರಗಾಗಿ ರಾಘವಾಂಕನಲ್ಲಿ ಕ್ಷಮೆಯನ್ನು ಯಾಚಿಸುತ್ತಾ ಅಡಿಗೆರಗಿದನು.

ರಾಘವಾಂಕ ಅಲ್ಲಿ ಸುರಿದಿದ್ದ ಹೊನ್ನುಗಳನ್ನು ಅಲ್ಲಿ ನೆರೆದವರಿಗೆ ಹಂಚಿ ವೀರಭದ್ರನನ್ನು ಬೀಳ್ಕೊಂಡು ರುದ್ರ ಪ್ರತಾಪನನ್ನು ಹರಸಿ ಅಂದಣವನ್ನೇರಿದನು. ಹಂಪೆಯತ್ತ ಸಾಗಿತ್ತು ಅವನ ಪಯಣ. ಅವನೊಂದಿಗೆ ನೆಚ್ಚಿನ ಗೆಳೆಯರಿದ್ದರು, ಸೇವಕರಿದ್ದರು.

ರಾಘವಾಂಕನನ್ನು ಹೊತ್ತಿದ್ದ ಪಲ್ಲಕ್ಕಿ ಜನಸಂಚಾರವಿಲ್ಲದ ಘೋರಾರಣ್ಯದ ನಡುವೆ ಸಾಗಿತ್ತು. ಇವನ ಆಗಮನವನ್ನೇ ಕಾಯುತ್ತಿದ್ದ ಒಬ್ಬ ಕೊಲೆಗಡುಕ 'ತ್ರಿಸಂಧಿಗ್ರಾಹಿ'ಗಳು ಆತನಿಗೆ ಲಂಚ ಕೊಟ್ಟು, ಜಂಗಮ ವೇಷ ಹಾಕಿ ಕಳಿಸಿಕೊಟ್ಟಿದ್ದರು. ರಾಘವಾಂಕನು ಆ 'ಜಂಗಮನನ್ನು ಕಂಡವನೆ ಪಲ್ಲಕ್ಕಿಯಿಂದ ಇಳಿದು ಅವನಿರುವಲ್ಲಿಗೇ ನಡೆದು ಹೋಗಿ ಅವನಿಗೆ ಶಿರಬಾಗಿ ಶರಣು ಮಾಡುತ್ತಿರಲು, ಅದೇ ಸಮಯವನ್ನು ಕಾಯುತ್ತಿದ್ದ ಕಪಟ ಜಂಗಮ ಈತನ ಬೆನ್ನಿಗೆ ಚೂರಿಯಿಂದ ಇರಿದು ಬಿಟ್ಟ. ಎಲ್ಲವೂ ಮಿಂಚಿನ ವೇಗದಲ್ಲಿ ನಡೆದು ಹೋಗಿತ್ತು. ಸೇವಕರು ರಾಘವಾಂಕನನ್ನು ಹೊತ್ತುಕೊಂಡು ಬಂದು ಪಲ್ಲಕ್ಕಿಯಲ್ಲಿ ಮಲಗಿಸಿದರು.

ರಾಘವಾಂಕನಿಗೆ ಪ್ರಾಣಾಂತಿಕವಾದ ಗಾಯವಾಗಿತ್ತು. ಹಂಪಿಗೆ ಹಿಂತಿರುಗಿ ತನ್ನ ಗುರು ಹರಿಹರದೇವನ ದರ್ಶನ ಮಾಡಬೇಕೆಂಬ ಕಟ್ಟಾಸೆಯಿಂದ ಹೇಗೋ ಜೀವ ಹಿಡಿದುಕೊಂಡಿದ್ದ. ಹಂಪೆಯನ್ನು ಮುಟ್ಟಿ ಶ್ರೀ ಗುರುವಿಗೆ ಶರಣು ಮಾಡಿ ಅತ್ಯಂತ ಆರ್ತಬಾವದಿಂದ ಸ್ತೋತ್ರ ಮಾಡುತ್ತಿದ್ದಂತೆಯೇ ಅವನ ಪ್ರಾಣ ಶ್ರೀ ವಿರೂಪಾಕ್ಷನಲ್ಲಿ ಲೀನಗೊಂಡಿತ್ತು. ಈ ಸುದ್ದಿಯನ್ನು ಕೇಳಿ ಇಡೀ ಪಂಪಾ ನಗರವೇ ಕಣ್ಣೀರಿನಲ್ಲಿ ಕೈತೊಳೆಯಿತು.

ಜನ ಬದುಕಲೆಂದು ಹರಿಶ್ಚಂದ್ರ ಚಾರಿತ್ರ, ಸಿದ್ಧರಾಮಚರಿತ್ರ, ಮೀಸಲುಗವಿತೆ ಎಂಬ ಅಮರ ಕೃತಿಗಳನ್ನು ರಚಿಸಿದ ಕವಿ ವಿರೋಧಿಗಳ ಖಡ್ಗಕ್ಕೆ ಬಲಿಯಾದನು.

ಕೃತಿಗಳು

ರಾಘವಾಂಕನು ಒಟ್ಟು ಆರು ಕೃತಿಗಳನ್ನು ಬರೆದಿದ್ದು, ಅವುಗಳು 'ಹರಿಶ್ಚಂದ್ರ ಚಾರಿತ್ರ್ಯ', 'ಸೋಮನಾಥ ಚಾರಿತ್ರ್ಯ', 'ಸಿದ್ಧರಾಮಚಾರಿತ್ರ್ಯ' ಮತ್ತು 'ವೀರೇಶ ಚರಿತೆ' ದೊರೆತಿದ್ದು 'ಶರಭ ಚಾರಿತ್ರ್ಯ' ಮತ್ತು 'ಹರಿಹರ ಮಹತ್ವ' ಕೃತಿಗಳು ದೊರೆತಿಲ್ಲ. ರಾಘವಾಂಕ ಷಟ್ಪದಿ ಕಾವ್ಯ ಪರಂಪರೆಯನ್ನು ಆರಂಭಿಸಿ ಕನ್ನಡ ಸಾಹಿತ್ಯದಲ್ಲಿ ಹೆಸರಾಂತ ಕವಿಯಾಗಿದ್ದಾನೆ. ಈತನ ಹರಿಶ್ಚಂದ್ರ ಕಾವ್ಯ ಲೌಕಿಕ ಸಂಪ್ರದಾಯದ ಅತ್ಯುತ್ತಮ ಕೃತಿ. ಸಂಸ್ಕೃತದ ಚಂಡಕೌಶಿಕ ನಾಟಕದಿಂದ ಪ್ರೇರಣೆ ಪಡೆದ ಈ ಕೃತಿ ವಿಶೇಷ ಕಲಾವಂತಿಕೆಯಿಂದ ಚಿತ್ರಿತವಾಗಿದೆ. ಈ ಕಾವ್ಯದ ಚಂದ್ರಮತಿಯ ಪುತ್ರವಿಲಾಪ ಕನ್ನಡ ಸಾಹಿತ್ಯದ ರಸಘಟ್ಟಿಗಳಲ್ಲೊಂದು. ಭಾರತೀಯ ಬದುಕಿನ ಮೌಲ್ಯವಾದ ಸತ್ಯಸಂಧತೆಗೆ ಈ ಕಾವ್ಯ ಅತ್ಯುತ್ತಮ ಉದಾಹರಣೆಯಾಗಿದೆ. ರಾಘವಾಂಕ ಜೀವಿಸಿದ್ದ ಕಾಲ ಕನ್ನಡ

ಸಾಹಿತ್ಯ ಚರಿತ್ರೆಯಲ್ಲಿ ಮಹತ್ವದ್ದಾಗಿವೆ. ಅದು ಪೂರ್ವದ ಹಳೆಗನ್ನಡದೊಂದಿಗೆ ಹೊಸಗನ್ನಡ ರೂಪಗಳು ಕಾವ್ಯರಂಗವನ್ನು ಪ್ರವೇಶಿಸಿದ ಕಾಲ.

ಸೋಮನಾಥ ಚರಿತೆ

ಸೋಮನಾಥ ಚರಿತೆಯು 524 ವಾರ್ಧಕ ಷಟ್ಪದಿಗಳನ್ನೊಳಗೊಂಡ ಐದು ಸ್ಥಲಗಳ ಮಧ್ಯಮ ಗಾತ್ರದ ಕಾವ್ಯ. ಇದರ ಸಂಕ್ಷಿಪ್ತ ಕಥಾಸಾರ ಹೀಗಿದೆ.

ಶಿವನ ಸಭೆಗೆ ಬಂದ ನಾರದ ಜೈನರ ಉಪಟಳದಿಂದ ಪುಲಿಗೆರೆಯಲ್ಲಿ ಶಿವಭಕ್ತಿ ನಾಶವಾಗುತ್ತಿರುವುದನ್ನು ತಿಳಿಸಲು ಶಿವನು ಆದಿಗಣನಾಥನನ್ನು ಭೂಲೋಕಕ್ಕೆ ಕಳಿಸುವವನು. ಆತ ಸೌರಾಷ್ಟ್ರದಲ್ಲಿ ಸೋಮನಾಥನ ಭಕ್ತನಾದ ಪಾರದತ್ತಿ ಸೆಟ್ಟಿ ಮತ್ತು ಪುಣ್ಯವತಿ ಎಂಬ ದಂಪತಿಗಳಿಗೆ ಮಗನಾಗಿ ಜನಿಸಿ ಬೆಳೆದು ದೊಡ್ಡವನಾಗಿ ಮದುವೆಯಾಗುವನು. ಮುಂದೆ ತಂದೆಯ ಅಪ್ಪಣೆ ಪಡೆದು ವ್ಯಾಪಾರಕ್ಕೆಂದು ತೆಂಕಣ ನಾಡಿನ ಪುಲಿಗೆರೆಗೆ ಬಂದು ಹೋಜೇಶ್ವರ ದೇವಾಲಯದಲ್ಲಿ ಉಳಿಯುವನು. ಆ ಊರ ಪಾರಿಸ ಸೆಟ್ಟಿಯ ಮಗಳು ಪದ್ಮಾವತಿಯನ್ನು ಕಂಡು ಮೋಹಕ್ಕೆ ಒಳಗಾಗುವನು. ಹೀಗೆ ಒಂದೆರಡು ತಿಂಗಳು ಕಳೆದ ನಂತರ ಅವಳ ತಾಯಿ ತಂದೆಯ ಹೆಸರು, ಕುಲಗೋತ್ರ, ಮೊದಲಾದುವುಗಳನ್ನು ಪ್ರಶ್ನಿಸಿ ಅವಳು ಜೈನಳೆಂದು ತಿಳಿದು ಬಂದಾಗ ಅವಳನ್ನು ಬಿಟ್ಟು ಊರಿಗೆ ಹೋಗಲೆತ್ನಿಸುವನು. ಆಗ ಪದ್ಮಾವತಿಯು ನೊಂದು 'ಕೊಂದು ಹೋಗಲ್ಲದೊಡೆ ಕೊಂಡು ಹೋಗು' ಎನ್ನುವಳು. ಕೊನೆಗೆ ಹೋಜೇಶ್ವರ ಆಚಾರ್ಯರಿಂದ ಶಿವದೀಕ್ಷೆ ಪಡೆದು ಆದಯ್ಯನ ಸತಿಯಾಗುವಳು. ಮುಂದೆ ಆಕೆಯ ಮನೆಯಲ್ಲಿಯೇ ಇರಹತ್ತಿದನು. ಒಂದು ದಿನ ಹಸಿದು ಬಂದ ಜಂಗಮರಿಗೆ ಅನ್ನವಿಡಲು ಸಾಧ್ಯವಾಗದ ತನ್ನ ಇರುವಿಕೆಗೆ ತಾನೇ ಮುನಿದು ಊಟವಿಲ್ಲದೆ ಮುಸುಕೆಳೆದುಕೊಂಡು ಮಲಗಿರಲು ಮಾವನಾದ ಪಾರಿಸ ಸೆಟ್ಟಿಯು ಅವನನ್ನು ಸಮಾಧಾನ ಪಡಿಸಲು ಯತ್ನಿಸುವನು. ಮಾತಿಗೆ ಮಾತು ಬೆಳೆದು ಮಾವನು ಆದಯ್ಯನಿಗೆ ಸಮಾಧಾನಪಡಿಸಲು ಯತ್ನಿಸಿದನು. ಮುಂದೆ ಮಾವನು ಸಿಟ್ಟಿನಿಂದ "ಈ ಮಹಾಮೂರ್ಖ ನಾನು ಮನ್ನಿಸಿದಷ್ಟೂ ಅಹಂಕಾರದ ಮಾತನ್ನೇ ಆಡುತ್ತಿದ್ದಾನೆ. ಬಹುಶಃ ಇವನು ಪುಲಿಗೆರೆಯ ಸೊರಹೊನ್ನೆಯ ಮಹಾ ಬಸದಿಯಲ್ಲಿ ತನ್ನ ದೇವರನ್ನು ಸ್ಥಾಪಿಸುವವರೆಗೆ ಉಣ್ಣನಾದೀತು". ಈ ಉದ್ಧತವಾಕ್ಯ ಆದಯ್ಯನಲ್ಲಿ ಹುಚ್ಚು ಕೋಪವನ್ನೇ ಕೆರಳಿಸಿತು. ಇದನ್ನೇ ಆಹ್ವಾನವೆಂದು ಸ್ವೀಕರಿಸಿ ಆದಯ್ಯನು 30 ದಿನದೊಳಗಾಗಿ ಪುಲಿಗೆರೆಗೆ ಸೌರಾಷ್ಟ್ರ ಸೋಮೇಶ್ವರನನ್ನು ಕರೆತರುವನೆಂದು ಪ್ರತಿಜ್ಞೆ ಮಾಡಿ ಹೊರಡುವನು.

ಮಾರ್ಗದಲ್ಲಿ ಶಿವನು ಪಶುಪತಿ ಯತೀಂದ್ರನ ರೂಪದಲ್ಲಿ ಬಂದು ಆದಯ್ಯನ ಮನಸ್ಸನ್ನು ಪರೀಕ್ಷಿಸಿ, ಆತನಿಗೆ ನಿಜರೂಪವನ್ನು ತೋರಿಸುವನು. ಪುಲಿಗೆರೆಗೆ ಬರುವೆನೆಂದು ಆಶ್ವಾಸವಿತ್ತು, ಅದರಂತೆ ಸುರಹೊನ್ನೆ ಬಸದಿಯಲ್ಲಿ ಕಾಣಿಸಿಕೊಳ್ಳುವನು. ಮರುದಿನ ಜೈನರಿಗೂ ಮತ್ತು ಆದಯ್ಯನಿಗೂ ಘರ್ಷಣೆಯಾಗುವುದು. ಅದರಲ್ಲಿ ಜೈನರು ಸೋತು ಹಿಂಜರಿಯುವರು. ಮುಂದೆ ಸುರಹೊನ್ನೆ ಬಸದಿ ಸೋಮನಾಥ ದೇವಾಲಯವಾಗುತ್ತದೆ. ಆದಯ್ಯನು ಸೌರಾಷ್ಟ್ರದಿಂದ ತನ್ನ ತಂದೆ ತಾಯಿಗಳನ್ನು ಅತ್ತೆ ಮಾವ ಹೆಂಡತಿಯನ್ನು ಪುಲಿಗೆರೆಗೆ ಕರೆಯಿಸಿಕೊಳ್ಳುವನು. ಕೆಲವು ಕಾಲ ಜೀವಿಸಿದ ಮೇಲೆ ಸೋಮನಾಥ ದೇವಾಲಯದ ಬಲದ ಕಂಬದಲ್ಲಿ ಪದ್ಮಾವತಿಯೊಡಗೂಡಿ ಐಕ್ಯನಾಗುವನು.

ಸೋಮನಾಥ' ಚರಿತೆಯ ಕಥೆಗೆ ಹರಿಹರನ ಆದಯ್ಯನ ರಗಳೆಯೇ ಆಧಾರವಾಗಿದೆ. ಆದಯ್ಯನ ವಚನಗಳನ್ನೂ ಅಲ್ಲಲ್ಲಿ ಅನುಸರಿಸಿದಂತಿದೆ. ಕ್ರಾಂತಿಮತಿಯಾದ ಕವಿ ರಾಘವಾಂಕನು ಹರಿಹರನ ರಗಳೆಯನ್ನು ಬಳಸಿದ್ದರೂ ತನ್ನತನವನ್ನು ತೋರಿದ್ದಾನೆ. ಹರಿಹರನ ಕಥಾ ಪರಂಪರೆಗೆ ತನ್ನ ಪ್ರಯೋಗಶೀಲ ಬುದ್ಧಿಯ ಪ್ರತಿಭಟನೆಯನ್ನು ಪ್ರಕಟಿಸಿದ್ದಾನೆ.

ಸೋಮನಾಥ ಚರಿತ್ರೆಯ ಕಥೆಯಲ್ಲಿ ಅಡಗಿದ ಭಾವ ಮತ್ತು ಅಲ್ಲಲ್ಲಿ ಬರುವ ಸಂಗತಿಗಳಿಂದ ರಾಘವಾಂಕನ ಕಾಲದ ಧಾರ್ಮಿಕ ಮತ್ತು ಸಾಮಾಜಿಕ ಸ್ವರೂಪದ ಚಿತ್ರವನ್ನು ಕಾಣಬಹುದಾಗಿದೆ.

ಸಿದ್ಧರಾಮ ಚರಿತೆ

ರಾಘವಾಂಕನ ಕೃತಿ ಪಂಚಕಗಳಲ್ಲಿ ಹರಿಶ್ಚಂದ್ರ ಕಾವ್ಯದ ನಂತರ ಅತ್ಯಂತ ಶ್ರೇಷ್ಠವಾದ ಕೃತಿ ಅವನ ಸಿದ್ಧರಾಮ ಚಾರಿತ್ರ್ಯ. ಒಂಭತ್ತು ಸಂಧಿಗಳಿಂದ ಮತ್ತು ಐನೂರ ಐವತ್ತು ವಾರ್ಧಕ ಷಟ್ಪದಿಗಳಿಂದ ಕೂಡಿದ ಆದರ್ಶ ಪುರಾಣ ಕಾವ್ಯ. ಹೆಸರೇ ಸೂಚಿಸುವಂತೆ ಸೊನ್ನಲಾಪುರದ ಶಿವಯೋಗಿ ಸಿದ್ಧರಾಮನ ಚರಿತ್ರೆಯೇ ಈ ಕಾವ್ಯದ ವಸ್ತು. ಈ ಸಿದ್ಧರಾಮ ಐತಿಹಾಸಿಕ ವ್ಯಕ್ತಿ. ಹನ್ನೆರಡನೆಯ ಶತಮಾನದಲ್ಲಿ ಬದುಕಿ ಬಾಳಿ, ಕೀರ್ತಿವಂತನಾದ ಮಹಾಪುರುಷ

ಕೈಲಾಸದಲ್ಲಿ ಶಿವನ ಸಭೆ ವೈಭವದಿಂದ ನಡೆಯುತ್ತಿದ್ದಾಗ ಆ ಸಭೆಗೆ ಬಂದ ಅದ್ರಿಶಿರ ಊರ್ಧ್ವಶಿರ ಎಂಬ ಗಂಧರ್ವರಿಬ್ಬರು ಈ ಸಭೆಗೆ ಬರುತ್ತಿದ್ದ ಭೃಂಗೀಶ್ವರನನ್ನು ಕಂಡು ನಸುನಕ್ಕಿದರ ಕಾರಣವಾಗಿ ನರಜನ್ಮದೊಳು ಬಂದು ಭವಿಸತಿಪತಿಗಳಾಗಿ

ಹುಟ್ಟಿರೆಂಬ ಶಾಪವನ್ನು ಕೇಳಿ ಆ ಗಂಧರ್ವರು ಭಯಗ್ರಸ್ತರಾದರು. ಅವರು ದಾರಿ ತೋರದೆ ಕಳವಳಿಸಿ ಕಂಗೆಟ್ಟರು. ಅವರು ಆರ್ತರಾಗಿ ಭೃಂಗಿಗೇ ಶರಣಾಗತರಾಗಿ "ತಂದೆ ಕರುಣಿಸು ವಿಶಾಪವನ್" ಎಂದು ಅವರು ಗೋಗರೆಯಲು 'ಎವೆಯಿಕ್ಕದುಸಿರಿಕ್ಕದುಣ್ಣದ ಜಿತೇಂದ್ರಿಯತ್ವವ ತಳೆದ ನಿರ್ಮಾಯನೆನಿಸುವ ಶಿವಜ್ಞಾನಿ ನಿಮಗೆ ಮಗನಾಗಿ ಪುಟ್ಟಲು ವಿಶಾಪವು' ಎಂದು ಮರುಮಾತುಗೊಡುವನು. ಶಿವಕಾರುಣ್ಯ ಪಡೆದು ಆ ಗಂಧರ್ವ ದಂಪತಿಗಳು ಭೂಲೋಕದಲ್ಲಿ ಮೊರಡಿಯ ಮುದ್ದ, ಮತ್ತು ಸುಗ್ಗವ್ವೆಯರಾಗಿ ಕುಗ್ರಾಮವಾದ ಸೊನ್ನಲಿಗೆಯಲ್ಲಿ ಜನಿಸುವರು. ಸಕಾಲದಲ್ಲಿ ಅವರಿಗೆ ಮದುವೆ ಆಯಿತು.

ಹೀಗೆ ಒಂದು ದಿನ ಆ ಗ್ರಾಮದ ಬಳಿಗೆ ಸುಪ್ರಸಿದ್ಧ ಶಿವಯೋಗಿ ರೇವಣಾಚಾರ್ಯ ಬಂದು ಸುಗ್ಗವ್ವೆಯ ಹೊಟ್ಟೆಯನ್ನು ಮುಟ್ಟಿ ಆಕೆಗೆ ನಮಸ್ಕಾರ ಮಾಡಿ ಅಪ್ರತಿಮನಾದ ಶಿವಯೋಗಿಯೊಬ್ಬನು ಮಗನಾಗಿ ಹುಟ್ಟುವನೆಂದು ಭರವಸೆ ಹೇಳಿಗರು.

ಹೀಗೆ ಮೇಘದೊಳಗಿಂದ ತರುಣ ಶಿಶಿಯೊಗೆವಂತೆ ಸಿದ್ಧರಾಮನು ಜನಿಸುವನು. ಗಿರಿಜೆ ಬಂದು ಜೋಗುಳ ಹಾಡಿ, ಸಿದ್ಧರಾಮ ಎಂದು ಹೆಸರಿಟ್ಟು ಹರಸಿ ಹೋಗುತ್ತಾಳೆ, ಹಸುಳೆ ಹೊಸ ಅಂದದಿಂದ ಬೆಳೆದು ಮನೆಯೊಳಗೆ ಮರುಳಂತೆ ಮೂಗುವಟ್ಟಿರ್ಪನು. ಒಂದು ದಿನ ಕಾಡಿನಲ್ಲಿ ದನಗಳನ್ನು ಕಾಯುತ್ತಿರುವಾಗ ಶಿವನು ಅಲ್ಲಿಗೆ ಜಂಗಮ ವೇಷದಿಂದ ಬರುತ್ತಾನೆ. ಸಿದ್ಧರಾಮನು ಶಿವನನ್ನು ಕಂಡು ನಮಸ್ಕರಿಸಿ ಹೊರಳಾಡುತ್ತಿರಲು, ಶಿವನು ನಿಜರೂಪವನ್ನು ತೋರುತ್ತಾನೆ. ಒಂದೇ ಉಸಿರಿನಲ್ಲಿ ಶಿವನನ್ನು ಮುಗ್ಧ ಸಿದ್ಧರಾಮನು ನೀನಾರು? ಮನೆಯೆಲ್ಲಿ? ಹೆಸರಾವುದು? ಆವ ನಾಡವನು? ಎಂದು ಪ್ರಶ್ನಿಸುತ್ತಾನೆ. ಅವನ ಪ್ರಶ್ನೆಗೆ ಉತ್ತರವಾಗಿ ಶಿವನು ತಾನು ಪರ್ವತಾಶ್ರಮದಲ್ಲಿರುವೆನೆಂದೂ, ತನ್ನ ಹೆಸರು ಮಲ್ಲಿನಾಥನೆಂದೂ ಹೇಳಿ ಪ್ರೀತಿಯಿಂದ ಕೊಡುವುದಾದರೆ ಸ್ವಲ್ಪ ಹಂಜಕ್ಕಿಯನ್ನು ತಿನ್ನುವ ಬಯಕೆಯಾಗಿ ಇಲ್ಲಿಗೆ ಬಂದನೆಂದು ಹೇಳಿದನು. ಸಿದ್ಧರಾಮ ಆಗ ಹೊಲದಲ್ಲಿ ಸೊಂಪಾಗಿ ಬೆಳೆದಿದ್ದ ತೆನೆಗಳನ್ನು ಆಯ್ದು ಕಾಳು ಬಿಡಿಸಿ ಶಿವನಿಗೆ ಅರ್ಪಿಸಿದನು. ಹೇಗಾದರೂ ಮಾಡಿ ಅವನನ್ನು ಶ್ರೀಶೈಲಕ್ಕೆ ಬರಮಾಡಿಕೊಳ್ಳುವ ಸಂಕಲ್ಪದಿಂದ ಶಿವನು "ಅಯ್ಯಾ ನನಗೆ ಹಂಜಕ್ಕಿ ಸಾಕು. ಸ್ವಲ್ಪ ಅಂಬಕಳ ಬೇಕು" ಎಂದನು. ಆದರೆ ಸಿದ್ಧರಾಮನ ಬಳಿ ಅಂಬಕಳ ಇರಲಿಲ್ಲ. ಜಂಗಮನ ಅನುಮತಿ ಪಡೆದು ಅದನ್ನು ತರಲು ಮನೆಗೆ ಹೋಗಿ ತಾಯಿಯನ್ನು ಬೇಡಿ ಅಂಬಕಳವನ್ನು ತಂದರೆ ಅಲ್ಲಿ ಮಲ್ಲಿಕಾರ್ಜುನನನ್ನು ಕಾಣದೆ ಮಮ್ಮಲ ಮರುಗುವನು. ಶ್ರೀಶೈಲಕ್ಕೆ ಹೊರಟ ಪರಿಷೆಯೊಡನೆ ಹೋಗಿ ಮಲ್ಲಿಕಾರ್ಜುನನನ್ನು ಕಾಣದೆ

ಸಿದ್ಧರಾಮನು ಹುಡಿಯಲ್ಲಿ ಬಿದ್ದು ಹೊರಳಿ ಅಳುವನು. ಕೊನೆಗೆ ಮಲ್ಲಿಕಾರ್ಜುನನು ಸಿದ್ಧರಾಮನಿಗೆ ಸಂದೇಶವಿತ್ತು ತಾನೇ ಗುರುವಾಗಿ ಆತನ ದೀಕ್ಷೆಯನ್ನು ನೆರವೇರಿಸುವನು. ಸಿದ್ಧರಾಮನಿಗೆ ಮಲ್ಲಿಕಾರ್ಜುನನು ಲಿಂಗರೂಪದಲ್ಲಿ ಬರುವೆನೆಂಬ ಅಭಿವಚನವಿತ್ತು ಆತನನ್ನು ಸೊನ್ನಲಿಗೆಗೆ ಕಳುಹುವನು.

ಅಭಿವಚನದಂತೆ ಮುಂದೆ ಮಲ್ಲಿಕಾರ್ಜುನನು ಲಿಂಗರೂಪದಿಂದ ಸಿದ್ಧರಾಮನಿಗೆ ಪ್ರಾಪ್ತನಾಗುವನು. ಈ ಮಧ್ಯೆ ಒಂದು ದಿನ ಮುದ್ದಗೌಡನು ತನ್ನ ಕುಲದೈವವಾದ ದೂಳಿಮಾಕಾಳನ ಆರಾಧನೆ ಮಾಡಲು ನಿರ್ಧರಿಸಿದ್ದನು. ಸಿದ್ಧರಾಮನಿಗೆ ಇದು ಸರಿಯೆನಿಸಲಿಲ್ಲ. ಬೇಡಿದುದನ್ನು ನೀಡುವ ಮಹಾಶಿವನೇ ಮನೆಗೆ ಬಂದಿರುವಾಗ ಅನ್ಯ ದೈವದ ಗೊಡವೆಯೇಕೆಂದು ಯೋಚಿಸಿ ತಂದೆಯ ಮನೆಯನ್ನು ಬಿಟ್ಟು ಹೊರಟನು. ಶಿವನಿಳಯವನ್ನು ಕಟ್ಟಿಸಿ ಹದಿನಾರು ಲಿಂಗಗಳನ್ನು ಪ್ರತಿಷ್ಠಾಪಿಸುವನು. ಬಳಿಕ ಲೋಕೈಕಗುರು ಸಿದ್ಧರಾಮನು ದಾನಧರ್ಮಮಂ ಮಾಡಲುದ್ಯೋಗಿಸುವನು. ಒಂದು ಸತ್ರಮಂ ಪರಿಕಲ್ಪಿಸಿ ಅಣುಮೊದಲಿರುಹೆ ಪಶುಪಕ್ಷಿಗಳಿಗೆ ಉಚಿತಾಹಾರಮಂ ಕೊಡವಂತಾಗುವನು. ಹೀನರುತ್ತಮರೆಂಬ ಭೇದವಿಲ್ಲದೆ ಕನ್ಯಾದಾನ, ವಸ್ತ್ರದಾನ, ಮೊದಲಾದ ಮಹಾದಾನಗಳನ್ನು ಮಾಡುವನು. ಕಡೆಗೆ ಪಶುಪಕ್ಷಿ ಕ್ರಿಮಿಕೀಟಕಾವಳಿಗಳಱಿತು ನೀರ್ಗುಡಿಯೆ ಭವವಳಿವಂಥ ಕೆರೆಕಟ್ಟಿಸುವನು. ಗಂಗೆ, ತುಂಗಭದ್ರೆ, ಮಲಾಪಹಾರಿಣಿಯರೆಲ್ಲ ಮೂರ್ತಿಮತ್ತಾಗಿ ಬಂದು ಅಲ್ಲಿ ನೆಲಸುವರು.

ಸಿದ್ಧರಾಮನ ಕತೆ ಇಲ್ಲಿಯವರೆಗೆ ತುಂಬಿ ಹರಿಯುವ ತುಂಗಭದ್ರೆಯಂತೆ ಸಾವಧಾನವಾಗಿ ಸಾಗುತ್ತದೆ. ನಂತರ ಕವಿಯು ಒಂದರ ಮೇಲೊಂದರಂತೆ ಸಿದ್ಧರಾಮನ ಅನೇಕ ಪವಾಡಗಳನ್ನು ಪವಣಿಸುತ್ತ ಕಥೆ ಮುಂದುವರಿಸುವನು. ಸಿದ್ಧರಾಮನು ಯೋಗ ಸಮಾಧಿಯಲ್ಲಿದ್ದಾಗ ಜಿಂಕೆಯೊಂದು ಬಂದು ತನ್ನ ಕೊಂಬಿನಿಂದ ಆತನನ್ನು ಮುಟ್ಟಿತು. ಕೂಡಲೇ ಜಿಂಕೆ ದೇವತೆಯ ರೂಪದಳೆದು ತನ್ನ ಕತೆಯನ್ನು ವಿಸ್ತರಿಸುವುದು. ಮತ್ತೊಮ್ಮೆ ಜಿಂಕೆಯೊಂದು ಸೆಗಣಿಯಲ್ಲಿ ಬೀಳಲು ಸಿದ್ಧರಾಮನು ಅದನ್ನು ಕೊಂಬು ಹಿಡಿದು ಮೇಲಕ್ಕೆತ್ತಲು ಅದು ಗಂಧರ್ವನ ಆಕಾರ ತಾಳಿ ತನ್ನ ಕತೆಯನ್ನು ಹೇಳುತ್ತದೆ. ಮೀನದ ಹೊಲಸು ನಾತದಿಂದ ಎಲ್ಲರನ್ನೂ ಮೂಗು ಮುಚ್ಚಿಸಿದವನೊಬ್ಬನು ಬಂದು ಸಿದ್ಧನಿಗೆ ವಂದಿಸಿ ಕೆರೆಯಲ್ಲಿ ಸ್ನಾನ ಮಾಡಿ ಶಾಪ ವಿಮುಕ್ತನಾಗುವನು. ಹೀಗೆ ಸಿದ್ಧರಾಮನು ಅನೇಕ ಪವಾಡಗಳನ್ನು ಎಸಗುವನು. ಕೊನೆಗೆ ಪ್ರಭು ದೇವರು ಸದರ್ಶನವಿತ್ತು, 'ಮಾನವರ ನಡುವಿರಲುಬೇಡ' ಎಂದು ಬೆಸುವರು. ಸಂಘ ಜೀವಿಯಾದ ಸಿದ್ಧರಾಮನು ಅದಕ್ಕೊಪ್ಪದೆ ಈ ಯುಗದ ಜೀವದ 'ಪುಣ್ಯದೊದವಿಂಗೆ ಕೈಕೊಂಡ

ಮೂರ್ತಿಯಾನೆಂದು' ತನ್ನ ಜೀವನದ ಧ್ಯೇಯವನ್ನು ಸ್ಪಷ್ಟಪಡಿಸಿದ. ಲೋಕ ಸಂಗ್ರಹದ ಕಾರ್ಯವನ್ನು ಮುಗಿಸಿ ಕೊನೆಗೆ ಸಿದ್ಧರಾಮನು ತಾನೇ ಕಟ್ಟಿಸಿದ ಕೆರೆಯ ಮಧ್ಯೆ ನಿರ್ಮಿಸಿದ ಗುಹೆಯೊಂದರಲ್ಲಿ ಸೇರಿ ಸಮಾಧಿಸ್ಥನಾದನು.

ವೀರೇಶ ಚರಿತೆ

ವೀರೇಶ ಚರಿತೆಯು ಉದ್ದಂಡ ಷಟ್ಪದಿಯ 127 ಪದ್ಯಗಳನ್ನೊಳಗೊಂಡ ಎರಡು ಸಂಧಿಗಳ ಚಿಕ್ಕ ಕಾವ್ಯ.

ವೀರೇಶ ಚರಿತೆಯ ಸಂಕ್ಷಿಪ್ತ ಕಥಾ ರೂಪ ಹೀಗಿದೆ.

ಮನ್ನಣೆಯ ಮಹಾನುಭಾವರಿಂದ ತುಂಬಿದ ಶಿವಸಭೆಯಲ್ಲಿ ಮರ್ಯಾದೆಯನ್ನು ಪಡೆಯಬೇಕೆಂದು ಬಂದ ದಕ್ಷಬ್ರಹ್ಮನಿಗೆ ಅವಮಾನವಾಗುತ್ತದೆ. ಅಳಿಯನಾದ ಶಿವನಿಂದಲ್ಲದೆ ಮಗಳಾದ ದಾಕ್ಷಾಯಣಿ ಹಾಗೂ ಸಭಾಸದರಿಂದಲೂ ಮರ್ಯಾದೆ ದೊರೆಯಲಿಲ್ಲ. ಇದರಿಂದ ಕೋಪಗೊಂಡ ದಕ್ಷನು ಮಂತ್ರಿ ವಿದಗ್ಧನ ಮಹತ್ವಪೂರ್ಣವಾದ ಮಾತುಗಳಿಗೆ ಕಿವಿಗೊಡದೆ ಅಪಮಾನದ ಸೇಡನ್ನು ತೀರಿಸಿಕೊಳ್ಳಬೇಕೆಂದು ಯಜ್ಞ ಸಿದ್ಧಗೊಳಿಸುವನು. ಬ್ರಹ್ಮ ವಿಷ್ಣು ಮುಂತಾದ ದೇವತೆಗಳನ್ನು ಋಷಿ ಶ್ರೇಷ್ಠರನ್ನೂ ಆಮಂತ್ರಿಸಿ ಆದರಿಸಿದರೆ, ಶಿವನನ್ನು ತಿರಸ್ಕರಿಸಿ ಆಹ್ವಾನಿಸುವುದಿಲ್ಲ. ಶಿವ ಬಂದಿರುವನೆಂದು ಸುಳ್ಳು ಹೇಳಿ ದಧೀಚಿ ಋಷಿಯನ್ನು ಕರೆಯಿಸಿಕೊಳ್ಳುವನು. ಯಜ್ಞ ಮಂಟದಲ್ಲಿ ಶಿವನನ್ನು ಕಾಣದ ದಧೀಚಿ ಋಷಿಯು ಯಾಗ ನಡೆಯದಂತೆ, ದಕ್ಷನ ತಲೆ ಕತ್ತರಿಸಿ ಹೋಗುವಂತೆ ಕೋಪದಿಂದ ಶಾಪ ಕೊಡುವನು. ದಾಕ್ಷಾಯಿಣಿಯು ನಾರದನಿಂದ ತಂದೆಯ ಯಜ್ಞದ ಸಿದ್ಧತೆಯನ್ನು ಕೇಳಿ ಶಿವನಪ್ಪಣೆ ಪಡೆದು ತಾನಾಗಿಯೇ ತಂದೆಯ ಯಜ್ಞಕ್ಕೆ ಹೋಗಿ ಅಮಾನಿತಳಾಗಿ ದೇಹ ನಿಗುತ್ತಾಳೆ. ಈ ವಿಷಯವನ್ನು ತಿಳಿದ ಮುಕ್ಕಣ್ಣನು ಕೋಪಗೊಳ್ಳಲು ಅವನ ಹಣೆಗಣ್ಣಿನಿಂದ ವೀರೇಶನು ಹುಟ್ಟಿ ದಕ್ಷಬ್ರಹ್ಮನ ಯಜ್ಞವನ್ನು ಹಾಳು ಮಾಡುವನು. ಮತ್ತು ಅವನ ತಲೆಯನ್ನು ಕತ್ತರಿಸಿ ಯಜ್ಞ ಕುಂಡದಲ್ಲಿ ಬಿಸಾಡುವನು. ದಕ್ಷಬ್ರಹ್ಮನ ಪತ್ನಿಯ ಪ್ರಾರ್ಥನೆಯಂತೆ ದಕ್ಷನಿಗೆ ಕುರಿತಲೆಯನ್ನು ಅನುಗ್ರಹಿಸಿ ಶಿವನಲ್ಲಿಗೆ ಕರೆತರುವನು. ಇದು ವೀರೇಶ ಚರಿತೆಯ ಸಂಕ್ಷಿಪ್ತ ಕಥಾ ರೂಪ.

ರಾಘವಾಂಕನ 'ಹರಿಶ್ಚಂದ್ರ ಚಾರಿತ್ರ'ದ ಬಗ್ಗೆ ಮುಂದಿನ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ - ಮೂರು

ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು

ಈ ಅಧ್ಯಾಯದಲ್ಲಿ ಹಳೆಗನ್ನಡ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಪ್ರತಿರೋಧ ಯಾವ ಬಗೆಯಲ್ಲಿ ವ್ಯಕ್ತವಾಗಿದೆ ಎಂಬುದನ್ನು ಪರಾಮರ್ಶಿಸಲಾಗಿದೆ. ಮುಖ್ಯವಾಗಿ ಪಂಪ, ರನ್ನ ಹಾಗೂ ಜನ್ನರ ಚಂಪೂ ಕೃತಿಗಳನ್ನು ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು ಇವರ ವಚನಗಳನ್ನು ಹಾಗೂ ಹರಿಹರನ ರಗಳೆಗಳನ್ನು ಈ ದೃಷ್ಟಿಯಿಂದ ಪರಾಮರ್ಶಿಸಿ ಅಧ್ಯಯನ ನಡೆಸಲಾಗಿದೆ.

ಪಂಪ

ಪಂಪ 'ವಿಕ್ರಮಾರ್ಜುನ ವಿಜಯ' ಮತ್ತು 'ಆದಿಪುರಾಣ' ಎಂಬ ಎರಡು ಕೃತಿಗಳನ್ನು ಲೌಕಿಕ ಮತ್ತು ಧಾರ್ಮಿಕ ಎಂಬ ಎರಡು ಉದ್ದೇಶಗಳಿಗಾಗಿ ರಚಿಸಿದ್ದಾನೆ.

ಲೌಕಿಕ ಕೃತಿಯಾದ 'ವಿಕ್ರಮಾರ್ಜುನ ವಿಜಯ'ದಲ್ಲಿ ಪ್ರತಿರೋಧದ ನೆಲೆಯನ್ನು ಪಾತ್ರಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಗಮನಿಸಲಾಗಿದೆ.

ಪಂಪನು ತನ್ನ ಸಮಾಜದ ವಿರೋಧ, ವಿಪರ್ಯಾಸಗಳನ್ನು, ಸಮಸ್ಯೆಗಳನ್ನು ವಿಕ್ರಮಾರ್ಜುನ ವಿಜಯದಲ್ಲಿ ಅಲ್ಲಲ್ಲಿ ಅಭಿವ್ಯಕ್ತಿಸಿದ್ದಾನೆ.

ದ್ರೋಣ ತನ್ನ ಬಾಲ್ಯದ ಗೆಳೆಯ ದ್ರುಪದನನ್ನು ನೋಡಲು ಹೋದಾಗ, ಆ ದೊರೆ ಬಡವ ದ್ರೋಣನನ್ನು ಹೀನಾಯವಾಗಿ ಕಾಣುತ್ತಾನೆ. ದ್ರುಪದ ಉಳ್ಳವರ, ಪ್ರಭುತ್ವದ ಸಂಕೇತವಾದರೆ, ದ್ರೋಣ ಅಸಹಾಯಕರ ಸಂಕೇತವಾಗುತ್ತಾನೆ. ಶ್ರೀಮಂತಿಕೆ - ಬಡತನ, ಆಳುವಾತ, ಆಳಿಸಿಕೊಳ್ಳುವಾತ ಇವರ ಮಧ್ಯದ ಅಂತರವನ್ನು ಪಂಪ ಮನಗಂಡಿದ್ದ. ಪಂಪ ವ್ಯವಸ್ಥೆಯ ಮತ್ತು ಪ್ರಭುತ್ವದ ಭಾಗವಾಗಿ "ಆಳುವ ವರ್ಗದ ಧೋರಣೆ"ಯಿಂದ ಜೀವನವನ್ನು ನೋಡಿದ್ದಾನೆ. ಆದರೆ ಆಳುವ ವರ್ಗದ ಧೋರಣೆಯನ್ನು ಪ್ರತಿಭಟಿಸಿ ತಾನು ಕಟ್ಟ ಬಯಸುವ ಸಮಾಜ ವ್ಯವಸ್ಥೆಯನ್ನು ಸೂಚಿಸಿದ್ದಾನೆ. ಅಲ್ಲದೆ ಕೃತಿಯಲ್ಲಿ ತನ್ನ ಪರಿಸರ ಯಾವುದು? ಎಂಬ ಶೋಧವನ್ನು ಪಂಪ ಮಾಡಿರುವುದು ಸಮಂಜಸವಾಗಿದೆ. ಆದರೆ, ಅವನ ಕಣ್ಣೆದುರಿನಲ್ಲಿದ್ದುದು.

ಧರ್ಮಕ್ಕೆ ಸಂಬಂಧಿಸಿದ, ರಾಜತ್ವಕ್ಕೆ ಸಂಬಂಧಿಸಿದ ಬಹುದೊಡ್ಡ ಸಂಘರ್ಷ. ಇವು ಧಾರ್ಮಿಕ ಮತ್ತು ರಾಜಕೀಯವಾದ ಸಂದರ್ಭದ ನೆಲೆಗಳಾದರೆ ಇದಕ್ಕೊಂದು ಸಾಮಾಜಿಕ ನೆಲೆಯೂ ತಗುಲಿಕೊಂಡಿದೆ. ಅದು ಜಾತಿಯ ಪ್ರಶ್ನೆ. ಸಾಮಾನ್ಯವಾಗಿ ಪಂಪ ಜಾತಿ ಎಂಬ ಗಡಿಯನ್ನು ಮೀರಿ ಹೊರಬಂದ ಕವಿ ಎಂದೂ ಮಾತುಮಾತಿಗೆ ಕುಲ ಕುಲವೆನ್ನುತ್ತಾ ಕುಲವನ್ನೇ ನೆಮ್ಮಿಕೊಂಡು ಕುಲವನ್ನು ಎತ್ತಿ ಹಿಡಿಯುವ ಪ್ರವೃತ್ತಿಯು ಸಮನ್ವಯ ವಿಚಾರಶಾಲಿಯಾದ ಪಂಪನಿಗೆ ಒಗ್ಗುತ್ತಿರಲಿಲ್ಲ. ಗುಣದ ಉತ್ಕರ್ಷಕ್ಕೆ ಕುಲ ಪ್ರತಿಬಂಧಕ ವಾಗಬಾರದೆಂಬುದನ್ನು ಪಂಪ ಆವೇಶಯುತವಾಗಿ ಪ್ರತಿಭಟಿಸಿದ್ದಾನೆ[೧] ಎನ್ನುವ ವಿಚಾರವನ್ನು ವಿಮರ್ಶಕರು ಗುರುತಿಸಿದ್ದಾರೆ. ಇದಲ್ಲದೆ ಮತ, ಧರ್ಮ, ಜಾತಿ ವರ್ಗ ಎಲ್ಲವನ್ನು ಮೀರಿ ನಿಲ್ಲುವ ಕೃತಿ ಇದೆಂದು ಹೇಳಲಾಗುತ್ತದೆ[೨] ಹಾಗೂ ಮನುಜ ಕುಲ ತಾನೊಂದೆ ವಲಂ' ಎಂಬ ಮಾತಿನ ಮೇಲಿಂದ ಪಂಪನನ್ನು ಇತರ ಕವಿಗಳೆಲ್ಲರಿಗಿಂತ ಎತ್ತರದಲ್ಲಿ ನಿಲ್ಲಿಸಲಾಗುತ್ತದೆ. "ಎಲ್ಲ ಜಾತಿಗಳಲ್ಲೂ ಶ್ರೇಷ್ಠವಾದ ಜಾತಿ ಬ್ರಾಹ್ಮಣ ಕುಲ"[೩] ಎಂದು ಹೇಳಿಕೊಳ್ಳುವ ಪಂಪ, ಕ್ಷತ್ರಿಯ, ವೈಶ್ಯ, ಶೂದ್ರರನ್ನು ಗುರುತಿಸುತ್ತ ಅವರವರ ವರ್ಣಾನ್ವಯ ವೃತ್ತಿಗಳನ್ನೂ ಹೇಳುತ್ತಾನೆ. ಅದಲ್ಲದೆ 'ವರ್ಣ ಸಂಕರಮಾಗಲೀಯದೆ ತಮ್ಮ ತಮ್ಮ ಜಾತಿಗಳೊಳ್‌ನಣ್ಪುಮಂ ಕೊಳ್ಕೊಡೆಯುಮಂ ನಿಯೋಜಿಸಿದ'[೪] ಎಂದು ಮುಂದುವರಿಸುತ್ತಾನೆ. ಅನಂತರದಲ್ಲಿ ವಿಪ್ರಸಂತತಿಯ ನಿರ್ಮಾಣದ[೫] ಬಗ್ಗೆ ವಿವರಿಸುತ್ತಾನೆ. ಎಂದರೆ ವರ್ಣ ವ್ಯವಸ್ಥೆಯನ್ನು ಒಪ್ಪಿಕೊಳ್ಳುವುದರ ಜೊತೆಗೆ ವರ್ಣ ಸಂಕರವನ್ನು ನಿಷೇದಿಸುವ ವಿಚಾರಕ್ಕೆ ಬದ್ಧನಾಗಿದ್ದಾನ್ನೆನ್ನುವುದು ಸ್ಪಷ್ಟವಾಗುತ್ತದೆ. ಈ ಎಲ್ಲ ಸಂದರ್ಭವನ್ನು ಗಮನಿಸಿದಾಗ ಇಡೀ ಕಾವ್ಯದ ನಿಲುವಿನ ಸಂದರ್ಭದಿಂದ ಈ ಎಲ್ಲ ಮಾತನ್ನು ವ್ಯಾಖ್ಯಾನಿಸಬಹುದು. ಪೂರ್ವದ ತನ್ನ ಜಾತಿಯ ವಾಸನೆಯ ಅಭಿಮಾನವಾಗಿಯೇನೂ ಇದು ಬಂದಂತೆ ಕಾಣುವುದಿಲ್ಲ. ಹಾಗಾಗುವುದಿದ್ದರೆ ದ್ರೋಣನನ್ನು ಚುಚ್ಚಿ ಮಾತಾಡುವ ಪ್ರಸಂಗವೊಂದನ್ನು ಅವನು ವಿಕ್ರಮಾರ್ಜುನ ವಿಜಯದಲ್ಲಿ ಸೃಷ್ಟಿಸುತ್ತಲೇ ಇರಲಿಲ್ಲ. 'ಅರ್ಜುನನೊಂದಿಗೆ ಸೆಣಸುವ ಸಮಾನ ಜಾತಿಯವನು ಕರ್ಣನಲ್ಲ'ವೆಂದು ದ್ರೋಣ, ಕೃಪರು ಆಡಿದಾಗ

"ಕುಲವೆಂಬುದುಂಟೆ ಬೀರಮೆ
ಕುಲಮಲ್ಲದೆ ಕುಲಮನಿಂತು ಪಿಕ್ಕದಿರಿಂ ನೀ
ಒಲಿದಲ್ಲಿ ಪುಟ್ಟಿ ಬಳೆದಿರೊ
ಕುಲಮಿರ್ದುದೆ ಕೊಡದೊಳಂ ಶರಸ್ತಂಬದೊಳಂ"

ಪ. ಬಾ. ೨-೮೩

ದ್ರೋಣ ಎರಡನೆಯ ಬಾರಿ ಕರ್ಣನ ಕುಲವನ್ನು ಎತ್ತಿ ಅಪಮಾನ ಮಾಡುವ ಸಂದರ್ಭ ಎದುರಾಗುವುದು ಭೀಷ್ಮನಿಗೆ ಪಟ್ಟವನ್ನು ಕಟ್ಟುವ ಸಂದರ್ಭದಲ್ಲಿ. 'ಭೀಷ್ಮ' ಪಾಂಡವರನ್ನು ಸಾಕಿರುವ ಮಮತೆಯಿಂದ ಅವರಿವರ ಮಧ್ಯೆ ಯುದ್ಧ ಸಾಧ್ಯವಿಲ್ಲ, ಜಯಬೇಕಾದರೆ ನನಗೆ ಪಟ್ಟಕಟ್ಟು ಎಂದು ಕರ್ಣನು ಕೇಳುವ ಸಂದರ್ಭ ಅದು. ದ್ರೋಣ ಕುಪಿತಗೊಂಡು "ನಾಲಗೆ ಕುಲಮಂ ತುಬ್ಬುವವೊಲುಱದೆ ನೀಂ ಕೆಡೆ ನುಡಿವೈ" ಎನ್ನುತ್ತಾನೆ. ಹಿಂದೆ ಇಂಥದೇ ಸಂದರ್ಭ ಎದುರಾದಾಗ ದುರ್ಯೋಧನನ ಮೂಲಕ ಪಂಪ ಉತ್ತರ ನೀಡಿ ದ್ರೋಣನ ಬಾಯಿ ಮುಚ್ಚಿಸಿದ್ದ. ಈಗ ಕರ್ಣನ ಮೂಲಕವೇ ಮಾತಾಡುತ್ತಾನೆ.

ಕುಲಮನೆ ಮುನ್ನಮುಗ್ಗಡಿಪಿರೇಂಗಳ ನಿಮ್ಮ ಕುಲಂಗಳಾಂತು ಮಾ
ರ್ಮಲೆವನನಟ್ಟಿ ತಿಂಬುವೆ ಕುಲಂ ಕುಲಮಲ್ತು ಚಲಂ ಕುಲಂ ಗುಣಂ
ಕುಲಮಭಿಮಾನವೊಂದೆ ಕುಲಮಣ್ಮು ಕುಲಂ ಬಗೆವಾಗಳೀಗಳೀ
ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟು ಮಾಡುಗುಂ

ಪು.ಭಾ. ೧೦-೧೨

ಪರಾಕ್ರಮ, ಗುಣ, ಅಭಿಮಾನ ಮುಂತಾದ ನೆಲೆಗಳಲ್ಲಿ ವಿಶ್ಲೇಷಿಸುತ್ತ ನಿಮ್ಮ ಕುಲಗಳೇನು ವೈರಿಗಳನ್ನು ಸದೆಬಡಿಯುತ್ತವೆಯೇ ಎಂದೆನ್ನುತ್ತಾನೆ. ಶಲ್ಯ ಸಾರಥಿಯಾಗುವ ಸಂದರ್ಭದಲ್ಲಿಯೂ ಇಂಥ'ದೇ ಸಂಘರ್ಷವನ್ನು ಪಂಪ ಕಟ್ಟಿಕೊಡುತ್ತಾನೆ.

ಜಾತಿಯ ನೆಲೆಯಲ್ಲಿ ನಡೆಯುವ ಈ ಸಂಘರ್ಷಕ್ಕೆ ಕಾರಣವನ್ನು ಅರವಿಂದ ಮಾಲಗತ್ತಿ ಹೀಗೆ ಗುರುತಿಸುತ್ತಾರೆ. "ಪಂಪ ಜಾತಿಯ ನೆಲೆಯಲ್ಲಿಯೇ ನಿಂತು ಜಾತಿಯನ್ನು ಅರ್ಥೈಸಿಕೊಂಡು ಪ್ರತಿಭಟಿಸುತ್ತಾನೆ. ಹೀಗೆ ಪ್ರತಿಭಟಿಸಲು ಬ್ರಾಹ್ಮಣಕುಲ ಎನ್ನುವ ವರ್ಣ ಹಾಗೂ ಜೈನಧರ್ಮೀಯರ ನಡುವೆ ನಡೆದ ಸಂಘರ್ಷ ಕಾರಣವಾಗಿದೆಯೇ ವಿನಾ ಒಟ್ಟು ವರ್ಣ ವ್ಯವಸ್ಥೆಯ ಧರ್ಮದೊಂದಿಗಿನ ಸಂಘರ್ಷ ಅಲ್ಲ"[೬].

ಆದರೆ ಇಡೀ ಕೃತಿಯ ಸಂದರ್ಭದಲ್ಲಿ ಏರ್ಪಟ್ಟಿರುವ ಸಂಘರ್ಷ ಮತ್ತು ಕೃತಿಯು ಏನನ್ನು ಹೇಳುತ್ತದೆಂಬುದರ ಆಚೆಗೆ ನಿಂತು ನೋಡುವ ಸೀಮಿತ ದೃಷ್ಟಿಯಿಂದ ಈ ಅಭಿಪ್ರಾಯಗಳು ಮೂಡಿವೆ. ಹಾಗೆಯೇ ಪಂಪನಲ್ಲಿರುವ ಸಂಘರ್ಷವನ್ನು ಜಿ.ಎಚ್. ನಾಯಕರು "ಪಂಪನ ಕಾವ್ಯಗಳಲ್ಲಿ ಪರಸ್ಪರ ವಿರುದ್ಧ ಧೋರಣೆಯ ಮಾತುಗಳಿದ್ದು, ಕವಿ

ತನ್ನನ್ನು ಸೃಜನಶೀಲ ಪ್ರಕ್ರಿಯೆಯ ದಿವ್ಯಕ್ಕೆ ಸಮಗ್ರವಾಗಿ ಒಡ್ಡಿಕೊಂಡಿಲ್ಲ"[೭] ಎಂದು ಆರೋಪಿಸುವ ಮಾತುಗಳು ಕೂಡ ಪಂಪನ ಸಾಮಾಜಿಕವಾದ, ರಾಜಕೀಯವಾದ, ಧರ್ಮ ಸಂಕಟದ ಸನ್ನಿವೇಶಗಳನ್ನು ಗ್ರಹಿಸದೇ ಆಡಿರುವ ಮಾತುಗಳಾಗಿ ಬಿಡುತ್ತವೆ.

ಕೌರವನ ಸಭೆಯಲ್ಲಿ ದ್ರೌಪದಿಯು ಮೈಮೇಲಿನ ವಸ್ತ್ರಾಪಹರಣದಂಥ ಅವಮಾನದಿಂದ ಇಡೀ ಮಾನವ ಲೋಕದ ಸಹಾನುಭೂತಿಗೆ ಪಾತ್ರಳಾಗುತ್ತಾಳೆ. ಆದರೆ ಇಂಥ ಅಖಂಡ ಸಹಾನುಭೂತಿಗೆ ಪಾತ್ರಳಾದ ಅದೇ ದ್ರೌಪದಿಯ ಅವಳ ಜಾತಿ ಅಥವಾ ವರ್ಣದ ಪ್ರಶ್ನೆ ಬಂದಾಗ ಮಾತ್ರ ಅವಳ ಹೆಣ್ತನ ಮಾತ್ರವಲ್ಲದೆ, ಅವಳ ಮಾನವೀಯ ವ್ಯಕ್ತಿತ್ವವೂ ನಿಃಶೇಷವಾಗಿ ಕೇವಲ ಅಪ್ರಸ್ತುತ ಹೆಣ್ಣಾಗಿ ಅವಳು ನಿಂತು ಬಿಡುತ್ತಾಳೆ. ಏಕೆಂದರೆ ಅವಳ ಸ್ವಯಂವರಕ್ಕೆ ಮುಂದಾದ ಕರ್ಣನನ್ನು ಕೊನೆಯ ಕ್ಷಣದಲ್ಲಿ ಅವನು ನೀಚ ಕುಲದವನಾದುದರಿಂದ ತಾನು ಅವನನ್ನು ಮದುವೆಯಾಗುವುದಿಲ್ಲ ಎಂಬುದಾಗಿ ಪ್ರಕಟಿಸಿ ಆ ತುಂಬಿದ ಸಭೆಯಲ್ಲಿ ಕರ್ಣನನ್ನು ದ್ರೌಪದಿ ಅವಮಾನಿಸಿದ್ದು ಅವಳ ವ್ಯಕ್ತಿತ್ವದ ನೆಲೆಯಲ್ಲಿ ಎಸಗಲ್ಪಟ್ಟ ಕುಲದಲ್ಲಿರುವ ತಾತ್ಸರ ಭಾವನೆ. ಅಂತಹ ಸಭೆಯಲ್ಲಿ ಅವಮಾನಿತವಾದ ಕರ್ಣನ ಮೇಲಿನ ಜಾತಿಯ ಅವಮಾನಕ್ಕಾಗಲೀ, ದ್ರೌಪದಿಯ ಮೇಲಿನ ಹೆಣ್ತನದ ಮೇಲಿನ ಅವಮಾನ ಸ್ಥಿತಿಗೆ ಯಾರನ್ನೂ ದೂರುವಂತಿಲ್ಲ ಬದಲಾಗಿ ಆ ಸಾಮಾಜಿಕ ವಿಷಮತೆಯನ್ನು ರಾಘವಾಂಕ ಚಿತ್ರಿಸಿದ್ದಾನೆ.

ದ್ರುಪದ - ದ್ರೋಣರ ಸಂದರ್ಭದಲ್ಲಿ ಶ್ರೀಮಂತ ಬಡವರ ಸಮಸ್ಯೆಯ ಚಿತ್ರಣವಿದೆ. ದ್ರೋಣ, ಅಶ್ವತ್ಥಾಮ, ದ್ರೌಪದಿ ಮತ್ತು ಕರ್ಣರ ಸಂದರ್ಭಗಳಲ್ಲಿ ಉತ್ತಮ ಹೀನ ಕುಲಭೇದ ಸಮಸ್ಯೆಯ ಸೂಕ್ಷ್ಮ ವಿಶ್ಲೇಷಣೆಯಿದೆ. ಸಾಮಾಜಿಕ ಅಸಮಾನತೆಯ ಮೂಲ ಕಾರಣಗಳನ್ನು ಪಂಪ ಅರಿತಿದ್ದವನಾಗಿದ್ದ. ಅದನ್ನು ತೀವ್ರವಾಗಿ ಅನುಭವಿಸಿದ್ದನು ಮತ್ತು ಅವನು ಆ ಅಸಮಾನತೆಯ ನಿವಾರಣೆಗೆ ಒಂದು ರೀತಿಯಲ್ಲಿ ಪರಿಹಾರಗಳನ್ನು ಸೂಚಿಸಿದ್ದಾನೆ. ಅದರಲ್ಲಿ ಒಂದು ಕೆಳವರ್ಗದವರನ್ನು ಆರ್ಥಿಕವಾಗಿ ಉತ್ತಮಪಡಿಸುವುದು ಮತ್ತು ಅವರಿಗೆ ಅಧಿಕಾರಗಳನ್ನು ಕೊಡುವುದು (ಕರ್ಣನನ್ನು 'ಕುಲಜ'ನನ್ನಾಗಿ ಮಾಡುತ್ತೇನೆಂದು ದುರ್ಯೋಧನ ಅವನಿಗೆ ಅಂಗರಾಜ್ಯಾಧಿಪತ್ಯವನ್ನು ಕೊಡುತ್ತಾನೆ.) ಹಣ, ಅಧಿಕಾರಗಳು ಜಾತಿಯನ್ನು ಮೇಲೆತ್ತದಿದ್ದರೂ, ಅವು ವ್ಯಕ್ತಿಯನ್ನಾದರೂ ಸಾಮಾಜಿಕವಾಗಿ ಉನ್ನತನನ್ನಾಗಿ ಮಾಡುತ್ತದೆ. ಅದರೂ ಜಾತಿ ಎನ್ನುವುದು ಭಾರತೀಯ ರಕ್ತಕ್ಕೆ ಅಂಟಿ ಬಂದ ರೋಗ. ವ್ಯಕ್ತಿ ಆರ್ಥಿಕನಾಗಿ ಮೇಲಿದ್ದರೂ, ಜನ ಅವರ ಜಾತಿಯನ್ನು ಎತ್ತಿ ಆಡುವುದಕ್ಕಾಗಿ ಕಾಯುತ್ತಿರುತ್ತಾರೆ. ಇಂಥ ಸಂದರ್ಭಗಳಲ್ಲಿ ವ್ಯಕ್ತಿ ತೀವ್ರವಾಗಿ ಪ್ರತಿಭಟಿಸಬೇಕು (ಕರ್ಣನಂತೆ). ಇಲ್ಲಿ ಮೂಲ

ಭಾರತದ ಕತೆಯನ್ನು ಪಂಪ ಒಪ್ಪಿಕೊಂಡಿದ್ದರೂ, ಕುಲದ ಬಗ್ಗೆ ಅವನು ಕರ್ಣನ ಬಾಯಲ್ಲಿ ಆಡಿಸಿರುವ ಮಾತುಗಳು ಅವನ ಸ್ವಂತ ಸಂವೇದನೆಯೇ ಆಗಿವೆಯೆಂಬುದನ್ನು ತಿಳಿಯಬಹುದು.

ಪಂಪ ಭಾರತವು ಪ್ರಗತಿಪರ ನಿಲುವುಗಳಿಗೆ ಹೆಚ್ಚು ಒತ್ತಾಸೆಯನ್ನು ನೀಡುವ ಧ್ವನಿಯೊಂದು ಪಂಪ ಭಾರತದುದ್ದಕ್ಕೂ ಧ್ವನಿಸುತ್ತದೆ. ಇದಕ್ಕೆ ಕಿರೀಟವಿಟ್ಟಂತೆ "ನೆನೆಯದಿರಣ್ಣ ಭಾರತದೊಳಿಂ........., ನೆನೆವೊಡೆ ಕರ್ಣನಂ ನೆನೆ" ಎನ್ನುವ ಮಾತನ್ನು, ಭರತವಾಕ್ಯದಂತಿರುವ "ಕರ್ಣರಸಾಯನಮಲ್ತೆ ಭಾರತಂ" ಎಂಬ ಮಾತನ್ನೂ ಗಮನಿಸಬೇಕು.

ಪಂಪನ ಘೋಷವಾಕ್ಯ "ಮನುಷ್ಯ ಜಾತಿ ತಾನೊಂದೆ ವಲಂ" ಹಾಗೂ ಭರತವಾಕ್ಯ "ಕರ್ಣರಸಾಯನವಾದ ಭಾರತ" ಈ ಎರಡರ ನಡುವೆಯೇ ಪಂಪನ ವ್ಯಕ್ತಿತ್ವ ಮತ್ತು ಆ ಕಾಲದ ಸಾಮಾಜಿಕ ಸಂಘರ್ಷ ಇದೆಯೆಂಬುದನ್ನು ಗಮನಿಸಬಹುದು. ಕಲೆಯನ್ನು ಮೌಲ್ಯವನ್ನು ಸಮನಾಗಿ ಹದವರಿಯುವಂತೆ ರೂಪಿಸುವ ಕೆಲಸ ತುಂಬಾ ಕಷ್ಟವೆ.

ಎಂ.ಎಂ. ಕಲಬುರ್ಗಿ ಅವರ ಅಭಿಪ್ರಾಯವೊಂದು ಹೀಗಿದೆ: "ಸಾಹಿತ್ಯ ಒಂದು ಕಡೆ ಕಲೆಯನ್ನು ಪ್ರತಿನಿಧಿಸಬೇಕು, ಇನ್ನೊಂದು ಕಡೆ ಮೌಲ್ಯವನ್ನು ಪ್ರತಿಪಾದಿಸಬೇಕು. ಈ ಜವಾಬ್ದಾರಿಯಿಂದ ಸ್ವಲ್ಪ ತಪ್ಪಿದರೆ ಸಾಕು ಅದು ಕಲೆಯ ಹೆಸರಿನಲ್ಲಿ ಗಗನಕುಸುಮವಾಗುವ ಮೌಲ್ಯದ ಹೆಸರಿನಲ್ಲಿ ನೀತಿ ಬೋಧೆಯಾಗುವ ಅಪಾಯವಿದೆ."[೮]

ಪಂಪ ಈ ಬಿಕ್ಕಟ್ಟಿನಿಂದ ಪಾರಾಗಲು ನಡೆಸಿದ ಯತ್ನ ಮತ್ತು ಫಲ ಎರಡೂ ಸಮಾದಾನವನ್ನುಂಟು ಮಾಡುವಂತಿದೆ.

ಪಂಪ ಹಾಕಿಕೊಟ್ಟ ಮಾರ್ಗವೇ ಮುಂದಿನ ಚಂಪೂ ಪರಂಪರೆಯ ಕವಿಗಳಿಗೆ ಮಾದರಿಯಾಯಿತೆಂಬುದನ್ನು ವಿಮರ್ಶಕರು ಹೇಳುತ್ತಲೇ ಬಂದಿದ್ದಾರೆ. ಇದು ಕಾವ್ಯ ರೂಪಣದ ಪರಿಕರಕ್ಕೆ ಸಂಬಂಧಪಟ್ಟ ಮಾತು ಹೇಗೊ ಹಾಗೆಯೇ ಮನೋಧರ್ಮಕ್ಕೂ ಪ್ರೇರಣೆಯಾದ ಜೈನಧರ್ಮದ ಸಾಮಾಜಿಕ ಶ್ರೇಣೀಕರಣದ ಪರಿಕಲ್ಪನೆಯೊಂದನ್ನು ನೋಡಬಹುದು. ಜೈನಧರ್ಮಕ್ಕೆ ವೈದಿಕಧರ್ಮ ಮಾತ್ರ ಪ್ರತಿಸ್ಪರ್ಧಿಯಂತೆ ತೋರುತ್ತದೆ. ವೈದಿಕದ ವಿರುದ್ಧ ಜೈನಧರ್ಮ ಉಗ್ರ ವಿರೋಧವನ್ನು ವ್ಯಕ್ತಪಡಿಸುತ್ತದೆ. ಆದರೆ ಇದೇ ವೈದಿಕಧರ್ಮ ಒಪ್ಪಿಕೊಂಡಿರುವ ವರ್ಣವ್ಯವಸ್ಥೆಯನ್ನು ಜೈನಧರ್ಮ ಒಪ್ಪಿಕೊಂಡುಬಿಟ್ಟಿದೆ.

ಮತಧರ್ಮಗಳ ಸಂಪ್ರದಾಯುಗಳನ್ನು ವಿರೋಧಿಸುವ ಪರಂಪರೆಯೊಂದು ಆರಂಭದಿಂದಲೂ ಬೆಳೆದು ಬಂದಿದೆ. ಆದರೆ ಇವರು ವಿರೋಧಿಸುತ್ತಾ ಬಂದದ್ದು ವರ್ಣಾವಲಂಬಿತವಾದ ಧರ್ಮವನ್ನು ಅಲ್ಲ. ಹಾಗಾಗಿ ಮಧ್ಯಕಾಲೀನ ಸಾಹಿತ್ಯ ಮತ್ತು ಚಳವಳಿಗಳು ಪ್ರಬಲವಾಗುವವರೆಗೂ ವೈದಿಕ ಧರ್ಮ ವಿರೋಧ ಮಾತ್ರ ಕಾಣಿಸುತ್ತದೆಯೇ ಹೊರತು ವರ್ಣಾವಲಂಬಿತ ಧರ್ಮ ವಿರೋಧವಲ್ಲ. ರನ್ನ, ಪೊನ್ನ, ಈ ಕವಿಗಳಲ್ಲೆಲ್ಲ ಇದೇ ಅಂಶವನ್ನು ಕಾಣಬಹುದು.

ರನ್ನ

"ರತ್ನಕವಿ" ಎಂದು ಕರೆಯಿಸಿಕೊಳ್ಳುವ ರನ್ನ ಕವಿ ಆಜಿತಪರಾಣ, ಗದಾಯುದ್ಧ ಪರಶುರಾಮಚರಿತ, ಚಕ್ರೇಶ್ವರಚರಿತ, ಅಜಿತತೀರ್ಥೇಶ್ವರ ಚರಿತ ಎಂಬ ಕೃತಿಗಳನ್ನು ಬರೆದಿದ್ದಾನೆ. ಮೊದಲು ಗುರುತಿಸುವ ಎರಡು ಕೃತಿಗಳು ಲಭ್ಯವಿರುವುದರಿಂದ ಆ ಕೃತಿಗಳನ್ನು ಆಕಾರವಾಗಿಟ್ಟುಕೊಂಡು ಪ್ರತಿರೋಧದ ನೆಲೆಗಳನ್ನು ಚರ್ಚಿಸಲಾಗಿದೆ.

ರನ್ನ ಕವಿ ತನ್ನ ಜಾತಿಯನ್ನು "ಬಳೆಗಾರ ಕುಲ" (೧೧-೪೫) ಎಂದು ಹೇಳಿಕೊಂಡಿದ್ದಾನೆ.[೬] ಇದಲ್ಲದೆ ಅಜಿತಪುರಾಣದಲ್ಲಿ.

"ತ್ರಿಜಗದೊಳಾದಿಪುರಾಣಮುಮಜಿತಪುರಾಣಮುಮನೆಸೆಯೆ
ಪೇಳ್ದುದಗಿಂದಂ ದ್ವಿಜವಂಶಧ್ವಜಂ ವೈಶವಂಶಧ್ವಜರೆನ್ನ
ದರೊಳರೆ ಪಂಪನುಂ ರ್ನ್ನನುಮಂ"

(ಅ. ಪು. (೧೧-೧೫)

ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ ಪಂಪ 'ದ್ವಿಜ ವಂಶಕ್ಕೆ' ಸಂಬಂಧಿಸಿದಂತೆ ತಾನು ವೈಶ್ಯವಂಶಕ್ಕೆ ಸಂದಂಧಿಸಿದವನೆಂದು ಹೇಳಿಕೊಳ್ಳುವುದರಿಂದ ಪಂಪ ದ್ವಿಜನಿದ್ದು ಜೈನಧರ್ಮಕ್ಕೆ ಬಂದಂತೆ ತಾನು ಬಳೆಗಾರನಾಗಿದ್ದು ಜೈನಧರ್ಮಕ್ಕೆ ಬಂದುದನ್ನು ಹೇಳಿಕೊಳ್ಳುತ್ತಿರುವುದರಿಂದ, ವೈಶ್ಯರಲ್ಲಿ 'ಬಳೆಗಾರ' ಕುಲವೇನು ದೊಡ್ಡದಲ್ಲ, ಅದು ತುಂಬಾ ಕೆಳಸ್ತರದ್ದು, ಕೆಳಸ್ತರದಿಂದ ಬಂದ ರನ್ನನ ಕೃತಿಗಳನ್ನು ನೋಡಿದರೆ, ಬ್ರಾಹ್ಮಣರಿಗಿಂತ ತಾನೇನು ಕಡಿಮೆಯಲ್ಲವೆಂದು ಹೇಳುವ ಮನೋಭಾವ ಸ್ಪಷ್ಟವಾಗುತ್ತದೆ. ಇದಲ್ಲದೆ ರನ್ನನ ಸಾಮಾಜಿಕ ಸಂದರ್ಭದಲ್ಲಿ ತನಗೆ ಸಮಕಟ್ಟುವ ಕವಿಗಳು (ವೈದಿಕ) ಇಲ್ಲದ್ದರಿಂದ ಇದ್ದರೂ ತನ್ನ ಸಮವಲ್ಲವೆಂದು ಭಾವಿಸಿ ಹಿರಿಯ ಕವಿಗಳನ್ನು ಗೌರವಿಸಿ ಸ್ಮರಿಸುತ್ತ ಪುನಃ ಪುನಃ ತನ್ನ ಬಗ್ಗೆ ತನ್ನ ಕಾವ್ಯದ ಬಗ್ಗೆ ಆತ್ಮವಿಶ್ವಾಸ ತಳೆದು ಮಾತನಾಡುವಂತೆ ಮಾಡಿದೆ.

ರನ್ನನೂ ದ್ರೋಣ ದುರ್ಯೋಧನರನ್ನು ಮುಖಾಮುಖಿಯಾಗಿಸಿಯೇ ವೈದಿಕ ಧರ್ಮದ ನಿಂದನೆ ಮಾಡಿಸುತ್ತಾನೆ. ದ್ರೋಣನು ಧನುರ್ವಿದ್ಯೆಯಲ್ಲಿ ಪಾರಂಗತನಾದರೂ ಪ್ರಾಯೋಗಿಕವಾಗಿ ಅಸಮರ್ಥನೆಂಬುದು ರನ್ನನ ವಾದ. ರನ್ನನ ದುರ್ಯೋಧನ 'ಕಮ್ಮಱೆ ಯೋಜನೆನಿಸಿದಂ ಬಿಲ್ಲೋಜಂ' (೨-೧೩) ಎಂದು. ಚುಚ್ಚು ನುಡಿಯುವ ದುರ್ಯೋದನ ಇಷ್ಟಕ್ಕೆ ಪೂರ್ಣವಿರಾಮ ಹಾಕದೆ

ಈಯಱಿಯಲ್ ಶರಣ್ಬುಗೆ |
ಕಾಯಲ್ ಕ್ಷತ್ರಿಯರೆ ಬಲ್ಲರಬ್ರಾಹ್ಮಣ್ಯಂ||
ಭೋಯೆನಲುಂ ಬ್ರಾಹ್ಮಣರ ವಿ|
ಧಾಯೆನಲುಂ ಬಲ್ಲರಿಱಿಯಲವರೆಂತಱಿವರ್||

(ಗದಾಯುದ್ಧ ೨-೧೯)

ಚಾತುರ್ವರ್ಣ್ಯದೊಳಂ ದ್ವಿಜ |
ಜಾತಿಗೆ ದರ್ಭಾಧಿಕಾರರಮಲ್ಲದೆ ವಂಶೋ ||
ದ್ಭೂತ ನೃಪೋಚಿತಮರಿಯಂ
ಘಾತಿಪ ಶಸ್ತ್ರಾಸ್ತ್ರಮ ವರ್ಗೆ ಜಾತಿವಿರುದ್ಧಂ

(ಗದಾಯುದ್ಧ ೨-೧೭)

ಹೀಗೆ ಬ್ರಾಹ್ಮಣರಲ್ಲಿರುವ ಕ್ಷಾತ್ರಗುಣ ಯಾವ ಮಟ್ಟದ್ದು? ಎನ್ನುವುದನ್ನು 'ಅಯ್ಯೋ ಅಯ್ಯಾ ಎಂದು ಲೋಪಗುಟ್ಟಲು ಮಾತ್ರ ಯೋಗ್ಯರು ಕ್ಷತ್ರಿಯರಂತೆ ಕಾಯಲು ಕೊಲ್ಲಲು ಸಮರ್ಥರಲ್ಲ' ಎನ್ನುವ ವಿಚಾರವನ್ನು ದುರ್ಯೋಧನನ ಬಾಯಿಂದ ಹೇಳಿಸುವ ರನ್ನ ಇಷ್ಟಕ್ಕೆ ನಿಲ್ಲಿಸದೆ, ಅವರಲ್ಲಿಯ ಕ್ಷಾತ್ರತ್ವದ ಸತ್ವವನ್ನು ಅಳೆಯಲು ದ್ರೋಣನ ಮೈರಕ್ತದ ರುಚಿಯವರೆಗೂ ಬರುತ್ತಾನೆ. ರಣರಂಗದಲ್ಲಿಯ ಪಿಶಾಚಿಗಳು ಕ್ಷಾತ್ರ ತೇಜಸ್ವಿನಿಂದ ಕೂಡಿದ ದುರ್ಯೋಧನನ ರಕ್ತವನ್ನು ಕುಡಿಯಲು ಆಸೆ ಪಡುತ್ತವೆಯೇ ವಿನಃ ಬ್ರಾಹ್ಮಣನಾದ ದ್ರೋಣನ ರಕ್ತವನ್ನಲ್ಲ. ಏಕೆಂದರೆ ('ಗುರುವಿನ ನೆತ್ತರಂ ಕುಡಿವೆನಪ್ಪೊಡವಂ ದ್ವಿಜವಂಶಜಂ') 'ಬ್ರಾಹ್ಮಣನಾದ ದ್ರೋಣನ ರಕ್ತ ನನಗೆ ಹಿಡಿಸದು'.

ಈ ಮೇಲಿನ ಸಂದರ್ಭದಲ್ಲಿಯ ಮಾತುಗಳ ತಾತ್ಪರ್ಯವನ್ನು ಗಮನಿಸಿದರೆ. ಬ್ರಾಹ್ಮಣರ ವಿಚಾರವಾಗಿ ತನ್ನ ಹೊಟ್ಟೆಯಲ್ಲಿ ನಿಗಿ ನಿಗಿ ಎನ್ನುವ ಬೆಂಕಿಯ ಕೆಂಡವನ್ನೇ ಇಟ್ಟುಕೊಂಡು ಪಾತ್ರಗಳ ಮೂಲಕ ಹಾಗೆ ಹೇಳಿಸುತ್ತಿದ್ದಾನೆ ಎನಿಸುವುದು ಸಹಜ.

ಮೇಲಿನ ಕೆಲ ಬಿಡಿ ಪದ್ಯಗಳ ಕುರಿತು ಚರ್ಚಿಸಿದವರೂ 'ರನ್ನ ದ್ರೋಣರ ನೆಪದಲ್ಲಿ ಬ್ರಾಹ್ಮಣರ ಮೇಲೆ ಹರಿಹಾಯುತ್ತಾನೆ.[೧೦] ಎಂದು ಅಭಿಪ್ರಾಯಪಟ್ಟಿದ್ದಾರೆ.

ರನ್ನನ ಸಮಗ್ರ ಕಾವ್ಯದ ಹಿನ್ನೆಲೆಯಲ್ಲಿ ಈ ಮೇಲಿನ ಮಾತುಗಳನ್ನು ಅವಲೋಕಿಸಿದರೆ ಕ್ಷಾತ್ರಯುಗದಲ್ಲಿ ರೂಪುಗೊಂಡ ಈ ರಾಜನೀತಿ, ಯುದ್ಧನೀತಿ ಮತ್ತು ವರ್ಣನೀತಿಗೆ ಬದ್ಧವಾಗಿ ಬಂದಿದೆ. ಜೈನನಾಗಿ ಯೋಧನೂ ಆದ ರನ್ನನ ವರ್ಣನೀತಿಗೆ ಬದ್ಧತೆ ಹೊಸದೇನಲ್ಲ. ಏಕೆಂದರೆ ಪಂಪನಂತಹ ಜೈನಕವಿಯೂ ವರ್ಣ ವ್ಯವಸ್ಥೆಗೆ ಬದ್ಧನಾಗಿದ್ದುದನ್ನು ಕಾಣುತ್ತೇವೆ

ಜೈನಕವಿಗಳು ವರ್ಣ ವ್ಯವಸ್ಥೆಯನ್ನು ಒಪ್ಪಿಕೊಳ್ಳುತ್ತಾರೆ, ವರ್ಣ ವ್ಯವಸ್ಥೆಯಲ್ಲಿಯ ಪ್ರತಿಸ್ಪರ್ಧಿಗಳಾದ ವೈದಿಕರನ್ನು ವಿರೋಧಿಸುತ್ತಾರೆ. ಧಾರ್ಮಿಕ ಹಿಡಿತಗಳೆಲ್ಲ ಅವರ ಕೈಯಲ್ಲಿರುವುದೇ ಇದಕ್ಕೆ ಪ್ರಬಲ ಕಾರಣವಾಗಿದೆ. ವರ್ಣಾವಲಂಬಿತವಾದ ಧರ್ಮವನ್ನು ವಿರೋಧಿಸುವ ಪರಂಪರೆ ಕನ್ನಡ ಸಾಹಿತ್ಯದಲ್ಲಿ ಬೆಳೆಯಲೇ ಇಲ್ಲ. ಇದಕ್ಕೆ ಬದಲಾಗಿ ಧರ್ಮವನ್ನು ವಿರೋಧಿಸುವ ಪರಂಪರೆಯೇ ಬೆಳೆದಿದೆ. ಹೀಗಾಗಿ ಕನ್ನಡ ಸಾಹಿತ್ಯದಲ್ಲಿ ಜೈನರು ವೈದಿಕ ಬ್ರಾಹ್ಮಣರ ವಿರುದ್ಧ ಬಂಡಾಯ ಮಾಡಿದರೇ ವಿನಃ ವರ್ಣಾವಲಂಬಿ ಧರ್ಮವನ್ನು ವಿರೋಧಿಸಲಿಲ್ಲ. ರನ್ನ ಎಲ್ಲಾ ವೈದಿಕ ಧರ್ಮದವರನ್ನು ವಿರೋಧಿಸಲಿಲ್ಲ. ರನ್ನ ತನ್ನ ಕಾವ್ಯದಲ್ಲಿ ಇಪ್ಪತ್ತೊಂದು ಬಾರಿ ಕ್ಷತ್ರಿಯರನ್ನು ಸಂಹಾರ ಮಾಡಲು ಅವತರಿಸಿದ ಬ್ರಾಹ್ಮಣ ಪರಶುರಾಮನನ್ನು ತಂದು ಸತ್ಯಾಶ್ರಯನಿಗೆ ತಳಕು ಹಾಕುತ್ತಾನೆ. (೧-೨೮) ರಾಜನನ್ನು ಓಲೈಸುವುದಕ್ಕಾಗಿ ರನ್ನ ಬ್ರಾಹ್ಮಣನಾದ ಪರಶುರಾಮನನ್ನು ಇಲ್ಲಿ ತಂದಿದ್ದಾನೆ ಎಂದು ಹೇಳಬಹುದು. ಇದಲ್ಲದೆ ಸಂಜಯನಿಂದ 'ಪಾರ್ಥವ ಪೌರುಷ'ದ ಬಗ್ಗೆ ಹೇಳುವಾಗ ಬ್ರಾಹ್ಮಣ ಬಾಲಕನ ಹೋದ ಜೀವವನ್ನು ಮರಳಿ ಪಡೆದು ಬದುಕಿಸಿದ ಬಗ್ಗೆ ವಿವರಿಸುತ್ತಾನೆ (೨-೨೫). ರನ್ನ ಬ್ರಾಹ್ಮಣರ ಬಗ್ಗೆ ಅಷ್ಟೊಂದು ಕಡುವಿರೋಧಿಯಾಗಿದ್ದರೆ ಇದನ್ನು ಪ್ರಸ್ತಾಪಿಸುವುದನ್ನು ಕೈ ಬಿಡಬಹುದಿತ್ತು. ಇಂಥ ಸಂದರ್ಭಗಳು ಸಮತೋಲನವನ್ನು ಕಾಪಾಡಿ ಕೊಳ್ಳುವುದಕ್ಕಾಗಿಯೇ ತಲೆ ಎತ್ತಿ ನಿಂತಿವೆ ಎಂದು ಹೇಳಲಾಗುತ್ತದೆ.

ಚಕ್ರವರ್ತಿಯ ಆಸ್ಥಾನವನ್ನು ಸೇರಿದ ರನ್ನ, ಅಲ್ಲಿಯ ಕವಿಗಳನ್ನು ಕಂಡು ರೋಸಿ ಹೋಗಿದ್ದಾನೆ. ಇದರಿಂದಾಗಿಯೇ ಹಲವಾರು ಕಡೆಗಳಲ್ಲಿ ರಾಜ-ಕವಿಯ ಸಂಬಂಧ, ಕಾವ್ಯ ಮತ್ತು ಹಣದ ಸಂಬಂಧ ಮತ್ತು ಹುರುಳಿಲ್ಲದ ಕವಿಗಳು ಹೆಚ್ಚಿಸಿಕೊಳ್ಳುವ ಒಣಪ್ರಚಾರ ಇಂಥವೆಲ್ಲದರ ಬಗ್ಗೆ ನಿರ್ದಾಕ್ಷಿಣ್ಯವಾಗಿ ಹಳಿದುಬಿಡುತ್ತಾನೆ.

ಕೆಮ್ಮಗೆ ಕೊಳಲಾಟಿಪಂ ದೊರೆಯೊಳಕ್ಕನೊ ಕಳ್ಳನೊ ಬಂದಿಕಾಱನೋ।
ಪಗೆವನೊ ಮೊಮ್ಮನೊ ಮಗನದಾಯಿಗನೋ ಬುಧಸೇವ್ಯನಂದನಾ॥

(೧-೧-೩೭)

ನೇರವಾಗಿ ವೈದಿಕ ಅರಸನನ್ನೆ ಉದ್ದೇಶಿಸಿ ಹೇಳುವ ಈ ಮಾತು ಆತನ ಆಸ್ಥಾನದಲ್ಲಿ ಎಂಥವರಿದ್ದರು ಎನ್ನುವುದನ್ನು ಹೇಳುತ್ತದೆ. ಅದಲ್ಲದೆ ಅರಸುಗೆ ಸಂಬಂಧಿಸಿದ ಬಂಧುಗಳು, ಹೊಗಳುಭಟ್ಟರೂ ಇದ್ದಿರಬಹುದಾದುದರ ಬಗ್ಗೆ ವಿವರಗಳು ದೊರೆಯುತ್ತದೆ.

ನವಭೂತ ಭಾಷೆಯಿಂ ಕುಱು।
ಪುವೇಟ್ಟು ತಾಮಡ್ಡಗವಿತೆಯಂ ಮಾಡಿ ಮಹಾ ॥
ವ್ಯವಸಾಯಂಗೆಯ್ವು ಮರು ।
ಳ್ಗವಿಗಳ್ ತಾವೇಂ ಗುಣಾಢ್ಯಂ ಮಸುಳಿಸರೇ ॥

(ಗದಾ. ಪು. ೪-೪೨)

ಈ ರೀತಿಯ ಮರುಳು ಕವಿಗಳ, ಉಪದೇಸಿ ಬ್ರಾಹ್ಮಣರ ನಡುವೆ ಬದುಕಿದ ರನ್ನ ಇವರೊಂದಿಗೆ ಸಂಘರ್ಷವನ್ನು ಬಲವಾಗಿಯೇ ನಡೆಸಿ ಬದುಕಿರಬಹುದು. ಆದ್ದರಿಂದಲೇ ಆ ಕವಿ-ಕಾವ್ಯ ಪರಿಸರದ ಬಗ್ಗೆ ಇಷ್ಟೊಂದು ಕರಾರುವಕ್ಕಾಗಿ ಪರಿಪರಿಯಾಗಿ ಹೇಳಿದ್ದಾನೆ. ಇಂಥವರ ನಡುವಿನ ಪ್ರತಿಭಾನ್ವಿತ ಕವಿ ರನ್ನ, ತನ್ನ ಕಾವ್ಯದ ಬಗ್ಗೆ ನಿರ್ಭೀಡೆಯಿಂದ ಹೇಳಿಕೊಳ್ಳಲು ಸಾಧ್ಯವಾಗಿದೆ. ಮತಧರ್ಮಗಳ ವಿಚಾರಕ್ಕೆ ಸಂಬಂಧಿಸಿದಂತೆ ರನ್ನನ ಗದಾಯುದ್ಧದಲ್ಲಿಯ ವಿಚಾರಗಳಿಗೂ ಮತ್ತು ಅಜಿತಪುರಾಣದಲ್ಲಿಯ ವಿಚಾರಗಳಿಗೂ ವ್ಯತ್ಯಾಸಗಳಿವೆ. ಅಂದಿನ ರಾಜಕೀಯ ಬದಲಾವಣೆಯ ಜೊತೆಗೆ ಸಾಂಸ್ಕೃತಿಕ ಮತ್ತು ಸಾಮಾಜಿಕ ಬದಲಾವಣೆಗಳು ಹಾಗೂ ರನ್ನನ ಸುತ್ತಲಿರುವ ವ್ಯಕ್ತಿನಿಷ್ಠ ಸಂಬಂಧಗಳು ಕಾರಣವಾಗಿವೆ. ಗದಾಯುದ್ಧಕ್ಕಿಂತ ಮುಂಚಿತವಾಗಿಯೇ ಬಂದ ಅಜಿತ ಪುರಾಣದಲ್ಲಿಯ ವರ್ಣ ಮತ್ತು ಮತದ ವಿಚಾರಗಳು ಸ್ಫುಟವಾಗಿಯೇ ಇದ್ದು, ಇದಕ್ಕಿಂತಲೂ ಖಚಿತವಾಗಿ, ಸ್ಪಷ್ಟವಾಗಿ ನೇರವಾಗಿ ಗದಾಯುದ್ಧದಲ್ಲಿ ವ್ಯಕ್ತವಾಗಿವೆ.

ಶರಣಾಗಾ ದ್ವಿಜನೆನ್ನಂ
ಕರುಣಿಸು ನೀನೆನ್ನ ಮಗನನಂತಕ ಪುರದಿಂ
ತರವೇಟ್ಟುದೆನಗೆ ಮರಣಂ
ಶರಣಂ ಮೆಣೆನಿತೆ ನಿನ್ನ ಚರಣಂ ಶರಣಂ

(ಅಜಿತ ಪು. ೮-೧೨)

ನಾನು 'ಬ್ರಾಹ್ಮಣನಾಗಿದ್ದೇನೆ' ಎಂದು ಹೇಳಿಕೊಳ್ಳುವ ಕಪಟ ಬ್ರಾಹ್ಮಣ 'ದ್ವಿಜನೆನ್ನಂ' ಎನ್ನುವಲ್ಲಿ ನಾನು ಬ್ರಾಹ್ಮಣನಾಗಿರುವುದರಿಂದ ಎನ್ನುವ ಧ್ವನಿಯೂ ಹೊರಡುತ್ತದೆ. ಅರಸನಾದವನು ಬ್ರಾಹ್ಮಣನ ಮಗ ಸತ್ತರೆ ಉಳಿಸಿಕೊಡಬೇಕು ಎನ್ನುವ ಧ್ವನಿಯೂ ಹೊರಡುತ್ತದೆ. ಆದರೆ ಅರಸ ಬ್ರಾಹ್ಮಣನ ಮಗ ಸತ್ತರೂ ಉಳಿಸಿಕೊಡಬೇಕು ಎನ್ನುವ ವೈದಿಕ ತತ್ವವನ್ನೇ ಇಲ್ಲಿ ವಿಡಂಬಿಸಲಾಗಿದೆ.

ಕುಲಜಂ ಕುಲಹೀನನಿವಂ
ಕಲಿ ಪಂಗೆಯಿವಂ ಮಹಾಭಿಮಾನಿಯಿವಂ ನಾ
ಣಿಲಿಯಿವನೆನ್ನದೆ ಪಲರಂ
ನಲಿನಲಿದಾಟಂದು ಕೊಂದಪಂ ಯಮರಾಜಂ

(ಅಜಿತ ಪುರಾಣ ೮-೨೧)

ಎನ್ನುವಲ್ಲಿ ಮೇಲಿನ ವಿಚಾರ ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲದೆ ಈ ಮೇಲಿನ ಪದ್ಯದಲ್ಲಿಯ ಉಪದೇಶವನ್ನು ಅರಸನಿಂದ ಕೊಡಿಸದೆ ಪುರೋಹಿತನಿಂದ ಕೊಡಿಸಿರುವುದರಿಂದ ಮುಳ್ಳನ್ನು ಮುಳ್ಳಿನಿಂದಲೇ ತೆಗೆದಂತಾಗಿದೆ.

ರನ್ನ ಬ್ರಾಹ್ಮಣ ಕುಲದ ಬಗ್ಗೆ ಎಲ್ಲಿಯೂ ವಾಚ್ಯವಾಗಿ ಏನನ್ನೂ ಹೇಳದೆ ಪಾತ್ರಗಳ ಮೂಲಕ ತನ್ನಲ್ಲಿರುವ ಒಳ ಆತಂಕವನ್ನು ತೋರಿಸಿಕೊಂಡಿದ್ದಾನೆ. ಇದು ಸಂಪೂರ್ಣವಾಗಿ ಜಾಣತನದ ಲಕ್ಷಣವಾಗಿದೆ. ಆದರೆ ಗದಾಯುದ್ಧದಲ್ಲಿ ನೇರವಾಗಿ ಪ್ರಸ್ತಾಪಿಸುತ್ತಾನೆ.

ಜಾತಿ ವಿಷಯಕ್ಕೆ ಸಂಬಂಧಿಸಿದಂತೆ ರನ್ನ ಎರಡು ಕಾವ್ಯಗಳಲ್ಲಿ ನೇರವಾಗಿ ಎಲ್ಲಿಯೂ ಹೇಳಿರುವುದು ಕಂಡುಬರುವುದಿಲ್ಲ. ಆದರೆ ಅಲ್ಲಲ್ಲಿ ಉಲ್ಲೇಖಿತವಾದ ಜಾತಿಯ ವಿಚಾರಗಳನ್ನು ಗಮನಿಸಿದರೆ[೧೧] ಜಾತಿಯನ್ನು ಸಾಮಾನ್ಯೀಕರಣಗೊಳಿಸಿ ಹೇಳುವುದು ಕಂಡುಬರುತ್ತದೆ. ಆದರೆ ವಿಶೇಷವಾದ ಆದ್ಯತೆಯನ್ನು ಕೊಟ್ಟು ವಿವರಿಸುವುದಕ್ಕಾಗಲಿ ಹೋಗುವುದಿಲ್ಲ.

ಹೀಗಾಗಲು ಮುಖ್ಯ ಕಾರಣ ರನ್ನ ವೈಶ್ಯ ವರ್ಣಕ್ಕೆ ಸಂಬಂಧಿಸಿರುವುದೇ ಆಗಿದೆ. ತಾನು ಸಂಪೂರ್ಣವಾಗಿ ಕೆಳವರ್ಣದವನು ಅಲ್ಲದ್ದರಿಂದ ಹಾಗೂ ಸಂಪೂರ್ಣ ಮೇಲು ವರ್ಣಕ್ಕೆ ಸಂಬಂಧ ಪಡದವನಾಗಿರುವುದರಿಂದ 'ಜಾತಿ' ಎನ್ನುವುದು ರನ್ನನಿಗೆ ಅಷ್ಟಾಗಿ ಕಾಡಲು ಸಾಧ್ಯವಾಗಿಲ್ಲ. ರನ್ನನು ತನ್ನೆರಡು ಕೃತಿಗಳಲ್ಲಿ ಆ ಕಾಲದ ಸಾಮಾಜಿಕ ಸಂಘರ್ಷವನ್ನು ವ್ಯಾಪಕವಾದ ಮಾರ್ಗವಿಲ್ಲದೆ, ಸೂಕ್ಷ್ಮವಾಗಿ ಹೇಳುವ ಪ್ರಯತ್ನವನ್ನು

ಮಾಡಿದ್ದಾನೆ. ಪ್ರಾಚೀನ ಕನ್ನಡ ಕಾವ್ಯವು ಒಟ್ಟು ಅಧ್ಯಯನದ ಹಿನ್ನೆಲೆಯಿಂದ ಗಮನಿಸಬಹುದಾದುದೆಂದರೆ ತನ್ನ ಅಭಿಪ್ರಾಯದಲ್ಲಿ ಯುದ್ಧ ನೀತಿ, ಧರ್ಮನೀತಿ ಮತ್ತು ವರ್ಣನೀತಿ ಈ ಮೂರು ನೀತಿಗಳ ನೆಲೆಯಲ್ಲಿ ಕಾವ್ಯಗಳ ರೂಪಣ ಕ್ರಿಯೆ ನಡೆದರೂ ಧರ್ಮ ಮತ್ತು ವರ್ಣದ ಮಧ್ಯೆಯೇ ದೊಡ್ಡ ಸಂಘರ್ಷವು ಏರ್ಪಟ್ಟಿತ್ತೆಂದು ಹೇಳಬಹುದು. ಪೂರ್ಣಚಂದ್ರ ತೇಜಸ್ವಿಯವರು ಈ ರೀತಿ ಅಭಿಪ್ರಾಯ ಪಡುತ್ತಾರೆ. "ಕನ್ನಡ ಸಾಹಿತ್ಯ ಚರಿತ್ರೆಯನ್ನು ಸಾದ್ಯಂತವಾಗಿ ಅವಲೋಕಿಸಿದರೆ ವೈದಿಕ ಧರ್ಮ ವಿರೋಧಿ ಪ್ರಜ್ಞೆಯೊಂದು ಅಂತರ್ಯಾಮಿ ಸ್ಫೂರ್ತಿಯಾಗಿ ಒಳಗೇ ಕೆಲಸ ಮಾಡಿದೆ" ಎಂಬುದಾಗಿ. [೧೨]

ವಚನಗಳಲ್ಲಿ ಪ್ರತಿರೋಧ

ಯುದ್ಧನೀತಿ, ಧರ್ಮನೀತಿ ಮತ್ತು ವರ್ಣನೀತಿಯೆಂಬ ತ್ರಿಕೂಟ ನೀತಿಯು ಒತ್ತುವ ಅಸಮಾನತೆಯ ವಿರುದ್ಧದ ಪ್ರತಿಭಟನೆಯು ಆರಂಭವಾದದ್ದು ವಚನ ಯುಗದಲ್ಲಿ, ಪ್ರಭುವನ್ನು ಕೇಂದ್ರವನ್ನಾಗಿ ಮಾಡಿಕೊಂಡ ವ್ಯವಸ್ಥೆಯ ಕರಾಳ ಮುಖವನ್ನು, ವಿಕೃತಿಯನ್ನು ಮೊದಲ ಬಾರಿಗೆ ಜನಪರವಾಗಿ ನಿಂತು ಪ್ರತಿಭಟಿಸಿದವರು ವಚನಕಾರರು.

ಈ ಕಾಲದಲ್ಲೂ ಮುಖ್ಯವಾಗಿ ಸಂಘರ್ಷ ಏರ್ಪಟ್ಟಿದ್ದು ವೈದಿಕಧರ್ಮ ಮತ್ತು ಅವೈದಿಕದರ್ಮಗಳ ಮಧ್ಯೆಯೇ. ಸಾಮಾಜಿಕ ಶ್ರೇಣೀಕರಣದ ಕಲ್ಪನೆಯನ್ನೇ ಮುಂದುವರಿಸುತ್ತಾ ಬಂದ ವೈದಿಕಧರ್ಮವನ್ನು ಇಲ್ಲೂ ಪ್ರಶ್ನಿಸಲಾಯಿತು ಮತ್ತು ಅದಕ್ಕೆ ಪ್ರರ್ಯಾಯವಾದ ಸಂಸ್ಕೃತಿಯನ್ನೂ, ಧರ್ಮವನ್ನು ಕಟ್ಟುವ ಯತ್ನವನ್ನೂ ಮಾಡಲಾಯಿತು. ಯಜಮಾನ ಸಂಸ್ಕೃತಿಯ ಘೋಷಿತ ನಿಲುವುಗಳನ್ನೆಲ್ಲ, ಧರ್ಮಸೂಕ್ಷ್ಮದ ಎಲ್ಲೆಗಳನ್ನೆಲ್ಲ ಛಿದ್ರೀಕರಿಸಿ ಸಮಾಜದಲ್ಲಿ ಅತ್ಯಂತ ಪ್ರಾಮುಖ್ಯತೆ ಪಡೆದ ಪರಮವೆಂದು ನಂಬಿದ್ದ ರಾಜತ್ವವನ್ನು ದೈವದ ಎದುರಿನಲ್ಲಿ ಅಪವರ್ಗೀಕರಿಸಲಾಯಿತು. ಜಿ.ಎಸ್. ಶಿವರುದ್ರಪ್ಪನವರ ಅಭಿಪ್ರಾಯವೊಂದು ಹೀಗಿದೆ: "ಕನ್ನಡ ಸಾಹಿತ್ಯದ ಪ್ರಾರಂಭವೇ ವೈದಿಕ ವಿರೋಧಿ ಧೋರಣೆಯಿಂದ ಹುಟ್ಟಿಕೊಂಡದ್ದು. ಜೈನ ಧರ್ಮದ ಕವಿಗಳಿಂದ ಮತ್ತು ಅದು ಮುಂದುವರಿದದ್ದು ಅದೇ ಧೋರಣೆಯ ವೀರಶೈವ ಕವಿಗಳಿಂದ ಎಂಬುದನ್ನು ನೆನಪಿಗೆ ತಂದುಕೊಂಡರೆ, ಈ ಕವಿಗಳ ವಸ್ತು ನಿರ್ವಹಣೆ, ವೈದಿಕ ಪರಂಪರೆಯ ಕಾವ್ಯಗಳಿಗಿಂತ ಏಕೆ ಭಿನ್ನವಾಗಿದೆ ಎಂಬುದನ್ನು ಊಹಿಸಲು ಕಷ್ಟಪಡಬೇಕಾಗಿಲ್ಲ. ಆಧುನಿಕ ಕಾಲದ ಸಾಹಿತ್ಯದ ನೆಲೆಯಿಂದ ನೋಡುವುದಾದರೆ ಕನ್ನಡದಲ್ಲಿ ಮೊದಲಿನಿಂದಲೂ ವೈದಿಕ ವಿರೋದಿ ಧೋರಣೆಯೊಂದು ಉದ್ದಕ್ಕೂ

ಕ್ರಿಯಾಶೀಲವಾಗಿದೆ ಎಂದು ಹೇಳಬಹುದು.[೧೩] ಎಂಬ ಮಾತಿನಲ್ಲಿ ಯಥಾರ್ಥವಿದೆ. ವೈದಿಕ ವಿರೋಧಿ ಧೋರಣೆಯೆಂದರೆ ವರ್ಣ ವ್ಯವಸ್ಥೆಯ ವಿರೋಧವೆಂದು ಅರ್ಥ ಅಷ್ಟೇ. ಅಂದರೆ ವರ್ಣ ವ್ಯವಸ್ಥೆಯೆಂಬುದರ ಸುತ್ತ ಹಬ್ಬಿಕೊಂಡ, ಜಾತಿ, ಮಡಿ, ಮೈಲಿಗೆ ಅಸ್ಪೃಶ್ಯತೆ ಈ ಎಲ್ಲ ಕೊಂಬೆ ರೆಂಬೆಗಳ ಒಂದು ಜಾಲ. ಮನುಷ್ಯ, ಮನುಷ್ಯನನ್ನು ಕೀಳಾಗಿ ಕಾಣುವ ಅಮಾನವೀಯತೆಯ ವಿರುದ್ಧದ ಹೋರಾಟವಿದು. ಪ್ರತಿಯೊಂದು ಸಾಮಾಜಿಕ ಸಂದರ್ಭದಲ್ಲೂ ಇದು ಸ್ಫೋಟಿಸುತ್ತಾ ಬಂದಿದೆ. ಶ್ರೇಷ್ಠತೆಯನ್ನು ನಿರಾಕರಿಸುವ ಬಹುದೊಡ್ಡ ಚಳುವಳಿ ಆರಂಭವಾದಂತೆ ಮಧ್ಯಕಾಲೀನ ಸಾಹಿತ್ಯ ಸಂದರ್ಭದಲ್ಲಿ, ಈ ಕಾರಣಕ್ಕಾಗಿ ಈ ಕಾಲದ ಸಾಹಿತ್ಯ ಮತ್ತು ಸಾಮಾಜಿಕ ಚಳುವಳಿಗೆ ಇನ್ನಿಲ್ಲದ ಪ್ರಾಶಸ್ತ್ಯ ಬಂದಿದ್ದು. ಮಧ್ಯಯುಗ ವ್ಯಕ್ತಿಯುಗವಾದರೂ ಮುಖ್ಯವಾಗಿ ಸ್ತ್ರೀ ಮತ್ತು ಶೂದ್ರರ ಪ್ರತಿಭಟನೆಯ ಯುಗವೂ ಆಗಿದೆ. ಬಸವರಾಜ ಕಲ್ಗುಡಿಯವರ ಅಭಿಪ್ರಾಯ "ವರ್ಣ ವ್ಯವಸ್ಥೆಯನ್ನು ಪ್ರಶ್ನಿಸಲಾದ ಇಲ್ಲಿ ಬ್ರಾಹ್ಮಣ ವರ್ಗದ ಸ್ಥಾನವನ್ನು ಕುರಿತ ಶ್ರೇಷ್ಠತೆಯನ್ನು ನಿರಾಕರಿಸಲಾಯಿತು. ಇದು ಆ ವರ್ಗವನ್ನು ಧಾರ್ಮಿಕ ಕಾರಣಗಳಿಗಾಗಿ ನಂಬಿದ್ದ ರಾಜನಿಗೂ ಪರೋಕ್ಷವಾದ ಹೊಡೆತವನ್ನೇ ಕೊಟ್ಟ ಹಾಗೆ"[೧೪] ಶ್ರೇಷ್ಠತೆಯ ನಿರಾಕರಣೆಯಿಂದ ಹುಟ್ಟಿಕೊಂಡದ್ದೆ ಅಪವರ್ಗೀಕರಣ ಪ್ರಕ್ರಿಯೆ. ಶ್ರೇಷ್ಠವು ಕನಿಷ್ಠವಾಗುವ ಇಂಥಾ ಪ್ರಯತ್ನವೊಂದನ್ನು ಕೈಗೊಂಡದ್ದು ವಚನಕಾರರು.

ಜಿ.ಎಸ್. ಶಿವರುದ್ರಪ್ಪರ ಅಭಿಪ್ರಾಯ "ಲಿಂಗಭೇದ, ವರ್ಗಭೇದ ಮತ್ತು ವೃತ್ತಿಮೂಲವಾದ ವರ್ಣಭೇದಗಳನ್ನು ಗಣನೆಗೆ ತೆಗೆದುಕೊಳ್ಳದೇ ಇದು ಸಮಾಜದ ಸಮಸ್ತ ಸ್ತರಗಳನ್ನೂ ತನ್ನ ತೆಕ್ಕೆಗೆ ತೆಗೆದುಕೊಂಡು ಮಾನವೀಯ ಸಮಾನತಾ ಸಿದ್ಧಾಂತವೊಂದನ್ನು ತನ್ನ ನೆಲೆಗಟ್ಟನ್ನಾಗಿ ಅಂಗೀಕರಿಸಿದ್ದರಿಂದ, ಮೂಲತಃ ಸಾಮಾಜಿಕ ಪರಿವರ್ತನೆಗೆ ಬದ್ಧವಾದ್ದರಿಂದ ಇದು ಒಂದು ಸಾಮಾಜಿಕ ಧಾರ್ಮಿಕ ಆಂದೋಲನವಾಯಿತು.

ಪುರುಷ ಪ್ರಧಾನ, ಪ್ರಭುಪ್ರಧಾನ, ವರ್ಣಪ್ರಧಾನವಾಗಿದ್ದ, ಶೋಷಣೆಗೆ ಕಾರಣವಾಗಿದ್ದ ವ್ಯವಸ್ತೆಗಳ ಮೂಲೋತ್ಪಾಟನೆಗೆ ವಚನ ಸಾಹಿತ್ಯ ಬದ್ಧವಾಯಿತು.[೧೫]

ಬಸವಣ್ಣ

ವಚನ ಸಾಹಿತ್ಯದಲ್ಲಿ ಪ್ರತಿಭಟನೆಯ ಧೋರಣೆಯನ್ನು ಬಸವಣ್ಣನವರ ವಚನಗಳಲ್ಲಿ ತೀವ್ರವಾಗಿ ಕಾಣಬಹುದು. ೧೨ನೇ ಶತಮಾನದಲ್ಲಿ ಕ್ರಾಂತಿಕಾರಿ ಬಸವಣ್ಣನಿಂದ ಒಂದು ಹೊಸ ಸಮಾಜ ನಿರ್ಮಾಣವಾಯಿತು.

ಈ ಹೊಸ ಧರ್ಮಕ್ಕೆ ಸಂಬಂಧಿಸಿದಂತೆ ಭಕ್ತಿ ಕಾರ್ಯದ ನಡವಳಿಕೆಗೆ ಮತ್ತು ಸಮಾಜ ಸುಧಾರಣೆಗೆ ಸಂಘಟನೆ ನಡೆಯಿತು. ಇದು ವಿಪ್ಲವಕಾರಿಯಾಗಿ ಕಾಣಿಸಿದ ಸಮಾಜ ಕ್ರಿಯೆಯ ಬಹುದೊಡ್ಡ ಕ್ರಾಂತಿ ಒಂದು ಹೊಸ ಧರ್ಮದಲ್ಲಿ ಚಾರುರ್ವರ್ಣ್ಯದ ನಿರಸನ, ಯಜ್ಞಯಾಗಾದಿಗಳ ತಿರಸ್ಕಾರ, ಮಠ ಮಂದಿರ ಹೊರ ಪೂಜಾಸ್ತರಿಗೂ ಸಮಾನವಾಗಿ ತೆರೆದ ಸಾಮಾಜಿಕ ಅವಕಾಶ, ಆವರೆಗೂ ದೇಶದಲ್ಲಿ ಕಾಣದ ಒಂದು ಸಮಾಜ ಸಮತಾವಾದ ಏರ್ಪಡುವಂತಾಯಿತು. ವರ್ಣ ವ್ಯವಸ್ಥೆಯಲ್ಲಿ ಬೇರೆಬೇರೆಯಾಗಿದ್ದು ಮೇಲು ಕೀಳು ಎಂಬ ಭಾವನೆಗಳು ಹೋಯಿತು. ಅಸ್ಪೃಶ್ಯರು ಶಿವ ಪಂಥವನ್ನು ಸ್ವೀಕರಿಸಿದ ಮೇಲೆ ಉಂಟಾದ ಮಹಾಕ್ರಾಂತಿ ಬಹುದೊಡ್ಡ ಅಶಾಂತಿಯನ್ನು ಆತಂಕೆಯನ್ನು ಸಂಪ್ರದಾಯ ವರ್ಗಗಳಲ್ಲಿ ಉಂಟು ಮಾಡಿತು. ತಾನು ನಂಬಿದ್ದ ಧರ್ಮಶ್ರದ್ಧೆಯನ್ನು ಸಾರ್ವತ್ರಿಕಗೊಳಿಸುವ ಆವೇಶ ತಾನು ತಿದ್ದಿಕೊಳ್ಳುತ್ತ, ಇತರರಿಗೂ ತಿದ್ದಲು ಹೇಳುತ್ತಾ ಹೋಗುವ ರೀತಿ ಬಸವಣ್ಣನದು. ಹೀಗಾಗಿ ಬಸವಣ್ಣನ ವಿಡಂಬನೆಯಲ್ಲಿ ಭಕ್ತ ಹೃದಯದ ಕಳಕಳಿ, ಆರ್ತತೆ ಅಚ್ಚೊತ್ತಿದಂತಿದೆ. ಕಪಟ ಭಕ್ತಿಯ ಮನಸ್ಸು, ಅಹಂಕಾರ, ಆಡಂಬರ ಇವುಗಳನ್ನು ಕಂಡಾಗ ಸಾಮಾಜಿಕ ಅಧ್ಯಯನಗಳನ್ನು ಪರಾಮರ್ಶಿಸಿದಾಗ ಸುಧಾರಣೆಯೇ, ಉತ್ಕಟಕ್ರಿಯೆಯೇ ಉದ್ರೇಕವಾಗಿ ಹೊರಚಿಮ್ಮುತ್ತದೆ ಎನ್ನುವುದನ್ನು ಕಾಣುತ್ತೇವೆ. ಸಮಾಜದಲ್ಲಿ ಧರ್ಮನಿಷ್ಠೆ ಐಕ್ಯತೆಯ ಅನಿವಾರ್ಯವನ್ನು ಅನುಭವಿಸಿದ ಬಸವಣ್ಣನವರಿಗೆ ಈ ನಿಲುವು ಸಹಜ.

ಬಸವಣ್ಣ ವ್ಯಕ್ತಿಯ ಜಾತಿಯನ್ನು ಬಿಟ್ಟು ಶೀಲವನ್ನು ಎತ್ತಿ ಹಿಡಿದಿರುವುದು ಕಂಡು ಬರುತ್ತದೆ. ಬಸವಣ್ಣನವರ ದೃಷ್ಟಿಯಲ್ಲಿ ಎರಡೇ ಕುಲಗಳು ಒಂದು ಭಕ್ತರದ್ದು ಮತ್ತು ಭವಿಗಳದ್ದು. "ಭಕ್ತ ಕುಲ ಒಂದೇ ಕುಲ" ಹುಟ್ಟಿದ ಪ್ರತಿಯೊಂದು ಜೀವಿಗೂ ತನ್ನ ಇಷ್ಟದೇವತೆಯನ್ನು ಪೂಜಿಸುವುದು ಜನ್ಮಸಿದ್ಧ ಹಕ್ಕು. ಕುಲಶೀಲದ ಬಗ್ಗೆ ಬಸವಣ್ಣನವರು ನಮ್ಮ ವಚನಗಳಲ್ಲಿ ಬಹಳ ಸರಳವಾಗಿ ತಿಳಿಸುತ್ತಾರೆ.

ಕೊಲುವವನೆ ಮಾದಿಗ, ಹೊಲಸು ತಿಂಬುವನೇ ಹೊಲೆಯ
ಕುಲವೇನೋ ಆವಂದಿರ ಕುಲವೇನೋ?
ಸಕಲ ಜೀವಾತ್ಮರಿಗೆ ಲೇಸನೆ ಬಯಸುವ
ತಮ್ಮ ಕೂಡಲ ಸಂಗನ ಶರಣರೇ ಕುಲಜರು
ಈ ವಚನದಲ್ಲಿ ಬಸವಣ್ಣನವರು ಕುಲದ ಬಗ್ಗೆ ಸ್ಪಷ್ಟವಾದ ವಿವರ ನೀಡಿದ್ದಾರೆ.

ಬಸವಣ್ಣ ಜಾತಿಗಳ ಸ್ವರೂಪವನ್ನು ಬಲ್ಲವರಾಗಿದ್ದುದರಿಂದ ಅವು ಹೋಗಬೇಕು ಎಂಬ ಅಸಾಧ್ಯ ಆದರ್ಶವನ್ನು ಎತ್ತಿ ಹಿಡಿಯುವುದಕ್ಕಿಂತ ಅವುಗಳ

ಮಧ್ಯದ ಅಸಮಾನತೆ ಹೋಗಬೇಕೆಂಬು ಬಯಸಿದರು. ಸಮಾನತೆಯನ್ನು ಪ್ರತಿಪಾದಿಸುವ ಒಂದು ಮಾರ್ಗ ಅವರಿಗೆ ಕಾಣಿಸಿದ್ದು ಜಾತಿಗಳಲ್ಲಿ ಉತ್ತಮವೆಂದು ಭಾವಿತವಾಗಿದ್ದ ಬ್ರಾಹ್ಮಣ್ಯದ ಪ್ರಾಶಸ್ತ್ಯದ ಅಪಮೌಲ್ಯೀಕರಣದಿಂದ ಹಾಗೂ ಆದರ ಜಾತಿಶ್ರೇಣಿಯ ಇನ್ನೊಂದು ತುದಿಯಲ್ಲಿದ್ದ ಅಸ್ಪೃಶ್ಯನು ಬ್ರಾಹ್ಮಣನಿಗಿಂತ ಕೀಳಲ್ಲ ಎಂಬ ಸ್ಪಷ್ಟೋಕ್ತಿಗಳಿಂದ ಅವರು ಅಸ್ಪೃಶ್ಯನು ಬ್ರಾಹ್ಮಣನಿಗಿಂತ ಕೀಳಲ್ಲ ಎಂದು ಸ್ಪಷ್ಟೋಕ್ತಿಗಳಲ್ಲಿ ಸಾರಿದರು. ಇಲ್ಲಿ ಬ್ರಾಹ್ಮಣ ದ್ವೇಷ ಕಾಣುತ್ತದೆಯೆನ್ನುವುದಕ್ಕಿಂತ ಅವರ ಜನ್ಮಲಬ್ಧ ಶ್ರೇಷ್ಠತೆಯ ನಿರಾಕರಣೆಯ ಮೂಲಕ ಕೆಳಗಿನ ಜಾತಿಯವರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವ ಪ್ರಯತ್ನವಿದೆಯೆಂದು ಭಾವಿಸುವುದು ಹೆಚ್ಚು ಉಚಿತ. ಒಂದು ವ್ಯವಸ್ಥೆಯನ್ನು ಭಂಗಗೊಳಿಸಲು ಇರುವ ನೇರ ಸುಲಭ ಮಾರ್ಗವೆಂದರೆ ಅದರ ಸಂಕೇತವನ್ನು ಭಂಗಗೊಳಿಸುವುದು. ಬ್ರಾಹ್ಮಣ ಅಂದಿನ ಜಾತಿ ವ್ಯವಸ್ಥೆಯ ಸಂಕೇತವಾಗಿದ್ದ, ಅಂತಹ ಭಂಗಕ್ಕೆ ಅನುಸರಿಸಿದ ಬಸವಣ್ಣನವರ ತಂತ್ರಗಳು ಹೀಗಿವೆ "ವರ್ಣಗಳಿಗೆ ಗುರು ಶಿವಭಕ್ತರೇ ಹೊರತು ಬ್ರಾಹ್ಮಣರಲ್ಲ, ಬ್ರಾಹ್ಮಣನೇ ಗುರು ಎಂಬುದು ಸುಳ್ಳು, ಎಂದು ಸಾರುತ್ತಾರೆ. ಜಾತಿ ಸಮಾಜಕ್ಕೆ ಒಂದು ಆಘಾತವನ್ನುಂಟು ಮಾಡುತ್ತಾರೆ. ಆದಕ್ಕಿಂತ ಅಘಾತಕರವಾದ ಸಂಗತಿ ಎಂದರೆ ಬಸವಣ್ಣ ತಾನು ಹಾದರಕ್ಕೆ ಹುಟ್ಟಿದವನೆಂಬುದನ್ನು ಸಾರ್ವಜನಿಕವಾಗಿ ಸಾರುವುದರ ಮೂಲಕ ಹೊಲೆಮಾದಿಗರ ಘನತೆಯನ್ನು ಎತ್ತಿ ಹಿಡಿಯುತ್ತಾರೆ.

ಕುಲವನ್ನು ವಿರೋಧಿಸಿ ಈ ರೀತಿ ಹೇಳುತ್ತಾರೆ. 'ಹೊಲೆಗೇರಿ, ಶಿವಾಲಯಗಳೆರಡೂ ಇರುವುದು ನೆಲದ ಮೇಲೆಯೇ, ಮಲ ತೊಳೆಯುಲಿಕ್ಕೂ ಪೂಜೆಗೂ ಬಳಸುವುದು ಒಂದೇ ನೀರನ್ನು, ಹೀಗಿರುವಾಗ ತನ್ನನ್ನು ತಾನು ತಿಳಿದವನಿಗೆ ಹಲವು ಕುಲಗಳಲ್ಲಿ, ಇರುವುದು ಒಂದು ಕುಲ ಎನ್ನುತ್ತಾನೆ.

ಬಸವಣ್ಣನವರು ಅಧಿಕಾರಿ ಅನಧಿಕಾರಿ ಎಂಬ ತಾರತಮ್ಯವನ್ನು ಅಲ್ಲಗೆಳೆದು ವರ್ಗರಹಿತ ಬದುಕಿಗೆ ಹಂಬಲಿಸಿದ ಸೂಚನೆ ದೊರೆ ಬಿಜ್ಜಳನ ಗದ್ದುಗೆ ಒಲ್ಲೆಸದೆ ಹೊಲೆಯರ ಮನೆಯ ಕೂಲಿಯನ್ನು ಮಾಡಿ ಸಾಮಾನ್ಯ ಬದುಕನ್ನು ನಡೆಸಲು ಬಯಸುವಲ್ಲಿ ಸೂಚಿತವಾಗಿದೆ. "ಅನು ಹಾರುವನೆಂದರೆ ಕೂಡಲ ಸಂಗಯ್ಯ ನಗುವನಯ್ಯ ಎಂಬ ಬಸವಣ್ಣನವರ ಮಾತಿನಲ್ಲಿ ಜಾತಿಯ ಅನುಶ್ರೇಣಿಯ ವಿರೋಧವಿರುವುದು ಹಾಗೂ ಜಾತಿಗಿಂತ ನೀತಿ ಮುಖ್ಯವೆಂಬ ಅಂಶವನ್ನು ಗಮನಿಸಬಹುದು." ಅಲ್ಲದೆ ಲಿಂಗ ಭೇದವನ್ನು ವಿರೋಧಿಸುತ್ತಾರೆ. ಹೆಣ್ಣು ಗಂಡಿನ ಭೇದವನ್ನು ಬಸವಣ್ಣನವರು

ಒಪ್ಪದಿರುವುದರಿಂದ ಅವು ಒಂದೇ ಸತ್ವದ ಪ್ರಕಟರೂಪಗಳಾಗಿದ್ದರಿಂದ "ಗಂಡಸ್ಪನೆಯ್ಯ ಹೆಣ್ಣೆಪ್ಪನಯ್ಯ ನಿನಗೆ ವೀರಪ್ಪ ನಿಮ್ಮ ಶರಣರಿಗೆ ವಧುವಪ್ಪೆ" ಎಂದು ಮತ್ತೆ ಸಮನತಾ ತತ್ವವನ್ನು ಎತ್ತಿ ಹಿಡಿಯುತ್ತಾರೆ. ತಮ್ಮ ಸಾಮಾಜಿಕ ಸಂದರ್ಭದಲ್ಲಿಯ ವರ್ಗ, ವರ್ಣ, ಲಿಂಗಭೇದದಂತಹ ವ್ಯತ್ಯಾಸಗಳನ್ನು ಪ್ರತಿಭಟಿಸುವುದರ ಮೂಲಕ ಒಟ್ಟು ಬದುಕಿಗೆ ಬರಬಹುದಾದ ಜಂಗಮತ್ವವನ್ನು ದರ್ಶಿಸಿದ್ದಾರೆ.

ಬಸವಣ್ಣ ಡಾಂಭಿಕ ಭಕ್ತಿಯನ್ನು ತೀವ್ರವಾಗಿ ವಿರೋಧಿಸಿದರು. ಸಮಾಜದಲ್ಲಿ ಭಕ್ತಿಯ ಅರೆಭಕ್ತರು, ಆರಂಭ ಶೂರ ಭಕ್ತರು, ವಂಚಕ ಭಕ್ತರು, ಡಾಂಭಿಕ ಭಕ್ತರು ಹೀಗೆ ಅನೇಕ ಭಕ್ತರು ಅವರ ಕಣ್ಣಿಗೆ ಕಾಣಿಸಿಕೊಂಡಿದ್ದಾರೆ.

ಬಸವಣ್ಣ ಬಾಹ್ಯ, ಆಡಂಭರದ ಆಚರಣೆಗಳನ್ನು ಕಟುವಾಗಿ ವಿರೋಧಿಸಿ ತಮ್ಮ ವಚನಗಳನ್ನು ಹೀಗೆ ಹೇಳುತ್ತಾರೆ.

ನೀರ ಕಂಡಲ್ಲಿ ಮುಳುಗವರಯ್ಯ
ಮರವ ಕಂಡಲ್ಲಿ ಸುತ್ತುವರಯ್ಯ
ಬತ್ತುವ ಒಲವನೊಣಗುವ ಮರವ
ಮುಚ್ಚಿದವರು ನಿಮ್ಮನೆತ್ತ ಒಲ್ಲರು
ಕೂಡಲ ಸಂಗಮ ದೇವಾ

ಭಕ್ತಿ ಎಂಬುದು ಗರಗಸದಂತೆ ಹೋಗುತ್ತ, ಬರುತ್ತಾ, ಕೊಯ್ಯುತ್ತದೆ. ಸದಾ ಜಾಗೃತ ಮನಸ್ಸು ಉಳ್ಳವನೇ ಮುನ್ನಡೆಯಲು ಸಾಧ್ಯ ಎಂದಿದ್ದಾರೆ. ಧಾರ್ಮಿಕ ವಿಧಿಗಳು, ಕೇವಲ ಬಾಹ್ಯಾಂಡಭರವಾಗದೇ ಅಂತರಂಗ ವಿಕಾಸಕ್ಕೆ ಕಾರಣವಾಗಬೇಕೆಂಬುದೇ ಬಸವಣ್ಣನವರ ಅಭಿಮತವಾಗಿತ್ತು.

ಅಂದಿನ ಸಮಾಜದಲ್ಲಿ ಕ್ರೂರವಾಗಿ ನಡೆಯುತ್ತಿದ್ದ ಪ್ರಾಣಿ ಬಲಿಯನ್ನು ವಿರೋಧಿಸಿ ಅಹಿಂಸಾ ಮಾರ್ಗವನ್ನು ಅವರು ಬೋಧಿಸಿದರು. ಅಲ್ಲದೆ ಅಂತಜಾರ್ತಿಯು ವಿವಾಹ ಮಾಡಿ ಅಂದಿನ ಸಮಾಜದಲ್ಲಿ ಒಂದು ಕ್ರಾಂತಿಯ ಅಲೆಯನ್ನೇ ಎಬ್ಬಿಸಿದರು.

ಬಸವಣ್ಣನವರ ಸಮಾಜ ವಿಮರ್ಶೆ ಮತ್ತು ವಿಡಂಭನೆಯಲ್ಲಿ ಅದರ ಒಕ್ಕೂಟವಾದ ಸಮಾಜ ಪ್ರಜ್ಞೆ ಜಾಗೃತವಾದದ್ದು ಮತ್ತು ಸಮಾಜ ಸುಧಾರಣೆಯ ಕಳಕಳಿ ಪ್ರವೃತ್ತಗೊಂಡದ್ದನ್ನು ವಚನದಲ್ಲಿ ಗಮನಿಸಬಹುದು.

ಅಕ್ಕಮಹಾದೇವಿ

ಅಂದಿನ ಸಮಾಜದಲ್ಲಿ ಧರ್ಮದ ಪ್ರರೋಹಿತನಾದ ಪುರುಷ ಮಹಿಳೆಯನ್ನು ಧಾರ್ಮಿಕ ಕ್ಷೇತ್ರದಿಂದ ದೂರವಿಟ್ಟಿದ್ದ. ಇವರ ನಿಲುವುವನ್ನು ವಿರೋಧಿಸಿ ವಚನಕಾರರು ಮಹಿಳೆಯರಿಗೆ ಸಂಪ್ರದಾಯ ಸಂಕೋಲೆಯಿಂದ ಬಿಡುಗಡೆಗೊಳಿಸಿದರು. ಅಹಿಂಸೆ, ಸಾಮಾಜಿಕ ಅಸಮಾನತೆ, ಗಂಡು ಹೆಣ್ಣೆಂಬ ಭೇದ ಇತ್ಯಾದಿ ಅನೇಕ ವಿಷಯಗಳ ಬಗ್ಗೆ ಹಾಗೂ ರಾಜಸತ್ತೆಯ ಸಂದರ್ಭದಲ್ಲಿದ್ದುಕೊಂಡೇ ಪತಿತ್ವ ಪ್ರಭುತ್ವ ಎರಡನ್ನೂ ಏಕಕಾಲಕ್ಕೆ ತಿರಸ್ಕರಿಸಿ ಆತ್ಮಗೌರವಕ್ಕೆ ಮಹತ್ತರವಾದ ಸ್ಥಾನವನ್ನು ಕೊಡುವುದರ ಮೂಲಕ ಅಕ್ಕಮಹಾದೇವಿ ಮಹಿಳೆಗೆ ಹೊಸ ವ್ಯಕ್ತಿತ್ವವನ್ನು ಮೂಡಿಸುತ್ತಾಳೆ. ಅದೇ ರೀತಿ ಗಂಡು ಹೆಣ್ಣೆಂಬ ಭೇದವನ್ನು ತೊಡೆದು ಸಮಾನತೆಯನ್ನು ಒತ್ತಿ ಹೇಳಿ ಅಕ್ಕಮಹಾದೇವಿ ಸಾಮಾಜಿಕ ಸಿದ್ಧಾಂತಗಳನ್ನು ಹುಟ್ಟು ಹಾಕಿ ಅಸಮಾನತೆಯ ವಿರುದ್ಧ ಪ್ರತಿರೋಧವನ್ನು ವ್ಯಕ್ತಪಡಿಸುತ್ತಾಳೆ.

ಹೊಸ ಮಾನವೀಯ ಮೌಲ್ಯಗಳಿಗೆ ಹಾತೊರೆಯುವ ಮನುಷ್ಯನನ್ನು ಮನುಷ್ಯತ್ವದ ಕಡೆಗೆ ಚಲಿಸುವಂತೆ ಮಾಡುವ, ಧರ್ಮದ ಒಡಲಿಗೆ ದಯೆಯ ಎದೆ ಹಾಲನ್ನು ಸುರಿದು ಸಕಲ ಜೀವಗಳ ಬಗೆಗೆ ತಾಯಿ ಪ್ರೀತಿಯನ್ನು ತೋರುವ ಅಕ್ಕನ ರೀತಿ 'ಹೆಣ್ಣುಮಾಯೆ, ಹೆಣ್ಣು ಭೋಗ' ಎಂಬ ಸಾಮಾಜಿಕ ನಂಬಿಕೆಯನ್ನು ಸಮಾಜದ ಮನೋಸ್ಥಿತಿಯನ್ನು ಅರಿವಿನ ಔನ್ನತ್ಯದಲ್ಲಿ ತಿರಸ್ಕರಿಸುತ್ತದೆ.

೧೨ನೇ ಶತಮಾನದಲ್ಲಿ ಒಂದು ಸಾಮಾಜಿಕ ಕ್ರಾಂತಿಯಾಗಿ ರೂಪಗೊಂಡ ವಚನಕಾರರ ಮಾತು, ಕೃತಿ, ನಿಲುವು, ಅಂದಿನ ಸಾಮಾಜಿಕ ಮೌಢ್ಯತೆ ಜಾತೀಯ ಸಂಬಂಧವಾಗಿದ್ದ ಮೇಲು - ಕೀಳು ಎಂಬ ಸಾಮಾಜಿಕ ಅಸಮಾನತೆಯ ವಿರುದ್ಧ ಹೂಡಲಾದ ಚಳುವಳಿಯಾಗಿ ಸ್ಥಾನ ಪಡೆಯುತ್ತದೆ. ಈ ಚಳುವಳಿಯಲ್ಲಿ ಅಕ್ಕಮಹಾದೇವಿಯ ಪಾತ್ರ ವಿಶಿಷ್ಟವಾದುದು.

ಅಕ್ಕನ ವಚನಗಳಲ್ಲಿ ಸಂಸಾರವನ್ನು ನಿರಾಕರಿಸುವ ಕೆಲವು ವಚನಗಳು ಮುಖ್ಯವಾಗಿ ಸಂಸಾರದ ಅನಿತ್ಯತೆ ಹಾಗೂ ಅದು ಹುಟ್ಟಿಸುವ ಅನೇಕ ರೀತಿಯ ಕುರೂಪಗೊಂಡ ನೆಲೆಗಳನ್ನು ವಿವರಿಸುತ್ತದೆ. ಕೆಲವು ವಚನಗಳನ್ನು ಕುಟುಂಬದ ಹಿನ್ನೆಲೆಯಲ್ಲಿಯೂ, ಲೌಕಿಕ ಅಥವಾ ಸಮಾಜವೆಂಬ ಅರ್ಥದಲ್ಲಿ ಪರಿಭಾವಿಸಬಹುದು.

ಸಂಸಾರವೆಂಬ ಹಗೆಯಯ್ಯಾ ಎನ್ನ ತಂದೆ
ಎನ್ನ ವಂಶ ವಂಶದಪ್ಪದೆ ಅರಸಿಕೊಂಡು ಬರುತ್ತಿದೆಯೆಯ್ಯಾ
ಎನ್ನುವನರಸಿಯರಸಿ ಹಿಡಿದು ಕೊಲ್ಲುತ್ತಿವೆಯಯ್ಯ
ನಿನ್ನ ನಾ ಮರೆಹೊಕ್ಕೆ ಕಾಯಯ್ಯಾ
ಎನ್ನ ಬಿನ್ನಪವನಧರಿಸಾ ಚನ್ನಮಲ್ಲಿಕಾರ್ಜುನಾ

ಅಕ್ಕನ ಪ್ರಕಾರ "ಸಂಸಾರವು ಹಗೆಯಾಗಿರುವುದನ್ನು ವಿವರಿಸುತ್ತಾ ಅದು ವ್ಯಕ್ತಿಯನ್ನು ಕೊಲ್ಲುವ ವಾತಾವರಣವನ್ನು ಹೇಳುತ್ತದೆ" ಅಲ್ಲದೆ ಸಂಸಾರದ ಸಂಬಂಧವು ವ್ಯಕ್ತಿಯ ಚೈತನ್ಯವನ್ನು ಕುಗ್ಗಿಸಿ ಬಿಟ್ಟಿರುವ, ಕೊಲ್ಲುತ್ತಿರುವ ಸ್ವರೂಪದ್ದಾಗಿರುವುದನ್ನು ಹೇಳಲಾಗಿದೆ. ಅಕ್ಕಮಹಾದೇವಿಯು ಸಂಸಾರದಲ್ಲಿ ಹುಟ್ಟುವ ಕೆಲವು ಭಾವನೆಗಳನ್ನು ವಿವರಿಸುತ್ತ ಜ್ಞಾನ, ಅಜ್ಞಾನದಿಂದ ಆಸೆ, ಆಸೆಯಿಂದ ಕೋಪ ಇವು ಹುಟ್ಟುತ್ತದೆ. ಇವುಗಳು ವ್ಯಕ್ತಿಯ ದುಃಖಕ್ಕೆ ಕಾರಣವಾಗುತ್ತದೆ ಎನ್ನುತ್ತಾಳೆ.

ಸಂಸಾರದ ಶೋಚನೀಯ ಸ್ಥಿತಿಗೆ ಒಳಗಾದ ಹೆಣ್ಣಿನ ಜೀವನವನ್ನು ವಚನದಲ್ಲಿ ವಿವರಿಸುತ್ತಾಳೆ. "ಕುಟುಂಬದ ಪ್ರತಿಯೊಬ್ಬರು ಮಾಡುವ ಕ್ರೂರ ಹಿಂಸೆಯನ್ನು ಹೇಳುತ್ತ ಹೆಣ್ಣಿನ ಮೇಲಿನ ದಬ್ಬಾಳಿಕೆಯನ್ನು ಪ್ರತಿಭಟಿಸುತ್ತಾಳೆ. ಅಕ್ಕನ ವಚನಗಳಲ್ಲಿ ಈ ಸಮಾಜವು ರೂಪಿಸಿದ ವಿರೋಧವೊಂದನ್ನು ಗಮನಿಸಬಹುದು. ಹೆಣ್ಣನ್ನು ಭೋಗ ಸಾಮಗ್ರಿಯನ್ನಾಗಿ, ಕೇವಲ ಕಾಮುಕ ದೃಷ್ಟಿಯಿಂದ ನೋಡಿದ ರೀತಿಯನ್ನು ಅಕ್ಕಮಹಾದೇವಿಯು ತೀವ್ರವಾಗಿ ವಿರೋಧಿಸಿದಳು. ಚನ್ನಮಲ್ಲಿಕಾರ್ಜನನ ಸಂಬಂಧದಲ್ಲಿ ಅಕ್ಕಮಹಾದೇವಿಯು ಈ ಎಲ್ಲ ಹೇರಲಾದ ನಿಬಂಧನೆಗಳು, ನಡವಳಿಕೆಗಳನ್ನು ತಿರಸ್ಕರಿಸಿದಳು. ಅವಳ ಈ ತಿರಸ್ಕಾರವು ಕಾಮಪ್ರೇಮಗಳ ಸಂಬಂಧದಲ್ಲಿ ಎಲ್ಲ ಸಾಂಪ್ರಾದಾಯಿಕ ಅಡೆತಡೆಯನ್ನು ನಿರಾಕರಿಸುವವರೆಗೂ ಹರಡಿಕೊಂಡಿತು. ತನ್ನ ಗಂಡನ ಸ್ವರೂಪ ಅವನೊಡನೆ ತನ್ನ ಪ್ರೇಮದ ಸಂಬಂಧ, ಮದುವೆ ರೀತಿ, ಈ ಎಲ್ಲ ವಲಯಗಳಲ್ಲಿಯೂ ಅಕ್ಕಮಹಾದೇವಿ ಲೌಕಿಕದ ಸಂಪ್ರದಾಯಸ್ಥ ಕಟ್ಟುಪಾಡುಗಳನ್ನು ಮುರಿದಿರುವುದನ್ನು ಅಭಿವ್ಯಕ್ತಿಸುತ್ತಾಳೆ.

ಅಕ್ಕಮಹಾದೇವಿಯ ವಚನಗಳು ಸಂಪ್ರದಾಯದ ಮುಜುಗರಗಳನ್ನು ಮೀರಿ ಬಿಡುತ್ತವೆ. ಮೂಲಭೂತವಾಗಿ ಕಾಮ - ಪ್ರೇಮಗಳ ಬಗ್ಗೆ ಸಮಾಜವು ಹಾಕಿದ ಎಲ್ಲ ಮಿತಿ ಹಾಗೂ ಪ್ರತಿಬಂಧಕಗಳನ್ನು ಅಕ್ಕನ ಅಭಿವ್ಯಕ್ತಿಯ ಸ್ವರೂಪವೇ ತೊಡೆದುಹಾಕುತ್ತದೆ.

ಅಕ್ಕಮಹಾದೇವಿ ಆಧ್ಯಾತ್ಮಿಕ ನೆಲೆಯಿಂದ ಸ್ತ್ರೀ-ಪುರುಷರ ನಡುವಿನ ಭೇದವನ್ನು ನಿರಾಕರಿಸುತ್ತಾಳೆ. ಧಾರ್ಮಿಕ ಬದುಕಿನ ಅಗತ್ಯಕ್ಕಾಗಿ ಪತಿ-ಪತ್ನಿಯರಿಗೆ ಸಮಾನ ಧರ್ಮ ಅಗತ್ಯವೆಂದು ಸಾರಿದಳು ಅಲ್ಲದೆ ಹೆಣ್ಣು ಗಂಡುಗಳ ನಡುವಿನ ಸಮಾನ ಶಕ್ತಿಯೊಂದನ್ನು ಆತ್ಮ, ಪ್ರಾಣ, ಜ್ಞಾನ ಅರಿವುಗಳೆಂಬ ಪದಗಳಿಂದ ಸೂಚಿಸುವ ಶಿವಶರಣ ಶರಣೆಯರ ನಿರ್ಲಿಂಗೀಯ ನೆಲೆಯಿಂದ ಶರೀರಜನ್ಮ ವ್ಯತ್ಯಾಸಗಳನ್ನು ಅರ್ಥಹೀನವೆಂದು ನಿರಾಕರಿಸುತ್ತಾಳೆ.

ಅಕ್ಕಮಹಾದೇವಿ ಕ್ರಾಂತಿಕಾರಿ ಮಹಿಳೆ. ಸಮಾಜದ ಅನಿಷ್ಟಗಳನ್ನು ತಿರಸ್ಕರಿಸುವ ಪ್ರತಿಭಟಿಸುವ ಮನೋಭಾವಗಳನ್ನು ಬೆಳೆಸಿಕೊಂಡವಳು ಹಾಗೆಯೇ ಸಮಾಜವನ್ನು ತಿರಸ್ಕರಿಸಿ ಹೊರಟವಳು.

ಅಲ್ಲಮಪ್ರಭು

ಶಿವಶರಣರ ಚಳುವಳಿಯ ಮುಂಚೂಣಿಯಲ್ಲಿ ಕಾಣಿಸಿಕೊಳ್ಳುವ ಅಲ್ಲಮ, ಮಹಾಜ್ಞಾನಿ, ಸಾಧಕನಾಗಿ ಎಲ್ಲರಿಗಿಂತ ಎತ್ತರವಾದ ಸ್ಥಾನದಲ್ಲಿ ನಿಲ್ಲುತ್ತಾನೆ. ಆಳವಾದ ಆತ್ಮಚಿಂತನೆಯಿಂದ ದಿವ್ಯಜ್ಞಾನಿಯಾಗಿ ಆ ಬೆಳಕನ್ನು ಎಲ್ಲರಿಗೂ ನೀಡುತ್ತ ದೇಶ ಸಂಚಾರ ಮಾಡಿ ಕಲ್ಯಾಣಕ್ಕೆ ಬಂದು ಬಸವಣ್ಣನವರ ಜೊತೆಗೂಡಿ ಶೂನ್ಯ ಸಿಂಹಾಸನದ ಮಾರ್ಗದರ್ಶಿಯಾಗುತ್ತಾನೆ. ಗುಹೇಶ್ವರ ಎಂಬುದು ಅವನ ವಚನಗಳ ಅಂಕಿತ ಹರಿಹರನ ಪ್ರಭುದೇವರ ರಗಳೆ ಮತ್ತು ಚಾಮರಸನ ಪ್ರಭುಲಿಂಗಲೀಲೆಯಂಥ ಕಾವ್ಯ ಕೃತಿಗಳು ಅಲ್ಲಮನ ಜೀವನ ಚರಿತ್ರೆಯನ್ನು ಕಥೆ ಮಾಡಿ ಹೇಳುತ್ತವೆ.

ವೈಚಾರಿಕತೆಯ ಮೇರುವಿನ ಮೇಲೆ ನಿಂತು, ವೈರಾಗ್ಯದ ನಿಸ್ಪೃಶ್ಯತೆಯಿಂದ ಪ್ರತಿಯೊಂದರ ಗುಣಧರ್ಮವನ್ನು ಅಳೆದು ತೂಗುವ ಮಾರ್ಗವು ಅಲ್ಲಮನ ಬಹುತೇಕ ವಚನಗಳು ಪ್ರತಿರೋಧದ ದಾಟಿಯನ್ನೇ ಹಿಡಿದುಕೊಂಡು ಬರುತ್ತದೆ. ಅಲ್ಲಮನು ಸಮಾಜದ ವಸ್ತು ಸ್ಥಿತಿಯನ್ನು ತಿಳಿಸಿ, ಕುಂದುಕೊರತೆಗಳನ್ನು ಟೀಕಿಸುವುದಷ್ಟೆ ಮಾಡಲಿಲ್ಲ. ಅದನ್ನು ಸುಧಾರಿಸುವ, ಬದಲಿಸುವ ಮಾರ್ಗದರ್ಶನ ನೀಡುವ ಕಾರ್ಯವನ್ನು ಮಾಡಿದ್ದಾನೆ.

ಸತ್ಯವನ್ನು ನಿಷ್ಠುರವಾಗಿ ಸಾರಿ ಸಾಧಕರನ್ನು ಚುಚ್ಚಿ ಎಚ್ಚರಿಸುವಂಥ ವ್ಯಕ್ತಿತ್ವ ಅಲ್ಲಮನದು. ವಿಚಾರ ಕ್ರಾಂತಿಯನ್ನು ಪ್ರತಿಭಟಿಸುತ್ತಿದ್ದ ಸಂಪ್ರದಾಯ ವಾದಿಗಳಾದ ವಿರೋಧ ಶಕ್ತಿಗಳನ್ನು ಇನ್ನೊಂದು ಕಡೆ ಸಜ್ಜನರಂತೆ ದೇಹವನ್ನು ಧರಿಸಿದ್ದ ಆಡಂಬರ ಜೀವಿಗಳನ್ನು ಅಲ್ಲಮ ಪರಿಣಾಮಕಾರಿಯಾಗಿ ತಡೆಗಟ್ಟಿದನು.

ಅನ್ಯರನ್ನು ಮೆಚ್ಚಿಸುವುದಕ್ಕಾಗಿ ಕೈಗೊಂಡ ಆಡಂಬರದ ಆಚಾರಗಳನ್ನು ಅಲ್ಲಮಪ್ರಭು ಒಪ್ಪಲಿಲ್ಲ. ಕೇವಲ ಸಂಪ್ರದಾಯದ ಕರ್ಮಗಳಲ್ಲಿ ಮಗ್ನರಾಗಿರುವವರನ್ನು ಖಂಡಿಸುತ್ತಾರೆ. ಅದು ತಿರುಳನ್ನು ಬಿಟ್ಟು ಸಿಪ್ಪೆಯನ್ನು ಹಿಡಿದಂತೆ ಲಿಂಗವನ್ನು ಧರಿಸಿದ ಮಾತ್ರಕ್ಕೆ ಮುಕ್ತಿ ಲಭಿಸುತ್ತದೆ ಎಂದಾಗ ಅಲ್ಲಮನಿಗೆ ಅದು ಹಾಸ್ಯವಾಗಿ ಕಾಣುತ್ತದೆ. "ಹೊರಗೆನೆ ಕೊಯ್ದು, ಹೊರಗೆನೆ ಪೂಜಿಸಿದವರ ಕಂಡು ನಾಚಿದೆನೆಯ್ಯಾ". ಅಲ್ಲಮನು ಪ್ರಭುವಿನ ಇಂತಹ ವಚನಗಳಲ್ಲಿ ಹೆಜ್ಜೆ ಹೆಜ್ಜೆಗೂ ಸ್ವತಂತ್ರ ಮನೋಧರ್ಮವನ್ನು ಕಾಣಬಹುದು. ಅಲ್ಲಮನ ಮೂಢನಂಬಿಕೆಯನ್ನು ನಂಬುವುದಿಲ್ಲ.

ವಿಚಾರವಾದಕ್ಕೆ ಅಲ್ಲಮ ಪ್ರಭು ಮಾನ್ಯತೆಯಿತ್ತನು. ಆದರೆ ಅದನ್ನು ಒಳಗೊಂಡ ಶ್ರದ್ಧೆ ಮತ್ತು ಅರಿತ ತತ್ವಗಳ ಆಚರಣೆ ಇವುಗಳು ಅತ್ಯಗತ್ಯವಾದುವುಗಳು ಎನ್ನುತ್ತಾನೆ. ಅಷ್ಟೇ ಅಲ್ಲದೆ ವೇದ ಪುರಾಣಾದಿಗಳನ್ನು ಕುರಿತು ಅಲ್ಲಮ ಪ್ರಭು ಹೀಗೆ ಹೇಳುತ್ತಾನೆ. 'ವೇದ ಶಾಸ್ತ್ರಗಳು ಕೇವಲ ಬುದ್ಧಿ ಚಮತ್ಕಾರವಾದಾಗ ವ್ಯರ್ಥವಾಗುತ್ತವೆ, ನಿಜವಾದ ಜ್ಞಾನವನ್ನು ಅವು ತೋರಿಸಲಾರವು, ಸತ್ಯ ಇವುಗಳ ಆಚೆಗಿದೆ' ಎಂದು ಸೂಚಿಸುತ್ತಾನೆ.

ಅಲ್ಲಮನ ವಚನಗಳಲ್ಲಿ ಲೌಕಿಕ ಪ್ರಜ್ಞೆ ನಿರ್ಲಿಪ್ತ ಪ್ರಜ್ಞೆ ಮತ್ತು ಸಮಯ ಪ್ರಜ್ಞೆಯನ್ನು ಕಾಣಬಹುದು. ಇದು ತನ್ನತನದ ನಿಜ ಸ್ವರೂಪವನ್ನು ಹುಡುಕುವುದರಲ್ಲಿ ತೊಡಗುತ್ತದೆ. ಸತ್ಯವನ್ನು ನಿಷ್ಠುರವಾಗಿ ಸಾರಿ ಸಾಧಕರನ್ನು ಚುಚ್ಚಿ ಎಚ್ಚರಿಸುವಂಥ ವ್ಯಕ್ತಿತ್ವ ಅಲ್ಲಮನದು. ಅಲ್ಲಮನ ವಚನಗಳು ನೇರವಾದ ಮಾತು ವಿಶಿಷ್ಟ ಶಕ್ತಿ ಸಮನ್ವಿತವಾಗಿ ಮೈವೆತ್ತು ಬರುತ್ತವೆ. ಸಾದಕನನ್ನು ಎಚ್ಚರಿಸುವ ಹಿತನುಡಿಗಳು ನೇರವಾದ ಬಾಣದಂತೆ ಬರುತ್ತವೆ.

ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ
ಮಣ್ಣು ಮೆಯೆಯೆಂಬರು ಮಣ್ಣು ಮಾಯೆಯಲ್ಲ
ಮನದ ಮುಂದಣ ಆಶೆಯೇ ಮಾಯೆ ಕಾಣಾಗುಹೇಶ್ವರಾ

ಹೆಣ್ಣು - ಹೊನ್ನು - ಮಣ್ಣು ಇದು ಮಾಯೆಯಲ್ಲ ನಮ್ಮ ಮನದಲ್ಲಿರುವ ಆಸೆಯೆ ಮಾಯೆ ಎಂದು ಸ್ಪಷ್ಟಪಡಿಸುತ್ತಾರೆ.

ಅಲ್ಲಮ ಪ್ರಭುದೇವನ ವಚನಗಳಲ್ಲಿ ಭಕ್ತರನ್ನು ಈ ರೀತಿ ಟೀಕಿಸಿದ್ದಾನೆ. ಬೆಟ್ಟಕ್ಕೆ ಚಳಿಯಾದರೆ ಏನನ್ನು ಹೊದಿಸಲು ಸಾಧ್ಯ! ಬಯಲು ಬೆತ್ತಲೆಯಾಗಿರುವುದು

ಅದನ್ನು ಮುಚ್ಚಲು ಸಾಧ್ಯವಿಲ್ಲ. ಹಾಗೆಯೇ ಭಕ್ತನಾದವನು ವಿಶಾಲ ಮನಸ್ಸಿನವನೂ, ನಿಷ್ಠೆಯುಳ್ಳವನೂ ಆಗಿರಬೇಕು. ಬದಲಾಗಿ ಆತ ಸಂಸಾರದ ಬಂಧನಕ್ಕೆ ಒಳಗಾಗಿ ಶಿವಭಕ್ತಿಯನ್ನು ಮರೆತರೆ ಆತನನ್ನು ಯಾವುದಕ್ಕೂ ಹೋಲಿಸಲು ಸಾಧ್ಯವಿಲ್ಲ. ಆದ್ದರಿಂದ ಭಕ್ತನು ಬೆಟ್ಟದ ಹಾಗೆ ನಿಶ್ಚಲ ಮನಸ್ಸಿನವನೂ, ಬಯಲಿನಂತೆ ವಿಶಾಲ ಹೃದಯಿಯೂ ಆಗಿರಬೇಕೆಂಬುದು ಅಲ್ಲಮ ಪ್ರಭುವಿನ ಅಭಿಪ್ರಾಯವಾಗಿದೆ.

ಹೀಗೆ ವಚನಕಾರರು ಜಾತಿಯ ಉತ್ತಮವಿಕೆಯ ಅಹಂ ಅನ್ನು ಪಡೆಯಲು ಯಾವ ಯಾವ ಮಾರ್ಗ ಅನುಸರಿಸಬೇಕೊ ಅವನ್ನೆಲ್ಲ ಮಾಡಿದ್ದಾರೆ. ಶಿವಭಕ್ತರಾದವರಲ್ಲಿ ಜಾತಿಯಿಲ್ಲ ಅವರೆಲ್ಲ ಒಂದೇ ಕುಲ ಅದು ಶರಣರ ಕುಲ. ಇಂಥ ಆದರ್ಶದಿಂದ ಅಂತ್ಯಜರನ್ನು ಅಸ್ಪೃಶ್ಯರನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವುದರ ಮೂಲಕ ಅವರಿಗೆ ತಾವು ಮನುಷ್ಯರು ಎಂಬ ಭಾವ ಮೂಡಿಸಿದ್ದಾರೆ. ಒಂದು ಜಾತಿರಹಿತ ಸಮಾಜದ ಕಲ್ಪನೆಯನ್ನು ಇಟ್ಟುಕೊಂಡು ಮುಂದಕ್ಕೆ ಹೆಜ್ಜೆ ಇಟ್ಟ ವಚನಕಾರರ ಪ್ರಯತ್ನ ಸ್ತುತ್ಯಾರ್ಹವಾದುದು.

ಹರಿಹರ

ಕನ್ನಡ ಸಾಹಿತ್ಯದ ಪರಂಪರೆಯಲ್ಲಿ ಹರಿಹರನ ರಗಳೆಗಳು ವಿಶಿಷ್ಟ ರಚನೆಗಳಾಗಿದ್ದು ಹಲವು ಕಾರಣಗಳಿಂದಾಗಿ ಹರಿಹರನ ಧ್ವನಿ ಭಿನ್ನ ಧ್ವನಿಯಾಗಿದೆ. ವಚನ ಚಳುವಳಿಯ ನಂತರದ ಮೌನವನ್ನು ಹೊಡೆದೋಡಿಸಿ ಸಾಂಸ್ಕೃತಿಕ ಹೊಸ ಧ್ವನಿ ನೀಡಿ ಸಾಹಿತ್ಯ ಸೃಜಿಸಿದವನು ಹರಿಹರ.

ಹರಿಹರ ಸಾಹಿತ್ಯದ ಮನ, ಮಾತು, ವಸ್ತು, ಭಾಷೆ ರೂಪಗಳಲ್ಲಿ ಮುಕ್ತ ಸಮಾಜಕ್ಕೆ ಧ್ವನಿಯಾಗುವ ಉತ್ಸಾಹ ಎದ್ದು ಕೇಳಿಸುತ್ತದೆ. ಹೀಗಿದ್ದರೂ ಇಲ್ಲಿ ವಸ್ತು-ಧೋರಣೆಗಳಿಗೆ ಸಂಬಂಧಿಸಿದ ಹೋರಾಟವೇ ಸ್ಥಾಯಿಯಾಗಿ ನಿಂತು, ತನಗನುಗುಣವಾದ ಭಾಷೆ ರೂಪಗಳನ್ನು ಕಟ್ಟಿಕೊಂಡು ಅದು ಮುನ್ನಡೆಯುತ್ತದೆ. ಹೀಗಾಗಿ ಹರಿಹರನು ವಸ್ತು ಧೋರಣೆಗಳಲ್ಲಿ ತಾಳಿದ ಪ್ರಗತಿಪರ ನಿಲುವನ್ನು, ಪ್ರತಿಪಾದಿಸುವಲ್ಲಿ ಅವನು ತೋರಿಸುವ ಪ್ರತಿರೋಧದ ಪ್ರವೃತ್ತಿಯಲ್ಲಿಯೂ ನೋಡಬಹುದು.

ಹತ್ತನೆಯ ಶತಮಾನ ರಾಜಸತ್ತೆಯ ಸಂಘಟನೆಯ ಕಾಲವಾದರೆ, ೧೨ನೆಯ ಶತಮಾನ ರಾಜಸತ್ತೆಯ ವಿಘಟನೆಯ ಕಾಲ. ಆ ಕಾಲದ ರಾಜನಾದ ಈ ಬಿಜ್ಜಳನನ್ನು ಬಸವಣ್ಣನ ನೇತೃತ್ವದ ಪ್ರಜೆಗಳು ಪ್ರಶ್ನಿಸುತ್ತಿದ್ದುದು, ಒಮ್ಮೊಮ್ಮೆ ಪ್ರತಿಭಟಿಸುತ್ತಿದ್ದುದು ಈ ವಿಘಟನೆಯನ್ನು ಉಲ್ಬಣಗೊಳಿಸಿದ್ದವು. ಇವೆಲ್ಲವನ್ನು ನೋಡಿದರೆ ಹರಿಹರ ಉಳಿದುದು

ಸ್ಥಿತ್ಯಂತರ ಸಮಾಜದಲ್ಲಿ ಎಂದು ಸ್ಪಷ್ಟವಾಗುತ್ತವೆ. ಹರಿಹರಾದಿ ವೀರಶೈವ ಕವಿಗಳು ಬದುಕಿನಲ್ಲಿ ರಾಜತ್ವವನ್ನು ಧಿಕ್ಕರಿಸಿ ನಿಂತು, ಬರಹದಲ್ಲಿಯೂ ಇದರ ಧ್ವನಿಯನ್ನು ಕೇಳಿಸುತ್ತಾರೆ. ಹರಿಹರ ಮಾಡಿದ ಮೊದಲ ಕೆಲಸವೆಂದರೆ ಪಂಪಾದಿಗಳ ಸಾಹಿತ್ಯದ ಕೋಟೆಯನ್ನು ಕೆಡವಿ, ಒಳಗಿನ ಆಸ್ಥಾನ ಮಧ್ಯದ ಸಿಂಹಾಸನದಿಂದ ಅರಿಕೇಸರಿಯಂಥವರನ್ನು ಕೆಳಗಿಳಿಸಿ, ಮಾದರ ಚೆನ್ನಯ್ಯನಂಥವರಿಗೆ ನಾಯಕಪಟ್ಟ ಕಟ್ಟಿದುದು, ತಮ್ಮ ಕಾವ್ಯವನ್ನು ಪಂಡಿತರ್ ತಗುಳ್ಚಿ ಬಿಚ್ಚಳಿಸಬೇಕೆಂಬ ಆಸೆಯೆನ್ನೇ ಕೈಬಿಟ್ಟು ಜನ ಬದುಕಬೇಕೆಂಬ ಭಾವನೆಯಿಂದ ಕೃತಿರಚನೆಗೆ ಕೈ ಹಾಕಿದುದು. ಈ ಎಲ್ಲ ಧೋರಣೆಗಳ ಭೂಮಿಕೆಯ ಮೇಲೆ ಹರಿಹರ ತನ್ನ ಕಾವ್ಯ ಸೌಧವನ್ನು ಎತ್ತುತ್ತಾನೆ. ಕನ್ನಡದ ಮೊದಲ ಪ್ರತಿಭಟನ ಕವಿಯಾಗಿ ತೋರುತ್ತಾನೆ.

ಹರಿಹರನ ರಗಳೆಗಳಲ್ಲಿ ಸಂಘರ್ಷ ಅನಿವಾರ್ಯವಾಗಿ ತೋರಿಬರುತ್ತದೆ. ಆತನ ಯಾವುದೇ ರಗಳೆಯ ಪಾತ್ರಗಳಲ್ಲಿ ಎರಡು ಪಕ್ಷಗಳು ಏರ್ಪಡುತ್ತವೆ. ಬಸವರಾಜ ದೇವರ ರಗಳೆಯಲ್ಲಿ ಬಸವಣ್ಣ, ಸಂಬೋಳಿ ನಾಗಿದೇವ ಮೊದಲಾದ ಜಂಗಮರು ಅಂದರೆ ಬಸವ ಸಂವಿಧಾನವನ್ನು ಒಪ್ಪಿಕೊಂಡ ಪ್ರಜೆಗಳು ಒಂದು ವರ್ಗ, ಬಿಜ್ಜಳ ಪುರೋಹಿತರು ಮೊದಲಾದ ಬಿಜ್ಜಳ ಸಂವಿಧಾನವನ್ನು ಒಪ್ಪಿಕೊಂಡ ಪ್ರಜೆಗಳು ಇನ್ನೊಂದು ವರ್ಗ. ಈ ಎರಡು ವರ್ಗಗಳ ಹೋರಾಟ ಬಸವರಾಜ ದೇವರ ರಗಳೆಯ ಉದ್ದಕ್ಕೂ ಕಾಣಿಸುತ್ತದೆ. ಹೀಗೆಯೇ ನಿರಂಕುಶಮತಿತ್ವದ ಕೊಂಡಗುಳಿ ಕೇಶಿರಾಜ-ಸಾರ್ವಭೌಮತ್ವದ ವಿಕ್ರಮಾದಿತ್ಯ ಭಕ್ತಿಯ ಕಣ್ಣಪ್ಪ-ಕರ್ಮದ ವಿಪ್ರ, ಭೋಗಲಾಲಸೆಯ ಕೌಶಿಕ-ಯೋಗಶೀಲತೆಯ ಮಹಾದೇವಿ ಇತ್ಯಾದಿ ಪಕ್ಷ, ಪರಪಕ್ಷಗಳು ಅಲ್ಲಲ್ಲಿ ಗೋಚರಿಸುತ್ತವೆ.

ಹರಿಹರನ ಧೋರಣೆಗಳಲ್ಲಿ ಒಂದು ಅಂತರಂಗದ ಹೋರಾಟ, ಇನ್ನೊಂದು ಬಹಿರಂಗದ ಹೋರಾಟ-ಹೀಗೆ ಹೋರಾಟದ ಎರಡು ನೆಲೆಗಳನ್ನು ಕಾಣುತ್ತೇವೆ. ಇವುಗಳಲ್ಲಿ ಒಂದು ಆತ್ಮಶುದ್ಧಿಗೆ ಸಂಬಂಧಿಸಿರುವುದು, ಇನ್ನೊಂದು ಸಮಾಜ ಶುದ್ಧಿಗೆ ಸಂಬಂಧಿಸಿರುವುದು. ಹರಿಹರನ ಎಲ್ಲಾ ಕಥಾ ನಾಯಕರು ಅಂತರಂಗಶುದ್ಧಿಯ ವ್ಯಕ್ತಿಗತ ಹೋರಾಟದಲ್ಲಿ ಮೊದಲು ಜಯಶಾಲಿಯಾದವರು. ಆಮೇಲೆ ಅವರಲ್ಲಿ ಕೆಲವರು ಬಾಹ್ಯದಲ್ಲಿ ವ್ಯಕ್ತಿ-ವ್ಯಕ್ತಿ ಹೋರಾಟ ಮತ್ತು ವ್ಯಕ್ತಿ-ಸಮಾಜದ ಹೋರಾಟಗಳಿಗೆ ಇಳಿದವರು. ಕೌಶಿಕ -ನುಹಾದೇವಿಗಳಂಥವರ ಮಧ್ಯದ ಘೋಷಣೆ ವ್ಯಕ್ತಿ-ವ್ಯಕ್ತಿ ಮಟ್ಟದ ಹೋರಾಟವಾದರೆ ಬಸವಣ್ಣ-ಬಿಜ್ಜಳರ ನಡುವಿನದು ಭಕ್ತಿ-ಸಮಾಜ ಮಧ್ಯದ ಹೋರಾಟವಾಗಿದೆ.

ಸಮಾಜವೆನ್ನುವದು ನಾವು ರೂಪಿಸಿಕೊಂಡ, ಪ್ರಧಾನವಾಗಿ ಸ್ವಾರ್ಥಿಗಳು ರೂಪಿಸಿದ ಒಂದು ವ್ಯವಸ್ಥೆ. ಪ್ರರೋಹಿತರಿಂದ ವರ್ಣಭೇದ, ರಾಜರಿಂದ ವರ್ಗಭೇದ ಪುರುಷರಿಂದ ಲಿಂಗಭೇದ ವ್ಯವಸ್ಥೆಗಳು ನಮ್ಮ ಸಮಾಜದಲ್ಲಿ ನಿರ್ಮಾಣವಾಗಿವೆ. ಹರಿಹರ ಅನೇಕ ದಾರಿಗಳಿಂದ ಈ ಭೇದಗಳ ವಿರುದ್ಧ ಧ್ವನಿಯೆತ್ತುತ್ತಾನೆ. ಪಾತ್ರಗಳ ಮೂಲಕ ಹೋರಾಟವನ್ನೂ ನಡೆಸುತ್ತಾನೆ.

ಕೆಂಬಾವಿ ಭೋಗಣ್ಣನ ರಗಳೆಯಲ್ಲಿ ಸಂಘರ್ಷದ ವಾತಾವರಣ ತುಂಬಿಕೊಂಡಿದೆ. ಭೋಗಣ್ಣನು ಶೂದ್ರನನ್ನು ಮನೆಗೆ ಬರಮಾಡಿಕೊಂಡು 'ಪದದ್ವಯಮಂ ತೊಳೆದು ಪಾದೋದಕಂಗಳಂ ಕಣ್ಗಳೊಳಗೊತ್ತುತಂ' ಗೌರವಿಸುತ್ತಾನೆ. ಭೋಗಣ್ಣನನ್ನು ಕಂಡ ವಿಪ್ರರು ಅರಸನಿಗೆ ಚಾಡಿ ಹೇಳುವುದು, ಅರಸನು ಮನೆಯೊಳಗನಾಮಿಕನ ಪೊಗಿಸುವರೆ ಭೋಗಣ್ಣ ಎಂದು ಕೇಳಿದರೆ ನಾರಣ ಕ್ರಮಿತರಂ ಪೊಗಿಸಿದೆನೆ ಮನೆಯೊಳಗೆ, ಸೂರಿಭಟ್ಟರನೊಯ್ದು ಪೊಗಿಸಿದೆನೆ ಮನೆಯೊಳಗೆ ಶಿವನರಿಯದ ಹೊಲೆಯರಂ ಹೊಗಿಸೆ ಕೇಳರಸ, ಶಿವಭಕ್ತರಂ ಹೊಗಿಸಿದೆ ತಪ್ಪೆ ಹೇಳರಸ' ಎಂದು ಉತ್ತರಿಸುತ್ತಾನೆ. ರಾಜನಿಗೆ ಎದುರು ನಿಂತು ಆಡಿದ ಈ ಮಾತುಗಳಲ್ಲಿ ಸಂಘರ್ಷವನ್ನು ಗುರುತಿಸಬಹುದಾಗಿದೆ.

ಚೆನ್ನಯ್ಯ-ಪೋಳ, ತಿರುನಾಳ್ಪೋವ-ವಿಪ್ರ, ಶ್ವಪಯ್ಯ ಸಾಮವೇದಿ, ಭೋಗಣ್ಣ-ಚಂದಿಮ ಅರಸ ಹೀಗೆ ವ್ಯಕ್ತಿ ಮಟ್ಟದಲ್ಲಿ ಅಸ್ಪೃಶ್ಯತಾ ನಿರ್ಮೂಲನ ಘಟನೆಗಳು ಜರುಗಿದರೆ, ಬಸರಾಜದೇವರ ರಗಳೆಯಲ್ಲಿ ಮಾತ್ರ ಸಾಮಾಜಿಕ ಆಂದೋಲನದ ರೂಪದಲ್ಲಿ ಈ ಸಮಸ್ಯೆ ಚರ್ಚೆಗೆ ವಸ್ತುವಾಗುತ್ತದೆ. ಅಲ್ಲಲ್ಲಿ ತೀಕ್ಷ್ಣ ಹೋರಾಟದ ಧ್ವನಿ ಡಂಗುರ ಹೊಡೆದಂತೆ ಕೇಳಿಸುತ್ತದೆ. ಬಸವಣ್ಣ ಹೊಲಗೇರಿಯನ್ನು ಪ್ರವೇಶಿಸಿ ಶಿವಭಕ್ತ ಸಂಬೋಳಿ ನಾಗಿದೇವನ ಮನೆಯಲ್ಲಿ ಪ್ರಸಾದ ಸೇವಿಸುತ್ತಾನೆ. ಇದನ್ನು ಕಂಡ ಬ್ರಾಹ್ಮಣರು ಬಿಜ್ಜಳನಲ್ಲಿ ದೂರು ನೀಡುತ್ತಾರೆ. ಬಿಜ್ಜಳ ಬಸವಣ್ಣನನ್ನು ವಿಚಾರಣೆಗೆ ಕರೆಸುತ್ತಾನೆ. ಆಸ್ಥಾನ ಮೈಲಿಗೆಯಾಗುವುದೆಂದು ರಾಜಾಂಗಣದ ಬಯಲಿನಲ್ಲಿ ನ್ಯಾಯವಿಚಾರಣೆ ನಡೆಸುತ್ತಾನೆ. ಆಗ ಬಸವಣ್ಣ "ಎಲೆ ಬುದ್ಧಿಯಿಲ್ಲದ ಭೂಪ, ಎರಗಿವಿಯ ಮರುಳೆ, ನಾರಣಕ್ರಮಿತರ ಕೇರಿಯಂ ಪೊಕ್ಕೆನೆ, ಮುಕುಂದ ಭಟ್ಟರ ಮನೆಯಲುಂಡೆನೆ ಹರನನರಿಯದ ಹೊಲೆಯರ ಮನೆಯಂ ಹೊಕ್ಕುದಿಲ್ಲ" ಎಂದು ನುಡಿದ. ವಿಪ್ರನೊಬ್ಬ ಹರನಭಕ್ತರ ಮೈಯಲ್ಲಿ ಹಾಲು ಹರಿವುದೇ ಎಂದು ಸವಾಲು ಎಸೆದಾಗ ಹೌದೆಂದು ಸವಾಲು ಸ್ವೀಕರಿಸಿ ಎಲ್ಲರೆದುರಿಗೆ ಸಂಬೋಳಿ ನಾಗಿದೇವನನ್ನು

ಕರೆಸಿ ಅವನ ಮೈಯಲ್ಲಿ ಹಾಲು ಇರುವುದನ್ನು ತೋರಿಸಿ ವಿಪ್ರನ ಮೈಯಲ್ಲಿ ಕೀವು ರಕ್ತ ಇರುವುದನ್ನು ಪವಾಡದ ಮೂಲಕ ತೋರಿಸುತ್ತಾನೆ. ಸಂಬೋಳಿ ಎಂದು ಕೂಗುತ್ತ ಸಮಾಜದಲ್ಲಿ ಹೀನಾಯ ಪರಿಸ್ಥಿತಿಯಲ್ಲಿರುವ ಹೊಲೆಯ ನಾಗಿದೇವನನ್ನು 'ಹಿರಿಯ ಕುಲ' ಹಿರಿಯ ಮಹೇಶ್ವರ ಎಂಬ ಹೆಸರಿನಿಂದ ಕರೆದು ಅವನನ್ನು ಬ್ರಾಹ್ಮಣರಿಗಿಂತ ಶ್ರೇಷ್ಠ ಎಂದು ಸಾಧಿಸುವ ಮೂಲಕ ಆ ವ್ಯಕ್ತಿಗೊಂದು ಘನತೆಯನ್ನು ತುಂಬುತ್ತಾನೆ ಹರಿಹರ.

ಈ ಮುಖ್ಯ ಘಟನೆಗಳಲ್ಲದೆ ಪುರೋಹಿತರು ವ್ಯವಸ್ಥಿತವಾಗಿ ಪೋಷಿಸಿಕೊಂಡು ಬಂದಿದ್ದ ದಾನ, ಕರ್ಮಾಚರಣೆ, ಗೋಗ್ರಹಣಯುದ್ಧ ಮೊದಲಾದ ಮೌಲ್ಯ ಮತ್ತು ಆಚರಣೆಗಳನ್ನು ಹರಿಹರ ಆಗಾಗ ಪ್ರಶ್ನಿಸುತ್ತಾನೆ. ವಿಡಂಬಿಸುತ್ತಾನೆ, ತಳ್ಳಿಹಾಕುತ್ತಾನೆ.

ಹೀಗೆ ಹೊಲೆಯರನ್ನು ಕಥಾನಯಕನನ್ನಾಗಿ ಮಾಡಿಕೊಳ್ಳುವುದು ಅವರು ಹೀನರಲ್ಲವೆಂದು ಸಾಬೀತುಗೊಳಿಸುವ ಘಟನೆಗಳನ್ನು ಸಂಘಟಿಸುವುದು, ಅವರ ಸಮರ್ಥನೆಗೆ ಪರಿಣಾಮಕಾರಿ ಮಾತುಗಳನ್ನು ಬಳಸುವುದು ಸಾರ್ವಜನಿಕವಾದ ಪ್ರತಿ ಭಾವಗಳನ್ನು ಕಲ್ಪಿಸುವುದು ಒಂದು ಬಗೆಯಾದರೆ, ಇದಕ್ಕೆ ಪ್ರತಿಯಾಗಿ ಬ್ರಾಹ್ಮಣರ ಮೌಲ್ಯ-ಆಚರಣೆ-ವಿಚಾರಗಳನ್ನು ವಿಡಂಬಿಸುವುದು, ಅವರ ಸೋಲನ್ನು ಚಿತ್ರಿಸುವುದು ಈ ಸಂದರ್ಭದಲ್ಲಿ ಪುರೋಹಿತವರ್ಗ, ಪ್ರಭು-ವರ್ಗಗಳು ಒಂದಾಗಿ ನಿಲ್ಲುವಂತೆ ಮಾಡುವುದು-ಇವೆಲ್ಲ ಆತನ ಹೋರಾಟ ಪ್ರವೃತ್ತಿಗೆ ನಿದರ್ಶನವೆನಿಸಿವೆ.

ಇಂಥದೇ ಇನ್ನೊಂದು ವಿಷಯ ವರ್ಗಭೇದ ನಿವಾರಣೆಗಾಗಿ ಧ್ವನಿ ಎತ್ತಿದುದು, ಹರಿಹರನ ರಗಳೆಗಳ ಕಥಾನಾಯಕರೆಲ್ಲ ಸಂಪ್ರದಾಯ ವಿರೋಧಿಗಳಾಗಿರುವುದರಿಂದ ಸಹಜವಾಗಿಯೇ ಅವರು ವ್ಯವಸ್ಥೆಯನ್ನು ರಕ್ಷಿಸಿಕೊಂಡು ಹೋಗುವ ರಾಜನ ವಿರೋಧವನ್ನು ಕಟ್ಟಿಕೊಳ್ಳುತ್ತಾರೆ. ಇವರಲ್ಲಿ ಆರನೆಯ ವಿಕ್ರಮಾದಿತ್ಯನೊಂದಿಗೆ ಬಿಜ್ಜಳನೊಂದಿಗೆ ಅನೇಕ ಶರಣರು ವಾದಕ್ಕೆ ನಿಂತರೆ, ಸ್ಥಳೀಯ ಅರಸರಾದ ಚಂದಿಮರಸ ಮೊದಲಾದವರನ್ನೂ ಕಲವು ಶರಣರು ಎದುರು ಹಾಕಿಕೊಂಡ ಉದಾಹರಣೆಗಳಿವೆ. ಹೀಗೆ ಬೇರೆ ಬೇರೆ ರಗಳೆಗಳಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ರಾಜನೊಂದಿಗೆ ವಾದಕ್ಕೆ ನಿಂತರೆ, ಬಸರಾಜದೇವರ ರಗಳೆಯಲ್ಲಿ 'ರಾಜತ್ವ'ವನ್ನೇ ಪ್ರಶ್ನಿಸುವ ವಿಚಾರವನ್ನು ಕೈಗೆತ್ತಿಕೊಳ್ಳಲಾಗಿದೆ. ಇಲ್ಲಿಯೂ ರಾಜವರ್ಗ ಪುರೋಹಿತ ವರ್ಗಗಳು ಒಂದಾಗಿ ನಿಲ್ಲುವುದು ಗಮನಾರ್ಹ ಸಂಗತಿಯಾಗಿದೆ. ಬಸವಣ್ಣನಿಗೆ ಜಂಗಮ ಸಮಾಜ ಮತ್ತು ಸಂಗಮನಾಥರಲ್ಲಿ ಭೇದವಿಲ್ಲ. ಜಂಗಮರೇ ಬಸವಣ್ಣನಿಗೆ ಪ್ರಾಣವಾಗಿದ್ದುದನ್ನು, ಜಂಗಮರು ಹೋಗಲು ಪ್ರಾಣ ಹೋದ, ಜಂಗಮರು ಬರಲು ಪ್ರಾಣ ಬಂದ ಪವಾಡವನ್ನು ಕಥೆಯ ಮೂಲಕ ಸಂಕೇತಿಸುತ್ತಾನೆ. ಹೀಗೆ ಕಾವ್ಯದುದ್ದಕ್ಕೂ

ಜಂಗಮಪ್ರಭುತ್ವ-ಪ್ರಜಾ ಪ್ರಭುತ್ವವನ್ನು ಎತ್ತಿ ಹಿಡಿದು ರಾಜಪ್ರಭುತ್ವವನ್ನು ಧಿಕ್ಕರಿಸುವುದನ್ನು ನೋಡಬಹುದಾಗಿದೆ.

ಈ ವರ್ಣಭೇದ, ವರ್ಗಭೇದ ನಿವಾರಣೆಯಂತೆ ಸ್ತ್ರೀ-ಪುರುಷ ಭೇದ ನಿವಾರಣೆಯನ್ನು ಹರಿಹರನ ಕೃತಿಗಳಲ್ಲಿ ಆಗಾಗ ನೋಡಬಹುದಾಗಿದೆ. ಪುರುಷನನ್ನು ಹೀಗಿರುವಾಗ ಸ್ತ್ರೀಯರನ್ನು ಕಥಾನಾಯಕಿಯರನ್ನಾಗಿ ಸ್ವೀಕರಿಸಿದುದೇ ಹರಿಹರನ ಮೊದಲ ಪ್ರಗತಿಪರ ದೋರಣೆಯಾಗಿದೆ.

ಸಣ್ಣ ಸಣ್ಣ ರಗಳೆಗಳನ್ನು ಬಿಟ್ಟರೆ ಕನ್ನಡದ ಒಂದು ಮಹತ್ವದ ಮಾರ್ಗೀಯ ಕಾವ್ಯವಾಗಿರುವ ಗಿರಿಜಾಕಲ್ಯಾಣದ ಕಥಾ ನಾಯಕ ಶಿವನಲ್ಲ ಗಿರಿಜೆ. ಹೀಗಾಗಿ ಕನ್ನಡದಲ್ಲಿ ಮಹಿಳೆಯರನ್ನು ಕಥಾನಾಯಕಿಯನ್ನಾಗಿ ಮಾಡಿದ ಪ್ರಥಮ ಕವಿಯೆಂಬ ಗೌರವ ಹರಿಹರನಿಗೆ, ಪ್ರಥಮ ಕೃತಿಯೆಂಬ ಗೌರವ ಗಿರಿಜಾ ಕಲ್ಯಾಣಕ್ಕೆ ಸಲ್ಲುತ್ತದೆ. ಸಾಮಾನ್ಯವಾಗಿ ನಮ್ಮ ಕಾವ್ಯಗಳಲ್ಲಿ ಹೆಣ್ಣಿಗೆ ಸ್ವತಂತ್ರ ಧ್ವನಿಯಿಲ್ಲ. ಇದಕ್ಕೆ ವಿರುದ್ಧವೆನ್ನುವಂತೆ ಕವಿಯೇ ಹೇಳುವಂತೆ ಇಲ್ಲಿ 'ಭವಾನಿ ಮಾನಿ' ಭಕ್ತ ಚೈತನ್ಯದ ಬೆಂಕಿಯನ್ನು ಬೂದಿಯಾಗಿಸಿಕೊಳ್ಳದೆ ಪ್ರಜ್ಜಲಿಸುವ ಪಾತ್ರವಿದು. ಈ ಮಾತು ಅನೇಕ ಸಂದರ್ಭಗಳಲ್ಲಿ ಮೈಪಡೆದು ನಿಂತಿದೆ.

ಹೀಗೆ ಸಮಸ್ತ ಸಮಾಜವನ್ನೇ ಹಿಂದಿನ ಕವಿಗಳಿಗಿಂತ ಬೇರೆ ದೃಷ್ಟಿಕೋನದಿಂದ ಹರಿಹರ ನೋಡುತ್ತಾನೆ. ಪುರೋಹಿತ ಸಂಸ್ಕೃತಿ, ಪ್ರಭು ಸಂಸ್ಕೃತಿ ಮತ್ತು ಪುರುಷ ಸಂಸ್ಕೃತಿಗಳು ಪೋಷಿಸಿಕೊಂಡು ಬಂದ ಸಾಮಾಜಿಕ ಜೀವನ ಮೌಲ್ಯಗಳಿಗೆ ಹರಿಹರನು ವ್ಯಕ್ತಪಡಿಸುವ ಪ್ರತಿಕ್ರಿಯೆಗಳನ್ನು ಅವನ ಕಾವ್ಯಗಳಲ್ಲಿ ಅನ್ವೇಷಿಸುವುದು ಅಗತ್ಯವಿದೆ. ಏಕೆಂದರೆ ಅವನ ರಚನೆಗಳು ಶರಣರ ಆಂದೋಲನಕ್ಕೆ ಬರೆದ ಪ್ರಥಮ ಸಾಹಿತ್ಯಿಕ ವ್ಯಾಖ್ಯಾನವಾಗಿದ್ದರೂ ಅಲ್ಲಿ ಷಟ್‌ಸ್ಥಲ, ಅಷ್ಟಾವರಣ ಪಂಚಾಚಾರಗಳೇಂಬ ಧಾರ್ಮಿಕ ಅಂಶಗಳನ್ನು ಕೈ ಬಿಟ್ಟು, ಸಾಮಾಜಿಕ ಅಂಶಗಳಿಗೆ ಮಾತ್ರ ಒತ್ತು ಕೊಡಲಾಗಿದೆ. ಮೇಲಾಗಿ ಈತನು ವ್ಯವಸ್ಥೆಯನ್ನು ಬದುಕಿನಲ್ಲಿಯೂ, ಬರವಣಿಗೆಯಲ್ಲಿಯೂ ಪೋಷಿಸಿಕೊಂಡು ಬರುವ ಪ್ರತಿಗಾಮಿ ಕವಿಯಲ್ಲ, ವ್ಯವಸ್ಥೆಯನ್ನು ಬದುಕಿನಲ್ಲಿಯೂ ಒಪ್ಪಿಕೊಂಡು ಬರವಣಿಗೆಯಲ್ಲಿ ವಿರೋಧಿಸುವ ಅಷಾಢಭೂತಿ ಕವಿಯಲ್ಲ, ವ್ಯವಸ್ಥೆಯನ್ನು ಬದುಕಿನಲ್ಲಿಯೂ ಬರವಣಿಗೆಯಲ್ಲಿಯೂ ವಿರೋಧಿಸುವ ಪ್ರಗತಿಗಾಮಿ ಕವಿಯಾಗಿರುವುದರಿಂದ ಹರಿಹರನದು ಚಲನಶೀಲ ವಿಚಾರಧಾರೆಯಾಗಿದೆ.

"ಯಶೋಧರ ಚರಿತೆ" ಕನ್ನಡದ ಉತ್ತಮ ಕಾವ್ಯಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿವೆ. ಕಾವ್ಯದ ಯಶಸ್ವಿನ ಮೂಲ ಯಶೋಧರ-ಅಮೃತ ಮತಿಯರ ಪ್ರಣಯ ಕಥೆಯಲ್ಲಿದೆ ಎಂಬ ಭಾವನೆ ಸಾರ್ವತ್ರಿಕವಾಗಿರುವಂತಿವೆ.

ಕನ್ನಡದ ಮೊದಲ ಕೃತಿಗಳಲ್ಲಿ ಯುದ್ಧ, ಕಥಾವಸ್ತುವಿನ ಭಾಗವಾಗಿ ಕಥಾನಕದ ಭಾಗವಾಗುತ್ತದೆ. ಯುದ್ಧ ಒಂದು ಸಂಘರ್ಷದ ನಿರ್ಣಾಯಕ ಘಟ್ಟ ಅಥವಾ ಸಂಘರ್ಷದ ಲಕ್ಷಣಗಳ ಮರು ಹೊಂದಾಣಿಕೆ. ಆದ್ದರಿಂದ ಎಲ್ಲ ಯುದ್ಧಗಳ ನೈತಿಕತೆ ಒಂದು ಸಾಪೇಕ್ಷ ನೆಲೆ ಮಾತ್ರ. ಚರಿತ್ರೆಯ ವ್ಯಾಖ್ಯಾನಗಳಲ್ಲಿ ಮಾತ್ರ ಯುದ್ಧಗಳಿಗೆ ನೈತಿಕತೆ ಚೌಕಟ್ಟನ್ನು ಒದಗಿಸಲಾಗುತ್ತದೆ. ಹೀಗಾಗಿ ಯುದ್ಧದ ಪರಿಣಾಮವನ್ನು ಹಿಂಸೆಯೆಂದು ಪರಿಗಣಿಸುವುದು ಕೂಡ ವ್ಯಾಖ್ಯಾನದ ಭಾಗವಾಗುತ್ತದೆ. ಕೃತಿಯ ರಚನಕಾರನೂ ಯುದ್ಧವನ್ನು ಜೀವನ ಕ್ರಮದ ಭಾಗವನ್ನಾಗಿ ನಂಬುವವನೇ ಆಗಿರುತ್ತಾನೆ. ಆದ್ದರಿಂದ ಹಿಂಸೆಯ ಸಮರ್ಥನೆಂಬಂತೆ ಯುದ್ಧವನ್ನು ಚಿತ್ರಿಸುವನೆಂದು ಹೇಳುವಂತಿಲ್ಲ. ಈ ಯುದ್ಧ ಪ್ರಧಾನ ಕೃತಿಗಳಲ್ಲಿ ಹಿಂಸೆಯ ನೆಲೆಗಳು ಎಲ್ಲಿ ಅಡಕಗೊಂಡಿರುತ್ತವೆಯೆಂಬುದು ಮುಖ್ಯ ಪ್ರಶ್ನೆಯಾಗಿದೆ. ಹಿಂಸೆ ಒಂದು ಇಮ್ಮುಖ ಸ್ಥಿತಿ. 'ಹಿಂಸೆ ಮಾಡುವುದು' 'ಹಿಂಸೆಯಾಗುವುದು' ಎರಡೂ ಸಾಧ್ಯ. 'ಹಿಂಸೆಯ ಈ ಎರಡೂ ಸಾಧ್ಯತೆಗಳೇ ಅದನ್ನು ಕುರಿತ ವ್ಯಾಖ್ಯಾನಗಳಿಗೆ ಸಂದಿಗ್ಧತೆಯನ್ನು ತರುತ್ತದೆ. ಏಕೆಂದರೆ ಹಿಂಸಿಸುವವನಾಗಲೀ ಹಿಂಸೆ ಪಡುವವನಾಗಲೀ ಹಿಂಸೆಯ ಬಗ್ಗೆ ತಳೆಯುವ ನಿಲುವುಗಳು ಬಹುಮುಖಿಯಾಗಿ ಬಿಡುತ್ತವೆ. ಹಿಂಸಿಸುವವನು ತನ್ನ ಕ್ರಿಯೆಗೆ ಸಮರ್ಥನೆ ಹೊಂದಿರಬಹುದು ಅಥವಾ ಅವನ ಕ್ರಿಯೆಗೆ ಸಾಮಾಜಿಕ ಸಮ್ಮತಿ ಒದಗಿಸಬಹುದು. ಆತ ಹಿಂಸಿಸುವ ಕ್ರಿಯೆಯ ಬಗ್ಗೆ ಜಾಗ್ರತನಾಗಿರಬಹುದು. ಅರಿವಿಲ್ಲದೆಯೂ ಭಾಗಿಯಾಗಿರಬಹುದು. ಹಿಂಸಿಸುವ ಕ್ರಿಯೆಯ ಪರಿಣಾಮವಾಗಿ ಆತನಲ್ಲಿ ಹಲವು ಪರಸ್ಪರ ವಿರುದ್ಧವಾದ ಭಾವಗಳು ಉಂಟಾಗಬಹುದು. ಅವುಗಳಲ್ಲಿ ಹಿಂಸಿಸುವವನೇ ಹಿಂಸೆಪಡುವವನಾಗಿಯೂ ಪರಿವರ್ತಿತನಾಗಿರಬಹುದು. ಇವೆಲ್ಲ ಸ್ಥಿತಿಗಳಿಗೂ ನಿದರ್ಶನ ನೀಡುವುದು ಸಾಧ್ಯ. ಕೊನೆಯ ಸಾಧ್ಯತೆಗೆ ಜನ್ನನ 'ಯಶೋಧರ ಚರಿತ್ರೆ'ಯ ಯಶೋಧರನ ಕತೆ ಒಂದು ಒಳ್ಳೆಯ ಮಾದರಿ. ಅಮೃತಮತಿಯ ವಿವಾಹಬಾಹಿರ ಸಂಬಂಧವನ್ನು ಅರಿತವನು ಆಕೆಯನ್ನು ಕತ್ತಿಯಿಂದ ಎರಡು ಭಾಗ ಮಾಡಲು ಸಿದ್ಧನಾಗಿ ಅನಂತರ ಹೇಸಿ ಹಿಂತಿರುಗಿ ಮಾರನೆಯ ದಿನ 'ಆಟ'ಕ್ಕೆಂದು ಹೂವಿಂದ ಹೊಡೆಯುತ್ತಾನೆ ಆಕೆ ನೋವಿನಿಂದ ಚೀರುತ್ತಾಳೆ. ಬದಗನ ಕಾಲಿನ ಹೊಡೆತವನ್ನು ಸಹಿಸಿದ ಅಮೃತಮತಿ

ಹೂವಿನ ಹೊಡೆತಕ್ಕೆ ನೊಂದುದನ್ನು ಕಂಡು ಯಶೋಧರ ತನ್ನ ಕ್ರಿಯೆ ಹಾಗೂ ಅದರ ಪರಿಣಾಮಗಳ ಬಗ್ಗೆ ಜಾಗ್ರತನಾಗುತ್ತಾನೆ. ಇಡೀ ಘಟನೆಯನ್ನೇ ಹಿಂಸಿಸುವವನು ಹಾಗೂ ಹಿಂಸೆಯ ಪರಿಣಾಮಗಳ ಸ್ವರೂಪ ಅತ್ಯಂತ ಸಂದಿಗ್ಧವಾಗಿದೆ. ಮನಸ್ಸಿನ ಇಚ್ಛೆಗೆ ವಿರುದ್ಧವಾಗಿ ಮಾಡಿದ ನಿರ್ಧಾರವು ಕೂಡ ಒಂದು ರೀತಿಯ ಆತ್ಮಹಿಂಸೆಯಾಗಿ ಪರಿವರ್ತಿತವಾಗಿ ಮುಂದಿನ ಕಥಾನಕಕ್ಕೆ ದಾರಿ ಮಾಡಿಕೊಡುತ್ತದೆ. ಹಿಂಸೆ ಪಡುವವರ ಸ್ಥಿತಿಯೂ ಇಂಥದೆ. ಹಿಂಸೆ ಪಡುವಿಕೆ ವೈಯಕ್ತಿಕ ಹಾಗೂ ಸಾಮೂಹಿಕವಾಗಿರಬಹುದು. ಒಪ್ಪಿಗೆಯಿಂದ ನಡೆದದ್ದಾಗಿರಬಹುದು. ಮನಸ್ಸಿನ ವಿರುದ್ಧ ನಡೆದದ್ದಾಗಿರಬಹುದು.

ಹಿಂಸೆಯನ್ನು ಹೀಗೆ ವ್ಯಕ್ತಿಗತ ನೆಲೆಯಿಂದ ಹೊರತುಪಡಿಸಿ ಅಥವಾ ವ್ಯಕ್ತಿಗತ ನೆಲೆಯಿಂದ ವಿಸ್ತರಿಸಿ ಸಾಮಾಜಿಕ ನೆಲೆಗೆ ಒಯ್ದಾಗ ಅದರ ಸ್ವರೂಪವೇ ಭಿನ್ನವಾಗುತ್ತದೆ. ಈ ಹಿಂಸೆಯು ಹೇಳಿದ ಎರಡೂ ನೆಲೆಗಳೂ ಸಾಮಾಜಿಕ ಪರಿಪ್ರೇಕ್ಷ್ಯದಲ್ಲಿ ಪರಸ್ಪರ ಪೂರಕವಾಗಿ ಬಿಡುತ್ತದೆ. ಹಿಂಸೆಯ ಕಾರಣಗಳು ಸಾಮಾಜಿಕವಾದಾಗ ಅದರ ಕಾರ್ಯ ಪರಿಣಾಮಗಳು ಅನೇಕವಿದ್ದರೂ ಪೂರಕವಾಗಿಯೇ ಇರುವುದು ಸಾವು. ಯಶೋಧರ ಚರಿತೆಯಲ್ಲಿ ನಡೆದದ್ದು ಇದೇ ರೀತಿಯ ಹಿಂಸೆ

ಯಶೋಧರನ ಕಥೆ ಮೂಲಕ ಜೀವಹಿಂಸೆಯಿಂದ ಉಂಟಾಗುವ ಅನರ್ಥಗಳನ್ನು ತೋರಿಸುವುದು ಜನ್ನನ ಉದ್ದೇಶವಾಗಿದೆ. ಅಲ್ಲದೆ ಹಿಂಸೆಯ ಘೋರ ಪರಿಣಾಮಗಳನ್ನು ಚಿತ್ರಿಸಲೆಂದೇ ಅಂದರೆ ಕೇವಲ ಸಂಕಲ್ಪ ಹಿಂಸೆಗೇ ಜನ್ಮಾಂತರಗಳಲ್ಲಿ ತೊಳಲಿಸುವ ಸಾಮರ್ಥ್ಯವಿರುವುದಾದರೆ ಪ್ರತ್ಯಕ್ಷ ಹಿಂಸೆಯ ಫಲ ಇನ್ನೆಷ್ಟು ಘೋರವಾಗಿರಬಹುದು ಎಂಬುದನ್ನು ಕವಿ ಉತ್ಪ್ರೇಕ್ಷೆಗೊಳಿಸಿ ಹೇಳುತ್ತಾನೆ.

ಅಮೃತಮತಿಯ ಪ್ರಣಯ ಪ್ರಸಂಗ ಯಶೋಧರನ ಕಥೆಗೆ ಪ್ರೇರಕವಾಗಿ ಇರುವಂತೆ ಕಾವ್ಯದ ಮೂಲ ಉದ್ದೇಶದ ದೃಷ್ಟಿಯಿಂದ ಯಶೋಧರನ ಸಮಸ್ಯೆಗೆ ಪೂರಕವಾಗಿವೆ. ''ಸಂಕಲ್ಪನವಧೆಗಿನಿತಾಯ್ತು ದಿಟದಿನೇನೆನಾಗರ್'' ಎಂಬ ಮಾತಿನಲ್ಲಿಯ ಮೊದಲ ಭಾಗದ ಸಮಸ್ಯೆಯನ್ನು ಯಶೋಧರನ ಕಥೆಯಲ್ಲಿ ನೋಡಬಹುದು. ಪ್ರತ್ಯಕ್ಷ ಪಾಪದಿಂದ ಉಂಟಾಗುವ ಅನಾಹುತವನ್ನು ಕವಿ ಅಮೃತಮತಿಯ ಕಥೆಯಲ್ಲಿ ತೋರಿಸಿದ್ದಾನೆ. ಇಲ್ಲಿಯೂ ಕೂಡ ವಿಧಿವಿಳಸನದ ಪಾತ್ರವನ್ನು, ಉತ್ಪ್ರೇಕ್ಷೆಯ ತಂತ್ರವನ್ನು ಕೂಡಿಯೇ ಕವಿ ಉಪಯೋಗಿಸಿಕೊಂಡಿದ್ದಾನೆ ಕವಿಯ ಕಾವ್ಯದ ಘಟನೆಯ ಅತಾರ್ಕಿಕತೆಯನ್ನು ಅವಾಸ್ತವತೆಯನ್ನು ಎತ್ತಿ ತೋರಿಸಿ ಅಮೃತಮತಿಯ ಪಾಪದ ಘೋರತೆಯನ್ನು ಅತಿರಂಜಿತಗೊಳಿಸಿ ಸಮಾಜ ಜನತೆಗೆ ಹಿಂಸೆಯಿಂದ ಆಗುವ ದುಷ್ಪರಿಣಾಮಗಳನ್ನು ಎತ್ತಿ ಹೇಳುವುದು ಕವಿಯ

ಉದ್ದೇಶವಾಗಿದೆ. ಅಲ್ಲದೆ ಬದಗನೊಂದಿಗೆ ರಮಿಸುವ ಹೆಂಡತಿಯನ್ನು ಕೊಲ್ಲಲು ಖಡ್ಗ ಎತ್ತಿದ್ದರೂ ಅವನಿಗೆ ಅವರನ್ನು ನೋಡಿ ಅಸಹ್ಯವಾಗುವಂತಹ ಪ್ರಸಂಗವನ್ನು ಒದಗಿಸಿ ಕೊಲ್ಲದೆ ಬಿಡುತ್ತಾನೆ. ಅಂದರೆ ಯಶೋಧರ ಕೊಲೆಯಂಥ ಪ್ರತ್ಯಕ್ಷ ಪಾಪವನ್ನು ವಿರೋಧಿಸುತ್ತಾನೆ. ಸಂಕಲ್ಪ ಹಿಂಸೆಗೇ ಒದಗಬಹುದಾಗ ಜನ್ಮಾಂತರಗಳ ದುಃಖವನ್ನು ಕವಿಗೆ ತೋರಿಸಬೇಕಾಗಿದೆ. ವೈರಾಗ್ಯ ಪ್ರಚೋದಿಸುವ ಕೆಲಸವನ್ನು ಮಾಡುವುದರ ಜೊತೆಗೆ, ಯಶೋಧರ ಪ್ರತ್ಯಕ್ಷ ಹಿಂಸೆಯನ್ನು ಮಾಡದಂತೆ ತಡೆಯುವುದೂ ಅವನ ಉದ್ದೇಶವಾಗಿದೆ.

ಹೀಗೆ 'ಯಶೋದರ ಚರಿತೆ' ಮತೀಯ ತತ್ವವನ್ನು ಸಾರಹೊರಟಿರುವ ಕಾವ್ಯವಾಗಿದೆ. 'ಹಿಂಸೆ ಮಾಡುವುದು ತಪ್ಪು ಎಂದು ಸಾರುತ್ತಾನೆ.

ಅಡಿಟಿಪ್ಪಣಿ

೧. ಡಾ. ರಾಮಚಂದ್ರರಾವ್ ಬಿ., ಪಂಪನ ಚಾರಿತ್ರಿಕ ಹಿನ್ನೆಲೆ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂ. ೨, ೬೨ಪುಟ)

೨. ಡಾ. ರಾಮಚಂದ್ರರಾವ್ ಬಿ., ಪಂಪನ ಚಾರಿತ್ರಿಕ ಹಿನ್ನೆಲೆ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂ. ೨, ೬೩ ಪುಟ

೩. ಜಾತಿಯೊಳೆಲ್ಲಮುತ್ತಮದ ಜಾತಿಯ ವಿಪ್ರಕುಲ, ಪಂಪ ಭಾರತಂ ಪು.೧೪-೧೮

೪. ರನ್ನನ ಆದಿಪುರಾಣ (ಆಶ್ವಾಸ ಪದ್ಯ) ೧೬೬ ಪು. ೫೦

೫. ರನ್ನನ ಆದಿಪುರಾಣ (ಆಸ್ವಾಸ ಪದ್ಯ) ೧೫೬ ರಿಂದ೪೬೬, ಪು. ೧೧ ರಿಂದ೧೨

೬. ಅರವಿಂದಮಾಲಗತ್ತಿ, ಪ್ರಾಚೀನಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ ೧೯೯೩. ಪು. ೧೦೬

೭. ನಾಯಕ ಜಿ. ಎಚ್. ಪಂಪ ಒಂದು ಅಧ್ಯಯನ ಪುಟ ೨೧೭

೮. ಕಲಬುರ್ಗಿ ಎಂ. ಎಂ., ವಚನ ಸಾಹಿತ್ಯ ವಿವೇಚನೆ ೧೯೮೩, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಪುಟ. ೧೧

೯. ರನ್ನ ಹೀಗೆ ನೇರವಾಗಿ ಹೇಳಿಕೊಂಡಾಗಲೂ, ರನ್ನ ಬಳೆಗಾರ ಕುಲಕ್ಕೆ ಸಂಬಂಧಿಸಿದವನಲ್ಲ ಎಂದು ಬಾವಿಸುವವರೂ ಇದ್ದಾರೆ. ವಿವರಕ್ಕಾಗಿ ಬಾ.ರಾ. ಗೋಪಾಲ್, ಪ್ರಬುದ್ಧ ಕರ್ನಾಟಕ೪೦೪ (ಉದ್ಧರಣೆ) ಮೈಸೂರು ವಿ.ವಿ. ಕನ್ನಡ ಸಾಹಿತ್ಯ ಚರಿತ್ರೆ, ಸಂ. ೩, ಪು. ೫೮೪

೧೦. ವೀರಣ್ಣ ಸಿ., ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ ಪು.೨೯೫

೧೧. ನಾಗರಾಜಯ್ಯ ಸಂ. ಪ., ಅಜಿತ ಪುರಾಣ ತಿಲಕಂ. ಪು.೩೪ ಮತ್ತು ೧೭೮

೧೨. ಪೂರ್ಣಚಂದ್ರ ತೇಜಸ್ವಿಯವರು, ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ, ಸಂಕ್ರಮಣ ಸಂಚಿಕೆ ೬೦, ೧೯೭೪ ಪುಟ ೯೭

೧೩. ಶಿವರುದ್ರಪ್ಪ ಜಿ. ಎಸ್., ಕನ್ನಡ ಕವಿಗಳ ಕಾವ್ಯ ಕಲ್ಪನೆ, ೧೯೮೯ ಮೈಸೂರು ವಿಶ್ವವಿದ್ಯಾಲಯ, ಮೈಸೂರು ಪುಟ ೩೭

೧೪. ಬಸವರಾಜ ಕಲ್ಗುಡಿ, ಮಧ್ಯಕಾಲೀನ ಭಕ್ತಿ ಮತ್ತು ಅನುಭವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ ೧೯೮೮, ಸಾಹಿತ್ಯ ಪರಿಷತ್, ಬೆಂಗಳೂರು ೨೩೮ ಪುಟ

೧೫. ಶಿವರುದ್ರಪ್ಪ ಜಿ.ಎಸ್., ಶಿವಶರಣರ ಕಾಯಕ ಸಿದ್ಧಾಂತ, ೧೯೮೫, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಪುಟ, ೬೬

ಅಧ್ಯಾಯ - ನಾಲ್ಕು

ಹರಿಶ್ಚಂದ್ರ ಕಾವ್ಯದಲ್ಲಿ ಪ್ರತಿರೋಧ

ಸಾಮಾಜಿಕ ರಚನೆ ಶ್ರೇಣೀಕರಣದಿಂದ ರೂಪುಗೊಂಡಿದೆ. ಇದಕ್ಕೆ ಮೂಲ ಆಧಾರ ವೈಧಿಕ ಧರ್ಮ. ಇದರಲ್ಲಿ ಮನುಷ್ಯ ಮನುಷ್ಯರ ನಡುವೆ ತಾರತಮ್ಯ ಬೆಳೆದು ಮೇಲು ಕೀಳು ಎನ್ನುವ ದೃಷ್ಟಿ ಬೇರೂರಿದೆ. ಶ್ರೇಣೀಕರಣದಲ್ಲಿ ಮೇಲ್ ಸ್ತರದಲ್ಲಿರುವ ವರ್ಗ ಪ್ರಭುತ್ವವು ಸೇರಿದಂತೆ ಉಳಿದ ತನ್ನ ಕೆಳಗಿನ ಎಲ್ಲಾ ವರ್ಗಗಳನ್ನು ವಿವಿಧ ವಿಧಾನಗಳ ಮೂಲಕ ತನ್ನ ಅಂಕುಶದಿಂದ ನಿಯಂತ್ರಿಸಿದೆ. ಅದರಲ್ಲಿ ತಾರತಮ್ಯವೇ ತಳಹದಿಯಾದ ವೈಧಿಕ ಧರ್ಮವನ್ನು ಎಲ್ಲಾ ಜಾತಿಗಳು ವಿಧೇಯತೆಯಿಂದ ಅನುಸರಿಸುವಂತೆ ಮಾಡಿರುವುದು, ಅಕ್ಷರದ ಪ್ರಯೋಜನವನ್ನು ಮೇಲ್ವರ್ಗದವನಾದ ತನಗೆ ಮಾತ್ರ ಸೀಮಿತಗೊಳಿಸಿಕೊಂಡು ಉಳಿದ ಜಾತಿ, ವರ್ಗಗಳ ಸ್ವಾತಂತ್ರ್ಯ ಅಭಿವ್ಯಕ್ತಿಯನ್ನು ತುಳಿದಿರುವುದು ಮತ್ತು ಕೆಳ ವರ್ಗಗಳ ಮೇಲೆ ದಬ್ಬಾಳಿಕೆ ನಡೆಸಿರುವುದು ಪ್ರಮುಖ ಅಂಶಗಳು.

ಇಂತಹ ಕೆಟ್ಟ ವ್ಯವಸ್ಥೆಯ ವಿರುದ್ಧ ನಮ್ಮ ಚರಿತ್ರೆಯಲ್ಲಿ ಹಲವಾರು ಧ್ವನಿಗಳು ಮೊಳಗಿವೆ. ಪ್ರತಿರೋಧದ ಧ್ವನಿಯನ್ನು ಮೊದಲು ಎತ್ತಿದವರು ಬೌದ್ಧಧರ್ಮ ಮತ್ತು ಜೈನಧರ್ಮ. ಇವು ಚರಿತ್ರೆಯಲ್ಲಿ ಮೊದಲ ಬಾರಿಗೆ ವೈಧಿಕ ಧರ್ಮಕ್ಕೆ ವಿರುದ್ಧವಾಗಿ ಜನಿಸಿ ಮನುಷ್ಯ, ಮನುಷ್ಯರ ನಡುವೆ ಸಮಾನತೆಯನ್ನು ಸಾರಿದವು. ಆದರೆ ವೈದಿಕ ಧರ್ಮದ ಕ್ರೌರ್ಯಕ್ಕೆ ಈಡಾದ ಬೌದ್ಧ ಧರ್ಮ ಹುಟ್ಟಿದ ನಾಡನ್ನೇ ತ್ಯಜಿಸಬೇಕಾಯಿತು. ಜೈನಧರ್ಮ ಕಠೋರ ನೀತಿಗಳ ಮೂಲಕ ದ್ವೀಪಾಕಾರವಾಯ್ತು. ಹೀಗೆ ಹುಟ್ಟಿದ ಜನಪರ ಧ್ವನಿಗಳು ಕ್ಷೀಣಿಸಿದಂತೆಲ್ಲಾ ವೈದಿಕ ಸಂಸ್ಕೃತಿ ವಿಸ್ತೃತಗೊಳ್ಳುತ್ತಲೇ ಬಂದಿತು.

ಬಹುಸಂಖ್ಯಾತರ ಮೇಲೆ ಅಲ್ಪಸಂಖ್ಯಾತರ ದಬ್ಬಾಳಿಕೆಯ ಪ್ರತೀಕವಾಗಿದ್ದ ವೈದಿಕ ಧರ್ಮವನ್ನು ಬೇರು ಸಮೇತ ನಾಶಪಡಿಸಿ, ಅಲ್ಲಿ ಮನುಷ್ಯ ಮನುಷ್ಯನನ್ನು ಗೌರವಿಸುವ, ಮೇಲು ಕೀಳು, ಹೆಣ್ಣು ಗಂಡು ಎಂಬ ಭೇದವಿಲ್ಲದೆ ಎಲ್ಲರೂ ಸಮಾನರು ಎನ್ನುವ ತತ್ವದಡಿಯಲ್ಲಿ ನವ ಸಮಾಜ ನಿರ್ಮಿಸುವ ಆಶಯ ಹೊತ್ತು ಸುಮಾರು ಕ್ರಿ.ಶ. ೧೨ನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ವೀರಶೈವ ಧರ್ಮ ಉದಯವಾಯಿತು. ಕಾಲಕ್ರಮೇಣ ಪ್ರತಿ ಮನುಷ್ಯನನ್ನು ಗೌರವಿಸುವ ನೆಲೆಯಲ್ಲಿ ರೂಪಿತವಾಗಿದ್ದ ವೀರಶೈವ ಧರ್ಮದ ತತ್ವಗಳು ವೈದಿಕ ವ್ಯವಸ್ಥೆಯ ಪರವಾಗಿರುವ ಪುರೋಹಿತಶಾಹಿ

ಮನೋಧರ್ಮಗಳ ಹಿಡಿತದಲ್ಲಿ ಸಿಕ್ಕವು. ಹೀಗಾಗಿ ಒಳಶ್ರೇಣೀಕರಣವು ವೀರಶೈವ ಧರ್ಮದಲ್ಲೇ ಹುಟ್ಟಿ ಬಂದದ್ದು ದುರಂತವೆನ್ನಬಹುದಾದ ಬೆಳವಣಿಗೆಯೆನ್ನಬಹುದು. ಆದರೆ ನಿಜವಾಗಿಯೂ ದುರಾದೃಷ್ಟವೆನ್ನಬಹುದಾದ ಸಂಗತಿಯೆಂದರೆ ವೀರಶೈವರಾಗಿ ಪರಿವರ್ತನೆ ಹೊಂದಿದ ಕೆಳಸ್ತರದ ಜನರು ಸಾಮಾಜಿಕ ಸ್ಥಾನದ ದೃಷ್ಟಿಯಿಂದ ಅಸ್ಪೃಶ್ಯರಾಗಿಯೇ ಉಳಿದದ್ದು.

ಹೀಗೆ ಸಮಾನತೆಯ ಆದರ್ಶ ಹೊತ್ತು ಉದಯಿಸಿದ ವೀರಶೈವ ಧರ್ಮ ಪುರೋಹಿತಶಾಹಿ ಮನೋಧರ್ಮಗಳಿಗೆ ಬಲಿಯಾಯಿತು. ಕ್ರಿಯಾತ್ಮಕವಾದ ತನ್ನ ಆದರ್ಶಗಳನ್ನು ಆ ನೆಲೆಯಲ್ಲಿ ಸ್ಥಗಿತಗೊಳಿಸಿತು. ಜಾತಿಯಾಗಿ ರೂಪುಗೊಳ್ಳುತ್ತಾ ಆದರ್ಶಗಳನ್ನು ಉಪದೇಶಗಳನ್ನಾಗಿ ಬಳಸಿಕೊಂಡಿತು. ಕನ್ನಡ ಸಾಹಿತ್ಯದಲ್ಲಿ ವಚನಕಾರರ ನಂತರ ವೀರಶೈವ ತತ್ವಗಳು ಪುರೋಹಿತಶಾಹಿ ಬೆಂಬಲಿತ ಮುಖವಾಡದಲ್ಲಿ ಪ್ರಕಟವಾದವು. ರಾಘವಾಂಕನ ಕೃತಿಗಳಲ್ಲಿ ಈ ನೆಲೆಗಳು ಗೋಚರವಾಗುತ್ತವೆ.

ಈ ಹಿನ್ನೆಲೆಯಲ್ಲಿ ರಾಘವಾಂಕನ ಹರಿಶ್ಚಂದ್ರ ಕಾವ್ಯವನ್ನು ನೋಡಬಹುದು. ವಚನಕಾರರಿಗೂ ರಾಘವಾಂಕನಿಗೂ ಸುಮಾರು ಮುಕ್ಕಾಲು ಶತಮಾನದ ಅಂತರವಿದೆ. ಈ ಸಮಯದಲ್ಲಿ ವಚನಕಾರರ ಆದರ್ಶಗಳು ಮತ್ತು ವಚನಗಳು ಚಲನಶೀಲತೆಯನ್ನು ಕಳೆದುಕೊಂಡಿದ್ದವು. ಇವುಗಳಿಗೆ ಜೀವ ತುಂಬುವ ಕೆಲಸ ವೀರಶೈವ ಕವಿಗಳಿಂದ ಆಯಿತು. ಹಾಗೆಯೇ ಐತಿಹಾಸಿಕ ವ್ಯಕ್ತಿಗಳಾದ ಬಸವ, ಸಿದ್ಧರಾಮರು ಕಾವ್ಯಗಳ ನಾಯಕರಾಗುತ್ತಾರೆ.

ಈ ಕಾವ್ಯದಲ್ಲಿನ 'ಹಂಪೆಯರಸನ ಹೊಗಳ್ವ ನಾಲಿಗೆಯೊಳ್ ಅನ್ಯ ದೈವದ ಭವಿಗಳಂ ಕೀರ್ತಿಸಿದೆನಾದೊಡೆ ಮನಸಿಜಾರಿಯ ಭಕ್ತನಲ್ಲ' ಎನ್ನುವ ಪ್ರತಿಜ್ಞಾ ಭಕ್ತಿಯಿಂದ ಇದೊಂದು ವೀರಶೈವ ಕೃತಿ ಎಂದು ತಿಳಿಯುತ್ತದೆ. ಕಾವ್ಯದಲ್ಲಿ ನಡೆ-ನುಡಿಗಳ ಅಭಿನ್ನತೆಯ ಸಾಕಾರದ ತತ್ವವು ಇದನ್ನೇ ಸ್ಪಷ್ಟಪಡಿಸುತ್ತದೆ. ಹಾಗೆಯೇ ಇದೊಂದು ಉತ್ತಮ ಸಾಹಿತ್ಯ ಕೃತಿ ಎನ್ನುವುದರ ಬಗ್ಗೆ ಎರಡು ಮಾತಿಲ್ಲ. ಇದೇ ಸಂದರ್ಭದಲ್ಲಿ ಎಲ್ಲಾ ರೀತಿಯಲ್ಲೂ ವೈದಿಕ ಧರ್ಮವನ್ನು ವಿರೋಧಿಸಿ ಹುಟ್ಟಿದ ವೀರಶೈವ ಧರ್ಮವು ಪ್ರತ್ಯಕ್ಷವಾಗಿಯೇ ಅದರೊಂದಿಗೆ ರಾಜಿ ಮಾಡಿಕೊಂಡು ವೈದಿಕ ವೀರಶೈವಮಾದ ಲಕ್ಷಣಗಳು ವಿರೋಧಾಭಾಸವಾದರೂ ವಾಸ್ತವವಾಗಿ ಮೈ ತಳೆದಿರುವುದು ಈ ಕೃತಿಯಲ್ಲಿ ಕಂಡು ಬರುತ್ತದೆ. ಅವುಗಳನ್ನು ಗುರುತಿಸುವುದಾದರೆ ಮೊದಲನೆಯದಾಗಿ ಈ ಕೃತಿಗೆ ಆಧಾರವಾದ ಕಥಾಹಂದರ ವೈದಿಕ ಕಾವ್ಯ ಪರಂಪರೆಯ ಮೂಲದ್ದೆ. ಇದನ್ನು ತನ್ನ ಕೃತಿಗೆ ಸ್ವೀಕರಿಸುವ ಸಂದರ್ಭದಲ್ಲಿ ಕವಿ ವೈದಿಕ ಧರ್ಮದ ಬಗ್ಗೆ

ಒಲವು ತೋರಿಸಿದ್ದ. ವೀರಶೈವ ಧರ್ಮವನ್ನು ವೈದಿಕ ಧರ್ಮದಲ್ಲಿ ವಿಲೀನಗೊಳಿಸುವುದರ ಮೂಲಕ ಸಾಮಾಜಿಕವಾಗಿ ಈ ಧರ್ಮದ ಸ್ಥಾನವನ್ನು ಎತ್ತರದಲ್ಲಿ ನಿಲ್ಲಿಸುವುದು, ಉದ್ದೇಶವಾಗಿದ್ದಂತೆ ಕಾಣುತ್ತದೆ.

ವಚನಕಾರರು ಪ್ರಭುತ್ವದ ಸರ್ವಾಧಿಕಾರವನ್ನು ಧಿಕ್ಕರಿಸಿದವರು; ಹಾಗಾಗಿ ಜನಸಾಮಾನ್ಯರ ಪರವಾಗಿದ್ದವರು. ಆದರೆ ರಾಘವಾಂಕ ರಾಜಕೇಂದ್ರಿತ ಕಾವ್ಯ ಬರೆದಿದ್ದಾನೆ. ಆಗಿನ ಸಂದರ್ಭ ರಾಜಪ್ರಭುತ್ವ ಆಳ್ವಿಕೆ ನಡೆಸುತ್ತಿತ್ತು. ರಾಜಪ್ರಭುತ್ವವು ತಮ್ಮ ಧರ್ಮಕ್ಕೆ ಮನ್ನಣೆ ನೀಡುವ ಕವಿ ಮತ್ತು ಸಾಹಿತ್ಯವನ್ನು ಗೌರವಿಸಬೇಕು ಎನ್ನುವ ಬಯಕೆ ಹೊಂದಿದ್ದರು. ಕಾವ್ಯದಲ್ಲಿ ಕವಿ ತನ್ನನ್ನು ಪಂಡಿತನೆಂದು ಕರೆದುಕೊಂಡಿದ್ದಾನೆ. ಹರಿಶ್ಚಂದ್ರ ಕಾವ್ಯವು ಕೂಡ ಈ ಹಿಂದಿನ ಕನ್ನಡ ಕಾವ್ಯಗಳಂತೆ ಪಂಡಿತ ಮಾನ್ಯಕ್ಕೆ ಅಗತ್ಯವಾದ ಅಷ್ಟಾದಶ ವರ್ಣನೆಗಳಿಂದ ರಚಿತವಾಗಿದೆ.

ರಾಘವಾಂಕ ಹರಿಶ್ಚಂದ್ರ ಕಾವ್ಯ ಬರೆದದ್ದು ಆತನ ಗುರುವಾದ ಹರಿಹರನಿಗೆ ಅಸಮಾಧಾನ ಉಂಟಾಯಿತೆಂದು ಒಂದು ದಂತಕಥೆ ಪ್ರಚಲಿತದಲ್ಲಿದೆ. ಏಕೆಂದರೆ ಹರಿಹರ ಭಕ್ತ ಕವಿ. ಅವನು ಕೃತಿ ರಚನೆಗೆ ತೊಡಗುವ ವೇಳೆಗೆ ಕನ್ನಡ ಸಾಹಿತ್ಯದ ದ್ವಿತೀಯ ನವೋದಯಕ್ಕೆ ಕಾರಣವಾದ ಶಿವಶರಣರ ಧಾರ್ಮಿಕ ಸಾಮಾಜಿಕ ಕ್ರಾಂತಿಯ ಹಿನ್ನೆಲೆ ಇತ್ತು. ವಚನಕಾರರ ಉಜ್ವಲವಾದ ಬದುಕು, ಅವರ ಭಕ್ತಿಯ ಉತ್ಕಟತೆ, ಅವರ ವಚನಗಳಲ್ಲಿ ಅಭಿವ್ಯಕ್ತವಾದ ದಿಟ್ಟತನದ ವ್ಯಕ್ತಿತ್ವ, ಅವರು ನಿರ್ಮಿಸಿದ ಮೌಲ್ಯಗಳು, ಅವರಿಗೆ ಪ್ರೇರಣೆ ನೀಡಿದ ಶಿವಭಕ್ತರ ಚರಿತೆಗಳು ಇವೇ ಮೊದಲಾದುವನ್ನು ತನ್ನ ಕಾವ್ಯದ ಮೂಲ ದ್ರವ್ಯವನ್ನಾಗಿ ಮಾಡಿಕೊಳ್ಳುವ ಸದವಕಾಶ ತನ್ನ ಪಾಲಿಗೆ ಬಂದಿದೆ ಎಂದು ಹರಿಹರನು ಭಾವಿಸಿದಂತೆ ತೋರುತ್ತದೆ. ಆದುದರಿಂದ ಆತ ಶಿವನನ್ನು ಶಿವಶರಣರನ್ನು ಕುರಿತು ಕಾವ್ಯ ಬರೆಯುತ್ತೇನೆ 'ಮನುಜರ ಮೇಲೆ, ಸಾಮವರ ಮೇಲೆ, ಕನಿಷ್ಠರ ಮೇಲೆ' ಕಾವ್ಯವನ್ನು ಬರೆಯುವುದಿಲ್ಲ ಎಂದು ತನ್ನ ಕಾವ್ಯೋದ್ದೇಶವನ್ನು ಘೋಷಿಸಿಕೊಂಡನು. ಇಂತಹ ಸಂದರ್ಭದಲ್ಲಿ ತನ್ನ ಸೋದರಳಿಯನೂ, ಶಿಷ್ಯನೂ ಆದ ರಾಘವಾಂಕನೂ ಇದೇ ಕಾವ್ಯ ಧರ್ಮವನ್ನು ಇರಿಸಿಕೊಳ್ಳಬೇಕೆಂದು ಸಹಜವಾಗಿಯೇ ಆಶಿಸಿದ ಹರಿಹರನಿಗೆ, ರಾಘವಾಂಕನು ಬರೆದ ಹರಿಶ್ಚಂದ್ರ ಕಾವ್ಯ ಈ ಚೌಕಟ್ಟಿಗೆ ಒಳಪಡದೆ ಹೋದದ್ದು ಅಸಮಾಧಾನದ ಸಂಗತಿಯಾಗಿರಬೇಕು. ತನ್ನ ಹಿಂದೆ ಶಿವಭಕ್ತರ ಕಥೆಗಳೂ, ವಚನಕಾರರ ಜೀವನವೂ ಉಜ್ವಲವಾದ ಸ್ಫೂರ್ತಿಯ ಗಣಿಯಾಗಿರುವಾಗ 'ಮೃಡ ಕಥಾಕಥನ' ಕ್ಕೆ ಆಸ್ಪದವಾಗುವಂಥ ವಸ್ತುವನ್ನು ಕುರಿತು ಹಾಡತಕ್ಕದ್ದು ಅಂದು ಕವಿಯಾಗಿ ಹುಟ್ಟಿದವನ ಪುಣ್ಯ ಮತ್ತು ಕರ್ತವ್ಯ ಎನ್ನುವ ಧರ್ಮಶ್ರದ್ಧೆ ಹರಿಹರನ ಸಂಪ್ರದಾಯದ

ಮೂಲೋದ್ದೇಶವಾಗಿರುವಾಗ, ರಾಘವಾಂಕ ಅದನ್ನು ಕಡೆಗಣಿಸಿ 'ನರಪತಿ' ಹರಿಶ್ಚಂದ್ರನ ಅದರಲ್ಲಿಯೂ ಶಿವನೊಲಿದ ಮೇಲೆ ಲೌಕಿಕ ರಾಜ್ಯ ವೈಭವಕ್ಕೆ ಹಿಂದಿರುಗಿದವರನ್ನು ಕುರಿತು ಬರೆದ ಕಾವ್ಯ ಹರಿಹರನ ಪರಂಪರೆಗೆ ವಿರೋಧವೆಂದೇ ತೋರಿದ್ದು ಆಶ್ಚರ್ಯವಿಲ್ಲ[7] ಎಂಬುದು ಶಿವರುದ್ರಪ್ಪರ ಅಭಿಪ್ರಾಯವಾಗಿದೆ.

ರಾಘವಾಂಕನು ತಾನು ಹರಿಹರನ 'ವರಸುತ' ಎಂದು ವಿನಯವನ್ನು ಪ್ರಕಟಿಸಿಕೊಂಡಿದ್ದರೂ, ಆತ ಹರಿಹರನಷ್ಟೇ ಸ್ವತಂತ್ರ ಮನೋಧರ್ಮದ ಕವಿ. ಆದುದರಿಂದಲೇ ಹರಿಹರನ ವ್ಯಕ್ತಿತ್ವದ ನೆರಳಿನಲ್ಲಿ ತನ್ನ ಸ್ವಂತಿಕೆಯನ್ನು ಮರೆ ಮಾಡಿಕೊಂಡು ಬದುಕಲು ಇಚ್ಛಿಸದೆ ಹರಿಹರನಿಂದ ಭಿನ್ನವಾದ ಅಭಿವ್ಯಕ್ತಿ ಕ್ರಮವೊಂದನ್ನು ಆವಿಷ್ಕಾರ ಮಾಡಿಕೊಂಡದ್ದರಿಂದ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೊಟ್ಟ ಮೊದಲಿಗೆ ಏಕಕಾಲಕ್ಕೆ ಎರಡು ಮಹತ್ವದ ಅಭಿವ್ಯಕ್ತಿ ಪರಂಪರೆಗಳಾದ ರಗಳೆ-ಷಟ್ಪದಿ ಹುಟ್ಟಲು ಸಾಧ್ಯವಾಯಿತು. ಹರಿಹರನು ತನಗಿಂತ ಹಿಂದಿನ ಚಂಪೂ ಪರಂಪರೆಯನ್ನು ಎದುರಿಸಿ ವಸ್ತು ಹಾಗೂ ರೀತಿಯ ದೃಷ್ಟಿಯಿಂದ ಹೇಗೆ ಬೇರೆಯಾಗಿ ನಿಂತನೋ ಹಾಗೆಯೇ ರಾಘವಾಂಕನೂ ತನ್ನ ಸಮಕಾಲೀನನಾದ ಹರಿಹರನಂತಹ ಕವಿ, ರಗಳೆ ಎಂಬ ಅಭಿವ್ಯಕ್ತಿ ಮಾಧ್ಯಮದ ಸಾಧ್ಯತೆಗಳನ್ನು ಸೂರೆ ಮಾಡಿದ ಮೇಲೆ, ಅದೇ ಸಂದರ್ಭದಲ್ಲಿ ಬರೆಯುವ ತಾನು ಹರಿಹರನ ರಗಳೆಯ ಪರಂಪರೆಯಿಂದ ಬೇರೆಯಾದ ತನ್ನದೇ ಆದೊಂದು ಅಭಿವ್ಯಕ್ತಿಯನ್ನು ನಿರ್ಮಿಸಿಕೊಳ್ಳಬೇಕೆಂಬ ವಿವೇಕ ರಾಘವಾಂಕನಲ್ಲಿ ಉದಯಿಸಿದ್ದು, ಆತನ ವಿವೇಚನಾಶೀಲತೆಗೂ ಸ್ವತಂತ್ರ ಮನೋಧರ್ಮಕ್ಕೂ ಸಾಕ್ಷಿಯಾಗಿದೆ. ಹೀಗಾಗಿ ಹರಿಹರನ 'ರೀತಿ' ಯನ್ನು ಅನುಸರಿಸಲೊಲ್ಲದೆ, ರಾಘವಾಂಕ ಷಟ್ಪದಿಯನ್ನು ತನ್ನ 'ರೀತಿ'ಯನ್ನಾಗಿ ರೂಪಿಸಿಕೊಂಡು ಷಟ್ಪದೀ ಪರಂಪರೆಗೆ ಆದ್ಯನಾದನು. ಹರಿಹರನನ್ನು 'ರೀತಿ'ಯ ದೃಷ್ಟಿಯಿಂದ ಅನುಸರಿಸಲೊಲ್ಲದೆ ಹೋದದ್ದಷ್ಟೇ ಅಲ್ಲ. 'ವಸ್ತು'ವಿನ ದೃಷ್ಟಿಯಿಂದಲೂ ತಾನೂ ಹರಿಹರನನ್ನು ಅನುಸರಿಸಲೊಲ್ಲೆನೆಂಬ ಪ್ರತಿಭಟನೆಯನ್ನು 'ಹರಿಶ್ಚಂದ್ರ ಕಾವ್ಯ'ದ ರಚನೆಯ ಮೂಲಕ ರಾಘವಾಂಕನು ಪ್ರಕಟಿಸಿದ್ದಾನೆ.

ರಾಘವಾಂಕನ ಹರಿಶ್ಚಂದ್ರನು ನೇರವಾಗಿ ಕೈಲಾಸದಿಂದ ಅಲ್ಲಿ ಮಾಡಿದ ಯಾವುದೋ ತಪ್ಪನ್ನು ಇಲ್ಲಿ ತಿದ್ದಿಕೊಳ್ಳಲೆಂದು, ಶಾಪದಿಂದಲೋ ಅನುಗ್ರಹದಿಂದಲೋ ಮರ್ತ್ಯಕ್ಕೆ ಇಳಿದು ಬಂದವನಲ್ಲ. ಅವನು ಮನುಷ್ಯನಾಗಿ ಇದ್ದುಕೊಂಡೇ ಸತ್ಯ ಸಾಧನೆಯಿಂದ ಶಿವನನ್ನು ಮೆಚ್ಚಿಸಿದವನು. ಹರಿಹರನ ಶಿವಶರಣರಂತೆ, ಶಿವನೊಲಿದ ಮೇಲೆ ಶಿವನೊಂದಿಗೆ ಕೈಲಾಸಕ್ಕೆ ಹೋದವನಲ್ಲ. ಮತ್ತೆ ಈ ನೆಲದ ಮೇಲೆ ನಿಂತವನು.

ಹರಿಶ್ಚಂದ್ರನ ಬದುಕು, ಹರಿಹರನು ಚಿತ್ರಿಸಿರುವ ಶಿವಶರಣರ ಬದುಕಿಗಿಂತ ಕಡಿಮೆಯದೇನೂ ಅಲ್ಲ. 'ಹರಿಶ್ಚಂದ್ರ ಕಾವ್ಯ'ವನ್ನು ಬರೆದದ್ದರಿಂದ, ರಾಘವಾಂಕನು ಹರಿಹರನ ಪರಂಪರೆಗಾಗಲಿ, ವೀರಶೈವ ಧರ್ಮಕ್ಕಾಗಲಿ ಅಪಚಾರ ಮಾಡಿದಂತೇನೂ ತೋರುವುದಿಲ್ಲ. ಆದರೂ 'ವಸ್ತು'ವಿನ ದೃಷ್ಟಿಯಿಂದ ಹರಿಶ್ಚಂದ್ರ ಕಾವ್ಯದ ಮೂಲಕ ಬೇರೆಯಾಗಿಯೇ ರಾಘವಾಂಕ ನಿಂತಿದ್ದು, ಹರಿಹರನ ಅಥವಾ ಹರಿಹರ ಪರಂಪರೆಯ ತೀವ್ರ ಪ್ರತಿಭಟನೆಗೆ ಪಾತ್ರವಾದಂತೆ ತೋರುತ್ತದೆ. ಅಂದಿನ ಸಾಹಿತ್ಯಕ ಧೋರಣೆ, 'ಹರಿಶ್ಚಂದ್ರ ಕಾವ್ಯ' ಈ ಒಂದು ಉದ್ದೇಶಕ್ಕೆ ಹೊರತಾದ ರಚನೆಯಂತೆ ತೋರಿದ್ದರಿಂದಲೇ ಅದನ್ನು ಕುರಿತು ಪ್ರತಿಭಟನೆ ಎದ್ದಂತೆ ತೋರುತ್ತದೆ. 'ಅಂತೂ ಒಂದು ಮತಧರ್ಮದ ಪರಿಸರದಲ್ಲಿ ಹುಟ್ಟಿ, ಮೊಟ್ಟ ಮೊದಲನೆಯದಾಗಿ, ನೇರವಾಗಿ, ಮತ-ಧರ್ಮ ಪ್ರಸಾರವನ್ನು ತನ್ನ ಕಾವ್ಯ ಧರ್ಮವನ್ನಾಗಿ ಮಾಡಿಕೊಳ್ಳದೆ ಹೋದ ಕವಿಯೊಬ್ಬನ ವಿಷಯದಲ್ಲಿ ಜನ ತಮ್ಮ ತೀವ್ರ ಪ್ರತಿಭಟನೆಯನ್ನು ಸೂಚಿಸಿದ ಸಂಗತಿ'[೨] ಪ್ರಮುಖವಾಗಿದೆ.

'ಹರಿಶ್ಚಂದ್ರ ಕಾವ್ಯ'ವನ್ನು ಬರೆಯುವಲ್ಲಿ ಮಾತ್ರ ರಾಘವಾಂಕನಿಗೆ, ತಾನು ಈ ಕೃತಿಯ ಮೂಲಕ ಹರಿಹರ ಪರಂಪರೆಯನ್ನು ತೃಪ್ತಿಪಡಿಸುವ ಮತ-ಧರ್ಮ ಪ್ರಸಾರದ ಉದ್ದೇಶ ಪ್ರಧಾನವಾಗಿರದೆ, ತನ್ನ ಮತ-ಧರ್ಮದ ಮಿತಿಗೆ ಮೀರಿದ ಬೇರೊಂದು ವಿಶ್ವಸಾಮಾನ್ಯವಾದ ವಸ್ತುವನ್ನು ಪ್ರತಿಪಾದಿಸುವ ಉದ್ದೇಶವೇ ಪ್ರಧಾನವಾಗಿತ್ತು. ಇದರಿಂದಲೇ "ಸಿದ್ಧರಾಮ ಪುರಾಣ, ಸೋಮನಾಥ ಚರಿತೆ ಇವೆರಡಕ್ಕಿಂತಲೂ ಹರಿಶ್ಚಂದ್ರ ಕಾವ್ಯದಲ್ಲಿ ಮತಾಂಶಗಳು ವಿರಳವಾಗಿಯೂ, ಕಾವ್ಯಾಂಶಗಳೂ ನಿಬಿಡವಾಗಿಯೂ ಇವೆ"[೩]

ಒಟ್ಟಿನಲ್ಲಿ ಸ್ವತಂತ್ರ ಮನೋಧರ್ಮದ ರಾಘವಾಂಕನ ಕವಿಪ್ರಜ್ಞೆ ತನ್ನ ಕಾಲದ ಮತ-ಧರ್ಮದ ಸೆಳವಿಗೆ ಸಿಕ್ಕಿ ಹೇಗೆ ಕಾವ್ಯವನ್ನು ಮತ-ಧರ್ಮ ಪ್ರಸಾರದ ಮಾಧ್ಯಮವನ್ನಾಗಿ ಮಾಡಿಕೊಳ್ಳುವ ನಿರ್ಬಂಧಕ್ಕೆ ಒಳಗಾಯಿತೆಂಬುದನ್ನು ಕಾಣಬಹುದು. 'ರಾಘವಾಂಕನ ಕಾವ್ಯ' ಸಿದ್ಧಿಯ ಹೆಗ್ಗುರುತೆಂದರೆ ಹರಿಶ್ಚಂದ್ರ ಕಾವ್ಯ. ಅವನ ಶಕ್ತಿ ವಿಶೇಷಗಳೆಲ್ಲ ಇದರಲ್ಲಿ ಮೇಳಗೊಂಡಿದೆ.[೪]

ರಾಘವಾಂಕನ ಪ್ರಥಮ ಕೃತಿಯಾದ ಹರಿಶ್ಚಂದ್ರ ಕಾವ್ಯ ಕನ್ನಡ ಸಾಹಿತ್ಯದಲ್ಲಿಯೇ ಒಂದು ಅತ್ಯಂತ ಶ್ರೇಷ್ಠವಾದ ಕೃತಿ. 'ಹರಿಶ್ಚಂದ್ರ ಕಾವ್ಯ' ರಾಘವಾಂಕನನ್ನು ಮಹಾಕವಿ ಪಟ್ಟಕ್ಕೆ ವಿಶ್ವ ಸಾಹಿತ್ಯದ ಎತ್ತರಕ್ಕೆ ತಂದು ಮುಟ್ಟಿಸಿದ ಮಹಾಕಾವ್ಯ. ಇಂದು ರಾಘವಾಂಕನ ಹೆಸರು ಸ್ಥಿರವಾಗಿದ್ದು, ಆತನ ಉಳಿದ ವೀರಶೈವ

ಕಾವ್ಯಗಳಿಂದಲ್ಲ; ಆತನ ಮೊದಲ ಮಹಾಕಾವ್ಯ 'ಹರಿಶ್ಚಂದ್ರ ಕಾವ್ಯ' ದಿಂದ. ಈ ಕಾವ್ಯ ರಾಘವಾಂಕನನ್ನು ತುಂಬಾ ಜನಪ್ರಿಯಗೊಳಿಸಿದ ಕಾವ್ಯ. 'ಹರನೆಂಬುದೇ ಸತ್ಯ, ಸತ್ಯವೆಂಬುದೇ ಹರನು' ಎಂಬ ತತ್ವವನ್ನು ವಿವರಿಸಲು ಹುಟ್ಟಿದ ಕಾವ್ಯವೇ 'ಹರಿಶ್ಚಂದ್ರ ಕಾವ್ಯ'. ಸತ್ಯಸಂಧನಾದ ಹರಿಶ್ಚಂದ್ರ ತನ್ನ ಸತ್ಯನಿಷ್ಠೆಯನ್ನು ಪ್ರಯೋಗಕ್ಕೊಡ್ಡಿ ವಿಶ್ವಾಮಿತ್ರನ ತಂತ್ರದ ಬೇಲಿಯನ್ನು ಕತ್ತರಿಸಿ ಹಾಕಿದ ಅದ್ಭುತ ಕಥಾನಕ, ಈ ಕಾವ್ಯದ ಕಥಾವಸ್ತು. ವಿಶ್ವ ಸಾಹಿತ್ಯಕ್ಕೇ ತಲೆಮಣಿಯಾದ ಮಹಾಕಾವ್ಯ ರಾಘವಾಂಕನ 'ಹರಿಶ್ಚಂದ್ರ ಕಾವ್ಯ'.

'ಹರಿಶ್ಚಂದ್ರ ಕಾವ್ಯ'ದಲ್ಲಿ ಎದ್ದು ಕಾಣುವ ಮತ್ತೊಂದು ವಿಶೇಷ ಗುಣವೆಂದರೆ ಇಲ್ಲಿಯ ಸಂಭಾಷಣಾ ಚಾತುರ್ಯ. ವಶಿಷ್ಟ-ವಿಶ್ವಾಮಿತ್ರ, ಹರಿಶ್ಚಂದ್ರ-ವಿಶ್ವಾಮಿತ್ರ ಹಾಗೂ ಹರಿಶ್ಚಂದ್ರ-ಹೊಲತಿಯರ ಸಂವಾದಗಳು. ಸಂಭಾಷಣಾ ಚಾತುರ್ಯಕ್ಕೆ ಇವು ಅತ್ಯುತ್ತಮ ನಿದರ್ಶನಗಳೆನಿಸಿವೆ. ರಾಘವಾಂಕನಲ್ಲಿ ಅದ್ಭುತವಾದ ನಾಟ್ಯ ಪ್ರತಿಭೆ ಇರುವ ಕಾರಣದಿಂದಲೇ ಇಂತಹ ಶಬ್ದ ಚಿತ್ರಗಳನ್ನು ನೀಡುವುದು ಅವನಿಂದ ಸಾಧ್ಯವಾಗಿದೆ. ರಾಘವಾಂಕನ ಕಾವ್ಯ ಶೈಲಿಯ ವಿಶೇಷತೆಯೆಂದರೆ ಆತನ ನಾಟ್ಯ ಶೈಲಿ ನಾಟಕೀಯ ಶೈಲಿ. ಆತನ 'ಹರಿಶ್ಚಂದ್ರ ಕಾವ್ಯ' ವನ್ನು ಓದುತ್ತಿದ್ದರೆ, ಒಂದು ನಾಟಕವನ್ನೇ ಓದಿದಂತಾಗುತ್ತದೆ. ಹೀಗಾಗಿ ಇದೊಂದು ಕಾವ್ಯ ನಾಟಕ.

'ಹರಿಶ್ಚಂದ್ರ-ಹೊಲತಿಯರ ಪ್ರಸಂಗ' ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ದ ರಸಘಟ್ಟಿಗಳಲ್ಲೊಂದು. ಇಲ್ಲಿ ಹರಿಶ್ಚಂದ್ರನ ಕುಲಾಭಿಮಾನ ಬಹು ರಮ್ಯವಾಗಿ ಚಿತ್ರಿತವಾಗಿದೆ. ಹರಿಶ್ಚಂದ್ರ-ಹೊಲತಿಯರ ಮೂಲಕ ಕವಿ ರಾಘವಾಂಕ ಅಂದಿನ ಸಮಾಜದ ಮೇಲು-ಕೀಳಿನ ಜೀವಂತ ಚಿತ್ರವನ್ನೇ ಕೊಟ್ಟಿದ್ದಾನೆ. ಇದು ಆ ಕಾಲದ ಸಮಕಾಲೀನ ಜೀವನದ ನೈಜ-ಚಿತ್ರಣ.

ಚಕ್ರವರ್ತಿ ಹರಿಶ್ಚಂದ್ರನಿಂದ ಹುಸಿಯನ್ನಾಡಿಸುತ್ತೇನೆಂದು ಪ್ರತಿಜ್ಞೆ ಮಾಡಿದ ವಿಶ್ವಾಮಿತ್ರ ಅವನಿಗೆ ಅನೇಕ ಸಂಕಟದ ಸಂದರ್ಭಗಳನ್ನುಂಟು ಮಾಡುತ್ತಾನೆ. ಆದರೆ ಹರಿಶ್ಚಂದ್ರ ಸತ್ಯ, ಧರ್ಮ, ನ್ಯಾಯಗಳಿಗೆ ಅಪವಾದವೆಸಗದಂತೆ ಧೃಢ ನಿಲುವನ್ನು ತಾಳುತ್ತಾನೆ.

ಇಂತಹ ಸಂದರ್ಭದಲ್ಲಿ ವಿಶ್ವಾಮಿತ್ರನು ಇಬ್ಬರು ಕನ್ನಿಕೆಯರನ್ನು ಸೃಷ್ಟಿಸಿ ತೋಟದಲ್ಲಿ ಕುಳಿತಿದ್ದ ಹರಿಶ್ಚಂದ್ರನೆಡೆಗೆ ಕಳುಹಿಸುತ್ತಾನೆ. ವಿಶ್ವಾಮಿತ್ರನ ಮಾಯಾತಂತ್ರದಿಂದ ಸೃಷ್ಟಿಯಾದ ಈ ಕನ್ನಿಕೆಯರನ್ನು ಕವಿ ರಾಘವಾಂಕ

ಹೊಲತಿಯರೆಂದೇ ಕರೆಯುತ್ತಾನೆ. 'ಋಷಿಗೆ ಅತಿ ಕೋಪವೇ ಹೊಲೆ' ಎನ್ನುವ ರಾಘವಾಂಕ ವಿಶ್ವಾಮಿತ್ರ ಮುನಿಯ ಕೋಪದಿಂದ ಹುಟ್ಟಿದ ಇವರೂ ಸಹಿತ ಹೊಲತಿಯರೇ ಎನ್ನುತ್ತಾನೆ. ಈ ಹೊಲತಿಯರು ಹರಿಶ್ಚಂದ್ರನ ಸುತ್ತ ಸುಳಿದು ಅವನ ಗಮನವನ್ನು ಸೆಳೆದು ಅವನನ್ನು ಆಕರ್ಷಿಸಲು ಪ್ರಯತ್ನಿಸುತ್ತಾರೆ. ಅಷ್ಟು ಮಾತ್ರವಲ್ಲ, 'ವಿಶ್ವಾಮಿತ್ರನ ಪುತ್ರಿಯರು ನಾವು, ನಾವು ನಿನ್ನ ಪ್ರೀತಿಸುತ್ತೇವೆ, ನೀನು ನಮ್ಮನ್ನು ಮದುವೆಯಾಗಬೇಕು' ಎಂದು ಆಗ್ರಹಿಸತೊಡಗುತ್ತಾರೆ. ಆದರೆ ಕುಲದ ಬಗೆಗೆ ಅಪಾರ ಅಭಿಮಾನಿಯಾಗಿದ್ದ ಹರಿಶ್ಚಂದ್ರ ಇದನ್ನು ಒಪ್ಪುವುದಿಲ್ಲ. ಏಕಪತ್ನಿ ವ್ರತಸ್ಥನಾದ ತಾನು ಅನ್ಯ ಕನ್ಯೆಯರನ್ನು ಕಣ್ಣೆತ್ತಿ ನೋಡುವುದೂ ಸಾಧ್ಯವಿಲ್ಲವೆಂದು ಹರಿಶ್ಚಂದ್ರ ಉತ್ತರಿಸುತ್ತಾನೆ.

ಆಗ ಆ ಹೊಲತಿಯರು ಹರಿಶ್ಚಂದ್ರನೊಂದಿಗೆ ತರ್ಕಬದ್ಧವಾದ ವಾದಕ್ಕೆ ಅಣಿಯಾಗುತ್ತಾರೆ. ಹರಿಶ್ಚಂದ್ರನ ಸತ್ಯಧರ್ಮ ನಿಷ್ಠೆ, ಆ ಹರಿಶ್ಚಂದ್ರನನ್ನು ಸತ್ಯ-ಧರ್ಮಗಳ ದಾರಿಯಿಂದ ದಿಕ್ಕು ತಪ್ಪಿಸುವ ವಿಶ್ವಾಮಿತ್ರನ ತಂತ್ರಗಾರಿಕೆ ಇವೆಲ್ಲ ಈ ಕಾವ್ಯದಲ್ಲಿ ಮನೋಜ್ಞವಾಗಿ ಮೂಡಿ ಬಂದಿವೆ.

ಈ ರೀತಿ ಮೊದಲಿನಿಂದ ಕಡೆಯ ತನಕ ಸನ್ನಿವೇಶಗಳ ಮೇಲೆ ಸನ್ನಿವೇಶಗಳನ್ನು ನಿರ್ಮಿಸಿಕೊಂಡು, ಕಥೆಯನ್ನು ಬೆಳೆಯಿಸಿರುವ ರೀತಿ ಅಪೂರ್ವವಾಗಿದೆ. ಕನ್ನಡದಲ್ಲಿ ಹರಿಶ್ಚಂದ್ರನ ಕಥೆಯನ್ನು ಸಮಗ್ರವಾಗಿ ಪುನರ್ ನಿರ್ಮಿಸಿದವರಲ್ಲಿ ರಾಘವಾಂಕನೇ ಮೊದಲಿಗನಾಗಿದ್ದಾನೆ. "ರಾಘವಾಂಕನಿಗಿಂತ ಹಿಂದಿನ ಎಲ್ಲಾ ಆಕರಗಳೊಡನೆ ಇದರ ಸಂವಿಧಾನವನ್ನು ಹೋಲಿಸಿದರೆ, ಭಾರತೀಯ ಸಾಹಿತ್ಯದಲ್ಲಿಯೇ ಕಾಣದೊರೆಯದ ನೂತನ ಸನ್ನಿವೇಶ ಸೃಷ್ಟಿ, ಕೃತಿಬಂಧ ಇಲ್ಲಿದೆ ಎಂಬುದು ಹೆಮ್ಮೆಯ ಸಂಗತಿ"[38].

ರಾಘವಾಂಕನ 'ಹರಿಶ್ಚಂದ್ರ ಕಾವ್ಯ' ಹರಿಹರನಿಗಾಗಲಿ ಅವನಿಗೆ ಹಿನ್ನೆಲೆಯಾದ ವಚನಕಾರರಿಗಾಗಲಿ ಖಂಡಿತ ವಿರೋಧಿಯಾಗಿಲ್ಲ. ರಾಘವಾಂಕ ತಾನು ವಚನಕಾರರ ವೈಚಾರಿಕತೆಯ ಹಿನ್ನೆಲೆಯಲ್ಲಿ ಬದುಕಿದವನು ಎನ್ನುವುದನ್ನು 'ಹರಿಶ್ಚಂದ್ರ ಕಾವ್ಯ'ದ ಮೂಲಕ ಖಚಿತಪಡಿಸಿದ್ದಾನೆ. ಹರಿಶ್ಚಂದ್ರ ಕಾವ್ಯದಲ್ಲಿ ವಚನಕಾರರು ಎತ್ತಿ ಹಿಡಿದ ಸತ್ಯ ನಿಷ್ಠೆಯನ್ನೂ, ಅವರು ವಿಶೇಷವಾಗಿ ಎತ್ತಿಕೊಂಡು ಚರ್ಚಿಸಿದ. 'ಹೊಲೆತನ'ದ ಪ್ರಶ್ನೆಯನ್ನೂ, ಸಿದ್ಧರಾಮ ಪುರಾಣದಲ್ಲಿ 'ಕಾಯಕವೇ ಕೈಲಾಸ' ಎಂಬ ತತ್ವವನ್ನೂ, ಸೋಮನಾಥ ಚರಿತ್ರೆಯಲ್ಲಿ ಮಾಹೇಶ್ವರ ಸ್ಥಲದ ನಿಷ್ಠೆಯನ್ನೂ ರಾಘವಾಂಕನು ಚಿತ್ರಿಸಿರುವುದನ್ನು ಗಮನಿಸಬೇಕು. ಹೀಗಲ್ಲದೆ ಬೇರೆಯ ಹಿನ್ನೆಲೆಯಲ್ಲಿ ರಚಿತವಾಗಿದ್ದರೆ, ಈ ಕೃತಿಯ ಸ್ವರೂಪವೇ ಈಗಿರುವುದಕ್ಕಿಂದ ಬೇರೆಯೇ

ಸ್ವರೂಪದ್ದಾಗಿರುತ್ತಿತ್ತು ಎನ್ನುವಷ್ಟರ ಮಟ್ಟಿಗೆ ಇದು ತನ್ನ ಹಿನ್ನೆಲೆಯಾದ ವಚನಕಾರರ ವಿಚಾರ ಕ್ರಾಂತಿಯಿಂದ ಬದ್ಧವಾಗಿದೆ.

ವಚನಕಾರರು ಎತ್ತಿಕೊಂಡ ಇನ್ನೊಂದು ಪ್ರಶ್ನೆ ಹೊಲೆತನಕ್ಕೆ ಸಂಬಂಧಿಸಿದ್ದು. ಹನ್ನೆರಡನೆಯ ಶತಮಾನದಷ್ಟು ಹಿಂದೆಯೇ ಹೊಲೆತನದ ಪ್ರಶ್ನೆಯನ್ನೆತ್ತಿಕೊಂಡು ವಚನಕಾರರು ವಿಶ್ಲೇಷಿಸಿದ್ದು ಗಮನಾರ್ಹವಾಗಿದೆ. ಯಾರು ಹೊಲೆಯ ಎನ್ನುವ ಪ್ರಶ್ನೆಗೆ ಕೊಲ್ಲುವವನೇ ಮಾದಿಗ, ಹೊಲಸುತಿಂಬುವನೇ ಹೊಲೆಯ ... ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಕೂಡಲಸಂಗನ ಶರಣರೇ ಕುಲಜರು' ಎನ್ನುವುದು ಉತ್ತರ. ಈ ಧರ್ಮ ಕೇವಲ ಆತ್ಮಗುಣವನ್ನೇ ಪ್ರಾಮಾಣ್ಯವನ್ನಾಗಿ ಇರಿಸಿಕೊಂಡದ್ದು. ಜಾತಿ ಎನ್ನುವುದು ಕೇವಲ ಹುಟ್ಟನಿಂದ ಬಂದುದಲ್ಲ, ಸತ್ಯ-ನಿಷ್ಠೆಯಿಂದ 'ಸಕಲ ಜೀವಾತ್ಮರಿಗೆ ಲೇಸನೇ ಬಯಸುವ' ನಡವಳಿಕೆಯಿಂದ ಬಂದುದು ಎನ್ನುವುದನ್ನು ಎತ್ತಿ ಹಿಡಿದು, 'ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರೆಲ್ಲರನು ಒಂದೇ ಎಂಬೆ' ಎನ್ನುವ ಸಮಾನತಾ ದೃಷ್ಟಿಯನ್ನು ಪ್ರಸಾರ ಮಾಡಿತು. ಈ ಒಂದು ನೈತಿಕ ಮೌಲ್ಯವನ್ನೇ ರಾಘವಾಂಕ ಹರಿಶ್ಚಂದ್ರ ಕಾವ್ಯದಲ್ಲಿ ತಂದಿದ್ದಾನೆ.

ಹೊಲೆತನದ ಪ್ರಶ್ನೆಯನ್ನು ರಾಘವಾಂಕ ತನ್ನ ಹರಿಶ್ಚಂದ್ರ ಕಾವ್ಯದಲ್ಲಿ ಎತ್ತಿಕೊಂಡಿದ್ದರೂ, ಅವನು ಸಮಸ್ಯೆಯನ್ನು ನೋಡಿರುವ ರೀತಿ ಬೇರೆಯಾಗಿದೆ. ಅಂದರೆ 'ಹೊಲೆಯ' 'ಹೊಲೆತನ'ಗಳ ವಿಚಾರವನ್ನು ಕೇವಲ ತಾತ್ವಿಕವಾಗಿ ಚರ್ಚಿಸಿದ್ದಾನೆ ಎಂಬುದು ರಾಘವಾಂಕನ ದೃಷ್ಟಿಗೆ 'ಹೊಲೆಯ' 'ಹೊಲೆತನ' ಇವು, ಸಾಮಾಜಿಕ ಸ್ತರವನ್ನೂ, ಅದಕ್ಕೆ ಸಂಬಂಧಿಸಿದ ವೃತ್ತಿಯನ್ನು ಪ್ರತಿನಿಧಿಸುವುದಕ್ಕಿಂತ, ಮನಸ್ಸಿನ ಸ್ವಭಾವ ಹಾಗೂ ಪ್ರವೃತ್ತಿಯನ್ನು ಪ್ರತಿನಿಧಿಸುತ್ತವೆ. ಆದುದರಿಂದಲೇ ಆತ ಹರಿಶ್ಚಂದ್ರ ಕಾವ್ಯದ ಕಡೆಯಲ್ಲಿ 'ಅತಿಹುಸಿವ ಯತಿ ಹೊಲೆಯ, ಹುಸಿಯದಿಹ ಹೊಲೆಯ ಉನ್ನತಯತಿವರನು' (೧೪-೧೦) ಎಂದು ಸಾಕ್ಷಾತ್ ಶಿವನ ಬಾಯಲ್ಲಿ ಹೇಳಿಸಿದ್ದಾನೆ. ಇದು ಬಹು ಸೊಗಸಾದ ಹೇಳಿಕೆಯಾಗಿದೆ. 'ಒಬ್ಬ ಸನ್ಯಾಸಿಯೇ ಆಗಿರಬಹುದು, ಮಠಾಧಿಪತಿಯಾಗಿರಬಹುದು. ಅಂಥ 'ಯತಿ', 'ಅತಿ ಹುಸಿ'ದರೆ - ಎಂದರೆ ಅಪ್ರಾಮಾಣಿಕವಾದ ಅಸತ್ಯವಾದ ಬಾಳನ್ನು ಬಾಳಿದರೆ, ಅವನು ಹೊಲೆಯ; ಆದರೆ ಒಬ್ಬ ಹೊಲೆಯನ ಕುಲದಲ್ಲಿಯೆ ಹುಟ್ಟಿದ್ದರೂ, ಅಂಥವನು ಹುಸಿಯದೆ, ಪ್ರಾಮಾಣಿಕವಾದ ಬಾಳನ್ನು ಬಾಳಿದರೆ ಅವನು ಉನ್ನತಿಯತಿವರನು' ಎಂಬ ಈ ತತ್ವ ಕಾವ್ಯದಲ್ಲಿ ತುಂಬ ಸಮಾಯೋಚಿತವಾಗಿ ಘೋಷಿತವಾಗಿದೆ. ಆದರೆ 'ಹುಸಿಯದಿಹ ಹೊಲೆಯ' ಎನ್ನುವುದು ಸ್ಪಷ್ಟವಾಗಿ ಹರಿಶ್ಚಂದ್ರನನ್ನು ನಿರ್ದೇಶಿಸುತ್ತದೆ. ಹರಿಶ್ಚಂದ್ರ ಹೊಲೆಯನ ಸೇವಕನಾಗಿ ಹೊಲೆಯನೇ ಎನ್ನುವಂತ ಸ್ಥಿತಿಗಳಿದ್ದರೂ 'ಹುಸಿಯದೆ' ಬದುಕಿದ. ಆದ್ದರಿಂದ ಆತ ಸತ್ಯ

ನಿಷ್ಠೆಯಿಂದ 'ಉನ್ನತಯತಿವರ' ಎಂಬುದು ಈ ಹೇಳಿಕೆಯ ಅಭಿಪ್ರಾಯ. ಆದರೆ ವಾಸ್ತವವಾಗಿ ಹರಿಶ್ಚಂದ್ರ ಹೊಲೆಯನ ಸೇವಕನಾಗಿದ್ದನೇ ಹೊರತು ರಾಘವಾಂಕನ ಹೇಳಿಕೆಯಂತೆ 'ಹುಸಿಯದಿಹ ಹೊಲೆಯ'ನೇನೂ ಅಲ್ಲ. 'ಇದರಿಂದ ಹೊರಡುವ ಅರ್ಥವೆಂದರೆ, ಹೊಲೆತನ ಜಾತಿಗೆ ಸಂಬಂಧಿಸಿದ್ದಲ್ಲ', ಮನಸ್ಸಿಗೆ ಸಂಬಂಧಿಸಿದ್ದು. 'ಮುನಿಗೆ ಹೊಲೆ ಯಾವುದು? ಎಂಬ ಪ್ರಶ್ನೆಯನ್ನೆತ್ತಿಕೊಂಡು 'ಅತಿಕೋಪ ಬದ್ಧ ದ್ವೇಷ ಅನಿಮಿತ್ತ ವೈರ' ಎಂದು ಹೇಳಿ 'ಆದರಿಂದ ಹುಟ್ಟಿದರಾಗಿ ವಿಶ್ವಾಮಿತ್ರ ಸಂಭವೆಯರಾದ ಗಾಣಗಾತಿಯರು 'ಹೊಲತಿ'ಯರಾದರು ಎಂದು ರಾಘವಾಂಕ ವ್ಯಾಖ್ಯಾನಿಸುತ್ತಾನೆ'. ಎಂದರೆ 'ಅತಿ ಕೋಪ, ಬದ್ಧ ದ್ವೇಷ ಅನಿಮಿತ್ತ ವೈರ' ಇತ್ಯಾದಿ ತಾಮಸ ಗುಣಗಳಿದ್ದ ಪಕ್ಷದಲ್ಲಿ ಅವನು ಮುನಿಯಾಗಿದ್ದರೂ, ಅದು ಅವನ ಹೊಲೆತನಕ್ಕೆ ಸಾಕ್ಷಿ ಎಂಬುದು ಇಲ್ಲಿನ ಅರ್ಥ.

ಈ ಕಾವ್ಯದಲ್ಲಿ ರಾಘವಾಂಕ ಮೂರು ರೀತಿಯ ಹೊಲೆಯರನ್ನು ಚಿತ್ರಿಸುತ್ತಾನೆ. ಒಂದು ಹುಟ್ಟಿನಿಂದಲೇ ಹೊಲೆಯನಾದ ವೀರಬಾಹುಕ, ಎರಡು ಋಷಿಯೊಬ್ಬನ ಅಂತರಂಗದ ತಾಮಸ ಗುಣಗಳಿಂದ ಉದ್ಭವೆಯರಾದ ಗಾಣಗಾತಿಯರು, ಮೂರು ಸತ್ಕೂಲ ಪ್ರಸೂತನಾದರೂ ಅನಿವಾರ್ಯವಾಗಿ 'ಹೊಲೆಯ'ನಾಗಬೇಕಾಗಿ ಬಂದ ಹರಿಶ್ಚಂದ್ರ. ಗಾಣಗಾತಿಯರು, ವಿಶ್ವಾಮಿತ್ರನಂತಹ ಋಷಿಯ ಕನ್ಯೆಯರಾದರೂ ಆತನ ತಾಮಸ ಗುಣಗಳಿಂದ ಹುಟ್ಟಿ, ಹರಿಶ್ಚಂದ್ರನಂತಹ ಸತ್ಯವಂತನನ್ನು ಹಾದಿಗೆಡಿಸುವ ಉದ್ದೇಶಕ್ಕಾಗಿ ನಿಯುಕ್ತರಾದ್ದರಿಂದ ಅವರು 'ಹೊಲತಿ'ಯರಾಗಿ ಕಾಣುತ್ತಾರೆ. ಅವರು ತಮ್ಮ ಗಾಯನ-ನರ್ತನ ಕಲಾಕೌಶಲ್ಯದಿಂದ, ತಮ್ಮ ವಾಗ್ವಿಲಾಸಗಳಿಂದ 'ಹೊಲೆಯ'ರೆಂಬ ಸಾಮಾಜಿಕ ಸ್ತರವನ್ನು ಪ್ರತಿನಿಧಿಸುವುದಿಲ್ಲವೆಂಬುದು ಸ್ಪಷ್ಟವಾಗಿದೆ. ಅವರು ಹರಿಶ್ಚಂದ್ರನನ್ನು ತಮ್ಮ ಗಾಯನದಿಂದ ಸಂತೋಷಪಡಿಸಿದ ಸಂದರ್ಭದಲ್ಲಿ, ಸುಪ್ರೀತನಾದ ಹರಿಶ್ಚಂದ್ರ, ಬಹುಮಾನ ಕೊಡಲು ಹೊರಟಾಗ, ಹರಿಶ್ಚಂದ್ರನ ಚಕ್ರವರ್ತಿತ್ವದ ಸಂಕೇತವಾದ ಮುತ್ತಿನ ಸತ್ತಿಗೆಯನ್ನೇ ಕೇಳುವುದು ಧೂರ್ತತನವಲ್ಲದೆ ಬೇರೆ ಅಲ್ಲ. ಮೊದಲು ಶ್ವೇತ ಛತ್ರಿಯನ್ನು ಕೇಳಿ, ಆನಂತರ ಗಂಡನಾಗೆಂದು ಪೀಡಿಸುವ ಈ ವರ್ತನೆ, ದುರುದ್ದೇಶಪೂರಿತವಾದದ್ದು ಅಥವಾ ಹೊಲೆತನದಿಂದ ಕೂಡಿದ್ದು ಎಂಬುದನ್ನು ಒಪ್ಪಬಹುದು. ಆದರೆ, ವೀರಬಾಹುಕನ ಪಾತ್ರದಲ್ಲಿ ಕವಿ ಹುಟ್ಟಿನಿಂದ ಹೊಲೆಯನಾದ ವ್ಯಕ್ತಿಯೊಬ್ಬನೆಂಬಂತೆ ಅವನನ್ನು ಚಿತ್ರಿಸಿದ್ದರೂ, ಅವನು ಕಾರೊಡಲ, ಕೆಂಗಣ್ಣ, ಕುಡಿದು ಕೊಬ್ಬಿದ ಬಸುಜೆನ, ಬಿಡದೆ ಥರ್ರನೆ ತೇಗಿ ನೆರವಿಯಂ ಬಯ್ವ, ಬಿಜುನುಡಿಯ (೧೧-೧೭) ವ್ಯಕ್ತಿಯಾಗಿದ್ದರೂ, ಹರಿಶ್ಚಂದ್ರನನ್ನು ಕೊಂಡುಕೊಂಡು ಅವನನ್ನು

ಗಂಭೀರವಾಗಿಯೇ ನಡೆಯಿಸಿಕೊಳ್ಳುವ ವ್ಯಕ್ತಿಯಾಗಿದ್ದಾನೆ. ಹೊಲೆತನದ ಪ್ರತೀಕವಾದ ಗಾಣಗಾತಿ 'ಹೊಲತಿ'ಯರಿಗೂ, ಹೊಲೆಯ ಕುಲದಲ್ಲೇ ಹುಟ್ಟಿದ ವೀರಬಾಹುಕನಿಗೂ ಇರುವ ಸ್ವಭಾವದ ವ್ಯತ್ಯಾಸವನ್ನು ಗಮನಿಸಿದರೆ, ಗಾಣಗಾಣತಿಯರ 'ಹೊಲೆತನ' ನಿಜವಾದ 'ಹೊಲೆ' ಎನ್ನಿಸುತ್ತದೆ. 'ಹೊಲೆತನ ಎನ್ನುವುದು ವ್ಯಕ್ತಿಯ ಅಂತರಂಗದ ಅವಗುಣಗಳಿಗೆ ಸಂಬಂಧಿಸಿದ್ದೇ ಹೊರತು, ಅದು ಒಂದು ಜಾತಿಯನ್ನು ಕುರಿತ ಪ್ರಶ್ನೆಯಲ್ಲ' ಎನ್ನುವ ತಾತ್ವಿಕ ದೃಷ್ಟಿ ರಾಘವಾಂಕನದು.

ಆದರೆ 'ಹೊಲೆಯ' ಎಂಬ ಜಾತಿಯನ್ನು ಕುರಿತು, ರಾಘವಾಂಕನ ನಾಯಕ ಪಾತ್ರವಾದ ಹರಿಶ್ಚಂದ್ರನ ಪ್ರತಿಕ್ರಿಯೆಯಲ್ಲಿ ಕಾಣಬಹುದು. ಎಲ್ಲ ಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿ, ಈ ಒಂದು ಕುಲದ ಬಗ್ಗೆ ಇರುವ ಮನೋಧರ್ಮವನ್ನೇ ಹರಿಶ್ಚಂದ್ರನಿಗೆ ತಾನು ಸಾಮಾಜಿಕವಾಗಿ, ಆರ್ಥಿಕವಾಗಿ ಉಚ್ಚ ವರ್ಗಕ್ಕೆ ಸೇರಿದವನೆಂಬ ಪ್ರಜ್ಞೆಯೆ ಪ್ರಧಾನವಾಗಿದೆ ಮತ್ತು ಅದು ಸಹಜವೂ ಆಗಿದೆ. ತಾನು ಉತ್ತಮ ವಂಶದವನು. ಚಕ್ರವರ್ತಿ ಎಂಬ ಹೆಮ್ಮೆಯಲ್ಲಿ ಬದುಕುವ ಹರಿಶ್ಚಂದ್ರನಿಗೆ, ಉದ್ದಕ್ಕೂ ಸ್ಪರ್ಧಿಯಾಗುವುದು, ಸಾಮಾಜಿಕವಾಗಿ ಅತ್ಯಂತ ಕೆಳಗಿನ ಸ್ತರವೆಂದು ಭಾವಿಸಲಾಗಿರುವ ಹೊಲೆಯರೊಂದಿಗೆ ಮಾಡಿಕೊಳ್ಳಬೇಕಾದ ಒಡಂಬಡಿಕೆಯ ಪ್ರಶ್ನೆಯೇ. ಹರಿಶ್ಚಂದ್ರನಿಗೆ ಹೊಲತಿಯರಾದ ಗಾಣಗಾತಿಯರಿಂದ ಮೊದಲು ಪ್ರಾಪ್ತವಾಗುವ ಆಹ್ವಾನವೇ, ಕಡಗೆ ಅದನ್ನು ವೀರಬಾಹುಕನ ಆಳಾಗಿ ಹೊಲೆಯರಿಗೆ ಉಚಿತವಾದ ಚಾಂಡಾಲತ್ವವನ್ನು ಕೈಗೊಳ್ಳುವವರೆಗೂ ಅಟ್ಟಿಸಿಕೊಂಡು ಹೋಗಿರುವುದು ಗಮನಿಸಬೇಕಾದ ಸಂಗತಿಯಾಗಿದೆ. ಸಾಮಾಜಿಕವಾಗಿ ಹಾಗೂ ವಾಂಶಿಕವಾಗಿ, ಉಚ್ಚ ವರ್ಗದ ಪ್ರತಿಷ್ಠಿತ ವ್ಯಕ್ತಿಯಾದ ಹರಿಶ್ಚಂದ್ರ, ಅದೇ ಸಾಮಾಜಿಕ ಸ್ತರಕ್ಕೆ ಹೋಗಿ ಮುಟ್ಟುವ ಅನಿವಾರ್ಯತೆಯಲ್ಲಿ ಆತನ ವಂಶ ಪ್ರಜ್ಞೆಯ ಹಾಗೂ ಅಹಂಕಾರದ ನಿರಸನಗಳು ಈ ಕೃತಿಯಲ್ಲಿ ಕ್ರಮಬದ್ಧವಾಗಿ ಚಿತ್ರಿತವಾಗಿದೆ. ಹರಿಶ್ಚಂದ್ರನನ್ನು ಹೊಲತಿಯರು ಬಂದು ಮದುವೆ ಮಾಡಿಕೋ ಎಂದು ಪೀಡಿಸಿದಾಗ, ತನ್ನಂತಹ ಸೂರ್ಯವಂಶದ ರಾಜನ ಬಳಿಗೆ "ಹೊಲತಿಯರು ಬಂದಾವು ಸತಿಯರಾದಪ್ಪೆವು ಎಂಬುಲಿಹವಿದು ಬಂದ ಕಾಲದ ಗುಣವೋ ನಿಂದ ನೆಲದ ಗುಣವೋ ಎಂದು ಕೋಪಿಸಿದನವನೀಶನು" (೭-೧೬). ವಿಶ್ವಾಮಿತ್ರನೇ ಬಂದು ಇವರನ್ನು ಮದುವೆಯಾಗು ಎಂದಾಗ 'ಉತ್ತಮದ ರವಿಕುಲದೊಳುದಿಸಿ ಚಾಂಡಾಲತ್ವವೆತ್ತ ಸತಿಯರ್ಗೆಳಸಿ ಘೋರ ನರಕಾಳಿಗೆ ಅನಿಮಿತ್ತ ಹೋಹವನಲ್ಲ' (೮-೨೫) ಎನ್ನುವುದಲ್ಲದೆ, ಕಡೆಗೆ ನನ್ನ ರಾಜ್ಯ ಸರ್ವಸ್ವವನ್ನಾದರೂ ಕೊಟ್ಟೇನು, ಹೊಲತಿಯರನ್ನು ಮಾತ್ರ ಮದುವೆಯಾಗಲಾರೆ ಎಂದು ಘೋಷಿಸುತ್ತಾನೆ. ತಾನು ಉತ್ತಮ ಕುಲಜನೆಂಬ ವಂಶಪ್ರಜ್ಞೆಯ ಪ್ರತಿಷ್ಠೆ ಅಂತದ್ದು. ಕಾಶಿಯಲ್ಲಿ ತನ್ನ

ಸತಿ-ಸುತರನ್ನು ದ್ವಿಜೋತ್ತಮನೊಬ್ಬನಿಗೆ ಮಾರಿದ ಮೇಲೆ, ತನ್ನನ್ನೂ ಮಾರಿಕೊಳ್ಳುವ ಘೋಷಣೆಯಲ್ಲಿ ತೊಳಲುವಾಗ, ವೀರಬಾಹುಕ ತನ್ನ ಹಡಪಿಗನ ಮೂಲಕ ಕೇಳಿಸಿದಾಗ, ಸೂರ್ಯವಂಶದಲ್ಲಿ ಹುಟ್ಟಿದ ತನ್ನನ್ನು 'ಕಡೆಯ ಹೊಲೆಯಂ ಮೇರೆದಪ್ಪಿ ಬಂಗೆನ್ನ ತನ್ನೊಡೆಯನಿಗೆ ದಾಸನಾಗೀಗಳೆಂಬುದಿದು ಕಾಲಗುಣವೋ ಎಡೆಗೊಂಡ ಕರ್ಮಫಲವೋ' ಎಂದು ಕಳವಳಿಸುತ್ತಾನೆ. ಇಲ್ಲಿಯೂ ಹರಿಶ್ಚಂದ್ರ ಬಳಸುವ 'ಕಡೆಯ ಹೊಲೆಯಂ' ಮತ್ತು 'ಮೇರೆದಪ್ಪಿ ಬಂದು' ಎಂಬ ಎರಡು ಮಾತುಗಳಲ್ಲಿನ ಪ್ರತಿಕ್ರಿಯೆಯನ್ನು ಪರಿಭಾವಿಸಬೇಕು. ಅವನು ರಾಜ್ಯಭ್ರಷ್ಟನಾಗಿ ನಿರ್ಗತಿಕನಾದರೂ ತಾನು ಸಾಮಾಜಿಕವಾಗಿ ಅಧಮ ವರ್ಗದ ಅನಾಮಿಕರಿಗಿಂತ ಶ್ರೇಷ್ಠ ಎಂಬ ಅಭಿಮಾನ ಸಹಜವಾಗಿದೆ. ಅವನ ಪಾಲಿಗೆ ವೀರಬಾಹುಕ 'ಕಡೆಯ ಹೊಲೆಯ' ಸಾಮಾಜಿಕವಾಗಿ ಕಟ್ಟಕಡೆಯ ನೆಲೆಯಲ್ಲಿರಬೇಕಾದವನು. ಅಂಥವನು, 'ಮೇರೆದಪ್ಪಿ' ಯಾವ ಮಿತಿಯಲ್ಲಿ ಬದುಕಬೇಕೋ ಆ ಸಾಮಾಜಿಕ ಮಿತಿಯನ್ನು ಮೀರಿ ಬರಬಹುದೇ ಎನ್ನುವ ತಿರಸ್ಕಾರವೇ ಈ ಪ್ರತಿಕ್ರಿಯೆಯಲ್ಲಿ ಪ್ರಧಾನವಾಗಿದೆ. ಇದು 'ಹೊಲೆಯ'ರನ್ನು ಕುರಿತು ಹರಿಶ್ಚಂದ್ರನ ಪ್ರತಿಕ್ರಿಯೆ, ಅಷ್ಟೆ ಅಲ್ಲ, ರಾಘವಾಂಕನ ಕಾಲದಲ್ಲಿಯೂ ಇದ್ದಿರಬಹುದಾದ ಉಚ್ಚ ವರ್ಗದವರ ಪ್ರತಿಕ್ರಿಯೆ ಕೂಡ. ಯಾವಾಗ ವೀರಬಾಹುಕನೆ ಬಂದು 'ಮೇಲಾರು - ಕೀಳಾರು'? ಎಂಬ ಮೂಲಭೂತ ಪ್ರಶ್ನೆಯನ್ನೆತ್ತಿಕೊಂಡು, 'ಹಣವುಳ್ಳವರು ಯಾರಾದರೂ ನನ್ನನ್ನು ಕೊಂಡುಕೊಳ್ಳಬೇಕೆಂದು ನೀನು ಸಾರಿದೆಯೆ ಹೊರತು, ಉತ್ತಮ ದ್ವಿಜರು ಕೊಂಡುಕೊಳ್ಳಬೇಕೆಂದು ಸಾರಲಿಲ್ಲವಲ್ಲ. ಹೀಗಿರುವಾಗ ಹುಸಿಯ ಹೊಲೆಯನ್ನು ಹೊತ್ತ ನೀನು ಚಾಂಡಾಲನೋ ನನ್ನ ಪಾಡಿಗೆ ನಾನು ಇರುವ ನನ್ನಂಥವನು ಚಾಂಡಾಲನೋ'(೧೧-೨೦-೨೧) ಎಂದು ಪ್ರಶ್ನಿಸಿದಾಗ, ಹರಿಶ್ಚಂದ್ರನಿಗೆ ತನ್ನ ತಪ್ಪಿನ ಅರಿವಾಗಿ ಮೌನಿಯಾಗುತ್ತಾನೆ 'ರವಿಕುಲಕೆ ಕುಂದಿಂದು ಬಂದಡಂ ಬರಲಿ' (೧೧-೨೪) ಎಂದು ತನ್ನ ಕುಲದ ಹೆಮ್ಮೆಯನ್ನು ಕಳಚಿ ನಿಲ್ಲುತ್ತಾನೆ. ಹರಿಶ್ಚಂದ್ರ ವೀರಬಾಹುಕನ ಮಾತಿಗೆ ಮೌನಿಯಾಗಿದ್ದು, ಅವನು ಅನಿವಾರ್ಯತೆಗೆ ಶರಣಾದದ್ದರ ಸೂಚನೆಯೇ ಹೊರತು, ಆತನಲ್ಲಿ 'ಹೊಲೆಯ'ರೆಂಬ ಸಾಮಾಜಿಕ ವರ್ಗದ ಬಗೆಗೆ ಒಂದು ಬಗೆಯ ತಾತ್ವಿಕ ಜ್ಞಾನೋದಯವಾಗಿತೆಂಬುದರ ಸೂಚನೆ ಅಲ್ಲ. ಹರಿಶ್ಚಂದ್ರನಿಗೆ ಕಡೆಗೂ ಈ 'ಸಾಮಾಜಿಕ ಸ್ತರ'ವನ್ನು ಕುರಿತ ಒಂದು ಸಮಾನತಾದೃಷ್ಟಿ ಲಭಿಸಿತೆನ್ನುವ ಸೂಚನೆ ಎಲ್ಲೂ ಬರುವುದಿಲ್ಲ. ಹರಿಶ್ಚಂದ್ರ ಮೊದಲಿನಿಂದಲೂ ತನ್ನ ವಂಶ ಪ್ರತಿಷ್ಠೆಯನ್ನು ಕಾಯ್ದುಕೊಳ್ಳುವ ವಿಫಲವಾದ ಹೋರಾಟದಲ್ಲಿ, ತಾನು ಮಾನಸಿಕವಾಗಿ ಯಾವ ಸಾಮಾಜಿಕ ಸ್ತರದ ಬಗೆಗೆ ಕೀಳು ಎಂಬ ಭಾವನೆಯನ್ನು ತಳೆದಿದ್ದನೋ ಅದನ್ನೇ

ಕಟ್ಟಕಡೆಗೆ ಒಪ್ಪಿಕೊಳ್ಳುವ ಅನಿವಾರ್ಯತೆಗೆ ಬದ್ಧವಾಗಬೇಕಾಯಿತೆಂಬುದನ್ನು ರಾಘವಾಂಕನು ಚಿತ್ರಿಸಿದನು.

ಇದರಲ್ಲಿ ಹೊಲೆತನದ ಪ್ರಸ್ತಾಪವು ಭಿನ್ನವಾದ ಎರಡು ನೆಲೆಗಳಲ್ಲಿ ಅಡಗಿದೆ ಎಂದು ಹೇಳಬಹುದು. ೧) ವೈದಿಕ ಪರಂಪರೆ ಪೋಷಿಸಿದ ಅಸ್ಪೃಶ್ಯತೆಯ ರೀತಿ. ೨) ವಚನಕಾರರು ಹೇಳಿದ ಅಸ್ಪೃಶ್ಯತೆಯ ರೀತಿ. ಮೊದಲನೆಯ ರೀತಿ ಗಾಣಗಾತಿಯವರ ಪ್ರಸಂಗದಲ್ಲಿ ವ್ಯಕ್ತವಾಗಿದೆ. ಹರಿಶ್ಚಂದ್ರ ಮತ್ತು ಗಾಣಗಾತಿಯರ ನಡುವೆ ನಟೆಯುವ ಸಂಭಾಷಣೆಯಲ್ಲಿ ನಮ್ಮ ಚರಿತ್ರೆಯಲ್ಲಿ ಶೋಷಿತ ವರ್ಗವನ್ನು ವೈದಿಕ ಧರ್ಮ ಪ್ರೇರಿತ ಪ್ರಭುತ್ವದ ಅಪ್ಪಣೆಯಂತೆ ಇವುಗಳಲ್ಲಿ ಬೆಳೆಯುವ ಆಸೆ ಪ್ರತಿಭೆ ಎಲ್ಲಾ ಇದ್ದರೂ ಉನ್ನತ ಸ್ಥಾನ ಪಡೆಯಲು ಹುಟ್ಟಿದ ಕಾರಣವಾಗಿ ಅನರ್ಹವಾಗಿದ್ದು ಬದುಕುವ ಅವಕಾಶದಿಂದ ವಂಚಿಸಲ್ಪಟ್ಟ ಘೋರ ದುರಂತದ ಚಿತ್ರ ದೊರೆಯುತ್ತದೆ. ಹರಿಶ್ಚಂದ್ರನ ಮಾತುಗಳಲ್ಲಿ ಪ್ರಭುತ್ವದ ಸ್ಥಾನ, ಶಕ್ತಿ, ಸಾಮರ್ಥ್ಯ, ತ್ಯಾಗ, ದಾನ, ಆಸರೆ ಮೊದಲಾದ ವಿಷಯಗಳು ಪ್ರಸ್ತಾಪವಾಗುತ್ತದೆ.

ರಾಜ ಸಾಮಾನ್ಯವಾಗಿ ಬಹುಪತ್ನಿಪ್ರಿಯ, ನೆರೆಹೊರೆಯ ಸಾಮ್ರಾಜ್ಯಗಳೊಂದಿಗೆ ಸೌಹಾರ್ದ ಸಂಬಂಧಕ್ಕಾಗಿ, ಸೃಜನಶೀಲ ಕಾರ್ಯಗಳನ್ನು ಗೌರವಿಸಿ ಪ್ರೋತ್ಸಾಹಿಸುವ ನೆಲೆಯಲ್ಲಿ ಸಂಗೀತ, ಸಾಹಿತ್ಯ, ಕಲೆಗಳಲ್ಲಿ ಪರಿಣತಿ ಇರುವ ಮಹಿಳೆಯರನ್ನು ರಾಜ ವಿವಾಹವಾಗುತ್ತಿದ್ದ. ಆದರೆ ಈ ಕಾವ್ಯದಲ್ಲಿ ಸೃಜನಶೀಲ ಪ್ರತಿಭೆಯಿದ್ದೂ ಹುಟ್ಟಿನಿಂದ ಹೊಲತಿಯರಾದ ಗಾಣಗಾತಿಯರನ್ನು ಮದುವೆಯಾಗಲು ಹರಿಶ್ಚಂದ್ರ ನಿರಾಕರಿಸುತ್ತಾನೆ ಆ ಮೂಲಕ ರಾಜ ವೈದಿಕ ಪರಂಪರೆಯ ಪ್ರತಿನಿಧಿಯಾಗುತ್ತಾನೆ

ಗಾಯಕಿಯರ ಮಾತುಗಳಲ್ಲಿ ವಿವಿಧ ಹೋಲಿಕೆಗಳಿಂದ ತಮ್ಮನ್ನು ಮನುಷ್ಯರಾಗಿ ಸಮರ್ಥಿಸಿಕೊಳ್ಳುತ್ತಾ ಮದುವೆ ಮಾಡಿಕೊಳ್ಳಲು ಮನವೊಲಿಸುವ ಪ್ರಯತ್ನವಿದೆ. ಇಲ್ಲಿ ಮನುಷ್ಯನಲ್ಲಿ ಉತ್ತಮಿಕೆ ಇರುವುದು ಗುಣಗಳಿಂದಲೇ ಹೊರತು ಹುಟ್ಟಿನಿಂದ ಶ್ರೇಷ್ಠ ಎನ್ನುವುದರಲ್ಲಿ ಅಲ್ಲ ಎನ್ನುವ ವಿಚಾರ ಇದೆ. ಹಾಗೆಯೇ ಹುಟ್ಟಿನಿಂದ ಕನಿಷ್ಠರೆಂದು ಪರಿಗಣಿಸಲ್ಪಟ್ಟವರಿಂದ ಆಗುವ ಪ್ರಯೋಜನಗಳನ್ನು ಉಳಿದವರು, ರಾಜರನ್ನು ಸೇರಿದಂತೆ ಪಡೆದು ಅವರ ಪಾಲಿಗೆ ಕೃತಘ್ನರಾಗಿ ನಡೆದುಕೊಂಡು ಮತ್ತೆ ಮತ್ತೆ ಕೆಳಮುಖವಾಗಿ ತುಳಿದಿರುವುದು ತಿಳಿಯುತ್ತೇವೆ. ಇಂತಹ ವ್ಯವಸ್ಥೆಯನ್ನು ಧಿಕ್ಕರಿಸಿದ್ದು, ವಚನಕಾರರ ಸಂದರ್ಭದ ವೀರಶೈವ ಧರ್ಮ. ಅಲ್ಲಿ ಕೆಳಸ್ತರದವರ ಪರಿಸ್ಥಿತಿಯ ಬಗ್ಗೆ ಮೇಲ್‌ಸ್ತರಕ್ಕೆ ಸೇರಿದ ಶರಣರಲ್ಲಿ ಪ್ರಾಮಾಣಿಕ

ಅನುಕಂಪ ವ್ಯಕ್ತವಾಗಿ ಕೆಳಸ್ತರದವರು ಮನುಷ್ಯರಾಗಿ ಬಂಧಿತವಾಗುವ ಅವಕಾಶಗಳು ಲಭಿಸಿದ್ದವು.

ಎರಡನೆಯ ರೀತಿಯ ಅಸ್ಪೃಶ್ಯತೆಯ ವ್ಯಾಖ್ಯಾನ ಹರಿಶ್ಚಂದ್ರನಿಗೆ ಶಿವ ಸಾಕ್ಷಾತ್ಕಾರವಾಗುವ ಸಂದರ್ಭದಲ್ಲಿ ಪ್ರಕಟವಾಗಿದೆ. ಇಲ್ಲಿ ಧಾರ್ಮಿಕ ಆವರಣದಲ್ಲಿ ಪ್ರಾಮಾಣಿಕವಾಗಿ ತನ್ನ ಕರ್ತವ್ಯ ನಿರ್ವಹಿಸಿದವನು ಗುಣದ ಬೆಲೆಯಲ್ಲಿ ಉತ್ತಮ ಮನುಷ್ಯ, ದೋಷಗಳುಳ್ಳವನು ಯಾವುದೇ ಉನ್ನತ ಸ್ಥಾನದಲ್ಲಿದ್ದರೂ ಅವನು ಹೊಲೆಯ ಎನ್ನುವ ವಿಚಾರ ವ್ಯಕ್ತವಾಗಿವೆ.

ಕಾವ್ಯದಲ್ಲಿ ಹರಿಶ್ಚಂದ್ರನು ವಸಿಷ್ಠ-ವಿಶ್ವಾಮಿತ್ರರ ಆಣತಿಯಂತೆ ನಡೆಯುವುದು ಪ್ರಭುತ್ವ ವೈದಿಕ ಧರ್ಮಕ್ಕೆ ಕೊಡುತ್ತಿದ್ದ ಗೌರವವನ್ನು ಸೂಚಿಸುತ್ತದೆ. ಈ ಕವಿಯ ಮೂಲಕ ಈ ಧರ್ಮವು ಅದನ್ನು ಅನುಸರಿಸುವ ದಿಕ್ಕಿನಲ್ಲಿದೆ. ಇಲ್ಲಿ ರಾಜ ಪ್ರಜೆಗಳ ಯೋಗಕ್ಷೇಮಕ್ಕಿಂತ ಮುಖ್ಯವಾಗಿ ಋಷಿಮುನಿಗಳಿಗೆ ವಿಧೇಯನಾಗಿ ನಡೆದುಕೊಳ್ಳುವುದು. ಅದೇ ಅವನ ಕಷ್ಟ ಪರಂಪರೆಗೆ ಕಾರಣವಾದರೂ ಕೂಡ ನಿಷ್ಪ್ರಯೋಜಕ ಧರ್ಮದ ಆಳ್ವಿಕೆಯನ್ನು ಸೂಚಿಸುತ್ತದೆ. ಕವಿ ಜನರ ನೆಲೆಯಲ್ಲಿ ನಿಂತಿರುವುದು ರಾಜನ ಪಾತ್ರವನ್ನು ಉನ್ನತೀಕರಿಸುವ ನೆಲೆಯಲ್ಲಿ ರಾಘವಾಂಕ ಈ ಪಾತ್ರದ ಮೂಲಕ ಕೂಡ ವೈದಿಕ ಪರಂಪರೆಯನ್ನು ವಿರೋಧಿಸುತ್ತಾನೆ.

ಶಿವಸಾಕ್ಷಾತ್ಕಾರದ ಆನಂತರವೂ ಹರಿಶ್ಚಂದ್ರ ರಾಜ್ಯದ ಆಸೆಯುಳ್ಳ ಕೀರ್ತಿಯ ಕಾಮನೆಯುಳ್ಳ (೧೪-೧೫) ಲೌಕಿಕನಾಗಿಯೇ ಇದ್ದಾನೆ. "ಹರಿಶ್ಚಂದ್ರನು ಜಾತಿ, ಮತ, ಕುಲ, ದೇಶ, ಐಶ್ವರ್ಯ, ಅಧಿಕಾರ ಪುತ್ರಕಳತ್ರಾದಿಮದ ಮಮತಾ ಮಮಕಾರಗಳಿಂದೆಲ್ಲ ಒಂದಾದ ಮೇಲೊಂದರಂತೆ ಬಿಡುಗಡೆ ಹೊಂದಿದ್ದಾನೆ. ಹೀಗೆ ಒಂದರ ಮೇಲೊಂದು ಸಿಪ್ಪೆ ಸುಲಿದಂತೆ ಮಾಯೆಯ ಆವರಣಗಳೆಲ್ಲ ಕಳಚಿ ಬಿದ್ದು ಸಂಪೂರ್ಣ ನಿರಾವರಣ ಸ್ಥಿತಿಗೆ ಏರಿದ ಶುದ್ಧಾತ್ಮಕ್ಕೆ ಈಶ್ವರ ಸಾಕ್ಷಾತ್ಕಾರವಾಗುತ್ತದೆ. ಅಹಂಕಾರದ ಮಾಯೆಗೆ ಪ್ರತೀಕ ಸ್ವರೂಪವಾಗಿರುವ ಚಂದ್ರಮತಿಯ ಕೊರಳಿಗೆ ವೈರಾಗ್ಯದ ಉತ್ತುಂಗ ಶಿಖರದಲ್ಲಿ ನಿಲ್ಲುವ ಜೀವಕ್ಕೆ ಪ್ರತೀಕವಾಗಿರುವ ಹರಿಶ್ಚಂದ್ರನ ವಿವೇಕಖಡ್ಗ ಎಲ್ಲಿ ಸಂಧಿಸುತ್ತದೆಯೊ ಆ 'ಮಾಯಾಹನನ' ಸ್ಥಾನದಲ್ಲಿಯೇ ಈಶ್ವರ ಸಾಕ್ಷಾತ್ಕಾರವಾಗುತ್ತದೆ" ಎಂದು ಕುವೆಂಪು ಅವರು ಹೇಳಿದ್ದಾರೆ.[೬] ಇದಕ್ಕೆ ಹರಿಶ್ಚಂದ್ರನ ಪಾತ್ರ ಸಂದರ್ಭದಲ್ಲಾಗಲಿ ಇಡೀ ಕಾವ್ಯದ ಧೋರಣೆಯ ಸಂದರ್ಭದಲ್ಲಾಗಲಿ ತಕ್ಕ ಸಮರ್ಥನೆ ದೊರೆಯುವುದಿಲ್ಲ.

'ಹರಿಶ್ಚಂದ್ರ ಚಾರಿತ್ರ' ವನ್ನು ಕಾವ್ಯದ ಕ್ರಿಯೆ ಮತ್ತು ಧೋರಣೆಯ ದೃಷ್ಟಿಯಿಂದ ನೋಡಿದಾಗ ಮೊದಲ ಏಳು ಸ್ಥಲಗಳಲ್ಲಿ ಪ್ರಧಾನವಾಗಿ ಎರಡು ಅಂಶಗಳು ಓದುಗನ ಮನಸ್ಸಿನ ಮೇಲೆ ಬಿಂಬಿತವಾಗುತ್ತದೆ. ಒಂದು ಹರಿಶ್ಚಂದ್ರ ನಂಬಿರುವ ಮೌಲ್ಯಗಳು, ಇನ್ನೊಂದು ರಸಿಕತೆಯಿಂದ ಕೂಡಿದ ಹರಿಶ್ಚಂದ್ರನ ಬದುಕಿನ ವೈಭವ. ಈ ಎರಡು ಅಂಶಗಳ ದೃಢ ಹಿನ್ನೆಲೆಯಲ್ಲಿಯೇ ಕಾವ್ಯದ ಕೊನೆಯ ಏಳು ಸ್ಥಲಗಳ ಕ್ರಿಯೆಗಳು ನಡೆಯುತ್ತವೆ ಧೋರಣೆ ರೂಪುಗೊಳ್ಳುತ್ತದೆ. ಪೂರ್ವಾರ್ಧದಲ್ಲಿ ಹರಿಶ್ಚಂದ್ರ ನಂಬಿರುವ ಮೌಲ್ಯಗಳು ಮತ್ತು ರಸಿಕತೆಯಿಂದ ಕೂಡಿದ ಆತನ ಬದುಕು - ಇವುಗಳ ಪ್ರಬಲ ಪ್ರತಿರೋಧ ಇಲ್ಲವೆ ಅವುಗಳನ್ನು ಬಳಸಿಕೊಳ್ಳಲು ಹರಿಶ್ಚಂದ್ರ ನಡೆಸುವ ಛಲವಂತ ಹೋರಾಟವೇ ಉತ್ತರಾರ್ಧದಲ್ಲಿ ವಿಶ್ವಾಮಿತ್ರ ನಡೆಸುವ ನಿಷ್ಠುರ ಪರೀಕ್ಷೆಯ ಕ್ರೌರ್ಯ ಮತ್ತು ಆ ಮೂಲಕ ಹರಿಶ್ಚಂದ್ರನ ಪರವಾಗಿ ಓದುಗನಲ್ಲಿ ಉಕ್ಕುವ ಕರುಣಗಳನ್ನು ನಿರ್ದೇಶಿಸುತ್ತದೆ, ನಿಯಂತ್ರಿಸುತ್ತದೆ. ಅಲ್ಲದೆ ವಚನಕಾರರ ಅಸ್ಪೃಶ್ಯರ ಬಗೆಗಿನ ಧೋರಣೆ ಕೇವಲ ಮೇಲ್ವರ್ಗದ ನೆಲೆಯ ಒಂದು ಸಂವಾದ ಮಾತ್ರವಾದರೆ ರಾಘವಾಂಕನ ಹೊಲತಿಯರು ಮಾಡುವ ಪ್ರಶ್ನೆ ಸಾಮಾಜಿಕ ಚರಿತ್ರೆಯಲ್ಲಿ ಒಂದು ಐತಿಹಾಸಿಕ ಘಟನೆಯಾಗಿದೆ. ಜೊತೆಗೆ ಅವರ ಸಾಮಾಜಿಕ ನೆಲೆಯಿಂದಲೇ ಮೂಡಿ ಬಂದಿರುವಂಥದ್ದಾಗಿವೆ ಹೊಲತಿಯರು ಮದುವೆಯಾಗು ಎನ್ನುವಾಗ ಆತನಿಗೆ ನನ್ನದು ಶ್ರೇಷ್ಠ ಕ್ಷತ್ರಿಯ ಕುಲ ಅದನ್ನು ಕೆಡಿಸಲಾಗದು ಎಂದು ಹರಿಶ್ಚಂದ್ರ ಹೇಳಿದಾಗ ಕುಲದ ಚರ್ಚೆ ಬರುತ್ತವೆ 'ಹೊಲತಿಯರು ಬಂದಾವು ಸತಿಯರಾದಪ್ಪೆವೆಂಬುಲಿಹವೆಂಬುದು ಬಂದ ಕಾಲಗುಣವೋ ನಿಂದ ನೆಲದ ಗುಣವೋ ನೋಡು ನೋಡೆಂದು ಕಡುಮುಳಿದು ಕೋಪಿಸಿದನು' ಎಂಬ ಮಾತಿನಲ್ಲಿ ಕುಲದ ಬಗ್ಗೆ ಇದ್ದ ಸಾಂಪ್ರದಾಯಿಕ ಮನೋಧರ್ಮ ಪಲ್ಲಟವಾಗುತ್ತಿರುವ ಸಂದರ್ಭವನ್ನು ಕವಿ ಸೂಚಿಸುತ್ತಿದ್ದಾನೆ. ಯಾಕೆಂದರೆ ಅದುವರೆಗಿನ ಸ್ಥಿತಿಯಲ್ಲಿ ಹೊಲೆಯರು ತಮಗೆ ಇಂತಹದ್ದನ್ನು 'ಬೇಕು' ಎಂದು ಕೇಳುವಂತೆ ಇರಲಿಲ್ಲ. ಆದರೆ ಈಗ ನಾಡಿಗೇ ಚಕ್ರವರ್ತಿಯಾಗಿರುವ ದಂಡಾಧಿಕಾರಿಯನ್ನೇ ಮದುವೆಯಾಗು ಎಂದು ಕೇಳುವ ಮಟ್ಟಕ್ಕೆ ಹೊಲೆಯರಲ್ಲಿ ಜಾಗೃತಿ ಉಂಟಾಗಿರುವುದನ್ನು ಇಲ್ಲಿ ರಾಘವಾಂಕ ಸೂಚಿಸುತ್ತಿದ್ದಾನೆ. 'ರೂಪು ಜವ್ವನವಿರಲು ಕುಲದ ಮಾತೇಕೆ' ಎಂದು ಹೊಲತಿಯರು ಪ್ರಶ್ನಿಸಿದಾಗ 'ಅಕ್ಕಕ್ಕು ಬಚ್ಚಲುದಕಂ ತಿಳಿದಡಾರ ಮೀಹಕ್ಕೆ ಯೋಗ್ಯಂ' ಎಂದು ಹರಿಶ್ಚಂದ್ರ ಇಂತಹ ಮಾತನಾಡುವುದೇ ಹೊಲೆತನ ಎಂದಾಗ ಹೊಲತಿಯರು ಕೇಳುವ ಪ್ರಶ್ನೆ.

ಹಾಡನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ ಮಾ
ತಾಡಿ ಹೊಗಳಿದ ಬಾಯ್ಗೆ ಹೊಲೆಯಿಲ್ಲ ರೂಪನೆರೆ
ನೋಡಿದವಿಲೋಚನಕೆಹೊಲೆಯಿಲ್ಲ ಮೆಯ್‌ಮುಡಿಗಳಿಂ ಸುಳಿವತಂಗಾಳಿಯಿಂ
ತೀಡುವ ಸುಗಂಧಮಂ ವಾಸಿಸಿದ ನಾಸಿಕಕೆ
ನಾಡೆ ಹೊಲೆಯಿಲ್ಲ ಸೋಂಕಿಂಗೆ ಹೊಲೆಯುಂಟಾಯ್ತೆ
ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕಧಮವೊಂದಧಿಕವೇ ಎಂದರು

(ಹ.ಕಾ. ೭-೧೯)

ಇಂತಹ ಒಂದು ಪ್ರಶ್ನೆ ಚಾರಿತ್ರಿಕವಾಗಿ ಮಹತ್ವದ್ದು. ಹರಿಹರನ ರಗಳೆಗಳಲ್ಲಿ ಬರುವ ಹೊಲೆಯ ಶರಣರೇ ಇಂತಹ ಒಂದು ಸವಾಲಿನ ಪ್ರಶ್ನೆಯನ್ನು ಕೇಳಲಿಲ್ಲ. ವೈದಿಕರನ್ನು ಅವರ ಮತವನ್ನು ಹೀಗಳೆವ ಮಟ್ಟಕ್ಕೆ ಭಾವಾವೇಶದ ಮಾತುಗಳನ್ನು ಅವರ ಬಾಯಿಂದ ಹರಿಹರ ಆಡಿಸುತ್ತಾನೆಯೇ, ವಿನಹ ಇಂತಹ ಒಂದು ನಾಟಕೀಯ ಸನ್ನಿವೇಶದಲ್ಲಿ ಒಬ್ಬ ರಾಜನನ್ನೇ ಹಿಡಿದು ನಿಲ್ಲಿಸಿ ಕಣ್ಣು ಕಿವಿ ಮೂಗುಗಳಿಗೆ ಹೊಲೆಯಿಲ್ಲ, ಚರ್ಮಕ್ಕೆ ಮಾತ್ರ ಹೊಲೆತನ ಹೇಗಾಯ್ತು ಎಂದು ಕೇಳುವುದು ಸಾಮಾನ್ಯವಾದ ವಿಷಯುವಲ್ಲ. "ರಾಘವಾಂಕನದು ಸಾಂಪ್ರದಾಯಿಕವಾದ ಜಾತಿಬದ್ಧ ದೃಷ್ಟಿ. ಅವನದು ಕೇವಲ ತೋರಿಕೆಯ ಉದಾರ ಧೋರಣೆ ಮಾತ್ರ. ಭಕ್ತನೂ ಭಾವುಕನೂ ಆದ ಹರಿಹರ ಆಸ್ಪೃಶ್ಯರನ್ನು ತನ್ನ ಎರಡೂ ಕೈಗಳಲ್ಲಿ ಬಾಚಿ ತಬ್ಬಿಕೊಂಡಿದ್ದಾನೆ. ಬುದ್ಧಿಜೀವಿಯಾದ ರಾಘವಾಂಕ ಅವರನ್ನು ದೂರವೇ ನಿಲ್ಲಿಸಿದ್ದಾನೆ"[2] ಎಂದ ಚಿದಾನಂದಮೂರ್ತಿಯವರ ಮಾತನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಹರಿಹರ ಭಾವವೇಶದ ತೀವ್ರತೆಯಲ್ಲಿ ಅನೇಕ ವಾಸ್ತವಿಕ ಸಂಗತಿಗಳನ್ನು ಮರೆಯುತ್ತಾನೆ. ರಾಘವಾಂಕ ತರ್ಕಬದ್ಧವಾದ ವಾಸ್ತವಿಕ ದೃಷ್ಟಿಕೋನದಿಂದ ಹಂತ ಹಂತವಾಗಿ ಜಾತಿಯ ಘರ್ಷಣೆಯನ್ನು ಬೆಳೆಸುತ್ತಾ ಹೋಗುತ್ತಾನೆ. ಹರಿಹರನ ನಾಯಕರುಗಳಿಗೆ ಪ್ರತಿಸ್ಪರ್ಧಿಗಳಿಲ್ಲ. ಇದ್ದರೂ ಹರಿಹರನ ನಾಯಕರ ಭಕ್ತಿಯ ಮುಂದೆ ಪೇಲವಮಾಗಿ ಕಾಣುತ್ತಾರೆ. ಪ್ರತಿಸ್ಪರ್ಧಿ ಗಟ್ಟಿಯಾಗಿದ್ದರೆ ಪವಾಡಗಳನ್ನು ಮೆರೆಸುವುದರ ಮೂಲಕ ಅವರ ಬಾಯಿ ಮುಚ್ಚಿಸುತ್ತಾನೆ. ಸಂಬೊಳಿನಾಗಿದೇವನ ಮೈಯಲ್ಲಿ ರಕ್ತ ಬರಲಿಲ್ಲ, ಹಾಲು ಹರಿಯಿತು ಎಂಬುದನ್ನು ನಂಬುವುದಕ್ಕಿಂತ ಹರಿಶ್ಚಂದ್ರ ಕಾವ್ಯದ ಹೊಲತಿಯರು 'ಪಂಚೇಂದ್ರಿಯಂಗಳೊಳು ನಾಲ್ಕಧಮವೊಂದದಿಕವೇ' ಎಂದು ಘಟ್ಟಿಸಿ ಕೇಳುವ ಮಾತು ಹೆಚ್ಚು ವಾಸ್ತವಿಕವಾದುದು, ತರ್ಕಬದ್ಧವಾದುದು. ಅದಕ್ಕಿಂತ ಹೆಚ್ಚಾಗಿ ಈ ಮಾತು ಹೊಲೆಯರ ನೆಲೆಯಿಂದ ಮೂಡಿ ಬಂದಿರುವಂಥದ್ದು ಎಂಬುದನ್ನು ಗಮನಿಸಬೇಕು. ಹರಿಹರನು ಭಕ್ತರಲ್ಲದ ಹೊಲೆಯರ ಬಗ್ಗೆ ಎಲ್ಲೂ ಮಾತನಾಡಿಲ್ಲ. ಹಾಗೆಯೇ ವಚನಕಾರರೂ ಸಹ. ಅಂದರೆ ಕನ್ನಡ

ಸಾಹಿತ್ಯದ ಈ ಭಕ್ತಿ ಪಂಥದ ಚಳುವಳಿಯ ಸಂದರ್ಭದಲ್ಲಿ ಹೊಲೆಯರ ಸಾಂಸ್ಕೃತಿಕ ನೆಲೆಯಿಂದ ಒಬ್ಬ ರಾಜನನ್ನು ಈ ರೀತಿ ಪ್ರಶ್ನೆ ಕೇಳಿದ್ದು ಬಹಳ ಮಹತ್ವದ ಅಂಶ. ಅದೂ ಭಕ್ತರಲ್ಲದ ಹೊಲೆಯರ ಬಗ್ಗೆ ಮಾತನಾಡಿದ್ದೇ ಅಪರೂಪದ ಘಟನೆ. ಅಂದರೆ ರಾಜ ಪರಂಪರೆಯನ್ನು ವಿರೋಧಿಸುವ ಶಕ್ತಿ ಸ್ವಲ್ಪಮಟ್ಟಿಗೆ ಪ್ರಚಲಿತದಲ್ಲಿತ್ತು ಎಂಬುದನ್ನು ರಾಘವಾಂಕ ಚಿತ್ರಿಸಿದ್ದಾನೆ.

ಹಾಗೆಯೇ ಹರಿಶ್ಚಂದ್ರನನ್ನು ವೀರಬಾಹುಕನಿಗೆ ಆಳಾಗಿಸುವ ಸಂದರ್ಭದಲ್ಲೂ ರಾಘವಾಂಕ ಸ್ವಂತಿಕೆ ಮೆರೆದಿದ್ದಾನೆ. ದೇವಿಭಾಗವತದಲ್ಲಿ ಹರಿಶ್ಚಂದ್ರ ಮೊದಲು ವಿಶ್ವಾಮಿತ್ರನಿಗೆ ಆಳಾಗಿ ಆನಂತರ ವೀರಬಾಹುಕನಿಗೆ ಮಾರಲ್ಪಡುತ್ತಾನೆ. ಕ್ಷತ್ರಿಯನೇ ನೇರವಾಗಿ ಹೊಲೆಯರಿಗೆ ಆಳಾಗುವುದು ವರ್ಣ ಪದ್ಧತಿಗೆ ವಿರುದ್ಧ. ರಾಘವಾಂಕ ಈ ವರ್ಣ ಪದ್ಧತಿಯನ್ನು ಮೀರಿ ನೇರವಾಗಿ ಹರಿಶ್ಚಂದ್ರ ವಿಶ್ವಾಮಿತ್ರನಿಗೆ ಆಳಾಗುವಂತೆ ಮಾಡಿದ್ದಾನೆ. ಆಗಲೂ ಹರಿಶ್ಚಂದ್ರ ತನ್ನ ಜಾತಿ ಧರ್ಮವನ್ನು ಕುರಿತು ಚಿಂತಿಸುತ್ತಾನೆ. ಜಾತಿಗಳಲ್ಲಿ ಅತ್ಯಂತ ಕೀಳಾದ ಹೊಲೆಯ ಜಾತಿಯವನೊಬ್ಬ 'ಮೇರೆದಪ್ಪಿ' ನನ್ನನ್ನು ದಾಸನಾಗು ಎಂದು ಕೇಳಿದ್ದು 'ಕಾಲಗುಣವೊ ಎನ್ನನ್ನು ಎಡೆಗೊಂಡ ಕರ್ಮಫಲವೋ' ಎಂದು ಕೋಪಗೊಂಡಾಗ 'ಕೀಳಾರು ಮೇಲಾರು ಹದುಳಿಪ್ಪ ನಾನು ಚಾಂಡಾಲನೋ ಹುಸಿಯ ಹೊಲೆಯಂ ಹೊರುವ ನೀನು ಚಾಂಡಾಲನೋ' ಎಂದು ಕೇಳುತ್ತಾನೆ. ಹರಿಶ್ಚಂದ್ರನ ಮಾತನ್ನು ಅವನಿಗೇ ವಾಪಸ್ಸು ಕೊಟ್ಟಾಗ ಕೊನೆಗೆ ಅವನು ತನ್ನದು ತಪ್ಪು ಎಂದು ಒಪ್ಪಿಕೊಳ್ಳುತ್ತಾನೆ. ಮಾತುಮಾತಿಗೂ ಹರಿಶ್ಚಂದ್ರನನ್ನು 'ಹುಸಿಯ ಹೊಲೆಕಾರ' ಎಂದು ಹಂಗಿಸುವ ಮೂಲಕ ಅವನ ಹೃದಯದಲ್ಲಿದ್ದ ಜಾತಿಯ ಅಹಂಕಾರವನ್ನು ಮೆಟ್ಟಿ ಅವನನ್ನು ಕುಗ್ಗಿಸುತ್ತಾನೆ. ಕೊನೆಯಲ್ಲಿ ಶಿವ 'ಅತಿಹುಸಿವ ಯತಿ ಹೊಲೆಯ' ಹುಸಿಯದಿಹ ಹೊಲೆಯನುನ್ನನ್ನತಯತಿವರನು' ಎಂದು ಜಾತಿ ಶ್ರೇಣಿಯ ಕೊನೆ ಮೊದಲಿನವರ ಸ್ಥಾನವನ್ನು ಪಲ್ಲಟಿಸುತ್ತಾನೆ. ಇಲ್ಲಿ ಆರಂಭದಿಂದಲೂ ಮೇಲು ಕೀಳಿನ ಘರ್ಷಣೆಗೆ ಸಂಬಂಧಿಸಿದಂತಹ ಭಾವನೆ ಎಂಥದು ಎಂಬುದನ್ನು ಓದುಗರಿಗೆ ಮನವರಿಕೆ ಮಾಡಿಕೊಡುವುದು ಕವಿಯ ಮುಖ್ಯ ಉದ್ದೇಶವಾಗಿದೆ. ವೀರಶೈವ ಶರಣರು ಬೋಧಿಸಿದ ಜಾತ್ಯಾತೀತ ತತ್ತ್ವವನ್ನು ಪ್ರತಿಪಾದಿಸುವುದಾಗಲೀ, ಅದನ್ನು ಎತ್ತಿ ಹಿಡಿಯುವುದಾಗಲಿ ಇಲ್ಲಿ ಕವಿಯ ಉದ್ದೇಶವಾಗಿಲ್ಲ. ಆದರೆ ಮಾಯದಬಲೆಯರು ವಾದದ ಸಂದರ್ಭದಲ್ಲಿ ಜಾತಿಕುಲಗಳಿಗೆ ಸಂಬಂಧಿಸಿದಂತೆ ಆಡುವ ಮಾತುಗಳು ಶಿವಶರಣರ ಪ್ರಗತಿಪರ ದೋರಣೆಯ ಅನುಗುಣವಾಗಿದೆ. 'ಅವಗುಣಂಗಳ ಸಂಗದಿಂದ ಕುಲಂ ಹಸಗೆಟ್ಟು ಅನಾಮಿಕೆಯರಾದರು' ಎಂಬುದನ್ನು ತಿಳಿಸುವಾಗ ಕವಿ 'ವಕ್ರ ವಾಕ್ಯ ಸಮೂಹ'ವೂ (೭-೩) ಅವರ ಆ ಅವಗುಣಗಳಲ್ಲಿ ಒಂದೆಂದು ಹೇಳಿದ್ದಾನೆ. ಅವನ

ಪ್ರಕಾರ ಮಾಯದಬಲೆಯರ ಜಾಣತನವೂ, ವಕ್ರವಾಕ್ಯ ಸಮೂಹವೇ ಎಂಬ ಸೂಚನೆ ಕಾವ್ಯದಲ್ಲಿರುವಂತಿದೆ. ಆದ್ದರಿಂದ ಮಾಯದಬಲೆಯರ ವಾದ ಸರಣಿಯನ್ನು ಮಾತ್ರ ಗಮನಿಸಿ ರಾಘವಾಂಕ ಹೊಲೆತನಕ್ಕೆ ಸಂಬಂಧಿಸಿದಂತೆ ಪ್ರಗತಿಪರ ಧೋರಣೆಯನ್ನು ಕಾವ್ಯದಲ್ಲಿ ಪ್ರತಿಪಾದಿಸಿದ್ದನೆಂಬುದು ಕಾಣುವುದಿಲ್ಲ. ಈ ವಿಷಯದಲ್ಲಿ ಕವಿಯ ಧೋರಣೆ ವೈದಿಕ ಪರಂಪರೆಯ ಪರಿಕಲ್ಪನೆಗೆ ಅನುಗುಣವಾಗಿದೆ.

ವೀರಬಾಹುಕ ಮತ್ತು ಮಾಯದಬಲೆಯರನ್ನು ನಿಜವಾದ ಹೊಲೆಯರನ್ನಾಗಿ ಮಾಡದಿರುವುದಕ್ಕೆ ಕವಿಯ ಜಾತ್ಯತೀತ ಧೋರಣೆ ಕಾರಣವಲ್ಲ. ಸತ್ಯವನ್ನೇ ಪರಮ ಮೌಲ್ಯವೆಂದು ನಂಬಿ ನಡೆವ ಹರಿಶ್ಚಂದ್ರನ ಕುಲಾಚಾರ ನಿಷ್ಠೆಯೇ ಮೊದಲಾದ ಯಾವೊಂದು ಮೌಲ್ಯಕ್ಕೂ ನಿಜವಾದ ಧಕ್ಕೆ ಒದಗದ ರೀತಿಯಲ್ಲಿ ಅವನನ್ನು ಕೊನೆಯವರೆಗೂ ರಕ್ಷಿಸುವುದು ಕವಿಯ ಧೋರಣೆಯಾಗಿರುವುದೇ ಅದಕ್ಕೆ ಕಾರಣವಾಗಿದೆ. ರಾಘವಾಂಕನು ಕಾವ್ಯದಲ್ಲಿ ಸ್ಥಾಪಿಸುವ ಮೌಲ್ಯವಾದ 'ಸತ್ಯದ' ಚೌಕಟ್ಟಿನಲ್ಲಿ ಹೊಲೆಯ ಜಾತಿ ಕೀಳು ಎಂಬ ಭಾವ ಉಳಿದು ಬಿಡುತ್ತದೆಯೇ ಹೊರತು 'ಸತ್ಯ' ವೆಂಬ ಮೌಲ್ಯದಲ್ಲಿ ಹೊಲೆಯ ಜಾತಿ ಕೀಳಲ್ಲ ಎಂಬ ತಿಳಿವು ಕರಗಿಕೊಳ್ಳುವುದಿಲ್ಲ. ಕೃತಿಯ ಸಂವಿಧಾನ ರಚನೆಯೂ ಕವಿಯ ಈ ಧೋರಣೆಗೆ ಅನುಗುಣವಾಗಿಯೂ ನಡೆದಿದೆ. ಆದ್ದರಿಂದ "ಹರಿಶ್ಚಂದ್ರ ಕಾವ್ಯವನ್ನು ಬರೆಯುವಲ್ಲಿ ಕವಿಯಾದ ರಾಘವಾಂಕನು 'ಹೊಲೆಯ' 'ಹೊಲೆತನ'ಗಳ ವಿಚಾರವನ್ನು ಕೇವಲ ತಾತ್ವಿಕವಾಗಿ ಮಾತ್ರ ಚರ್ಚಿಸಿದ್ದಾನೆ. ರಾಘವಾಂಕನ ದೃಷ್ಟಿಗೆ 'ಹೊಲೆಯ' 'ಹೊಲೆತನ' ಇವು ಸಾಮಾಜಿಕ ಸ್ತರವನ್ನೂ ಅದಕ್ಕೆ ಸಂಬಂಧಿಸಿದ ವೃತ್ತಿಯನ್ನೂ ಪ್ರತಿನಿಧಿಸುವುದಕ್ಕಿಂತ ಮನಸ್ಸಿನ ಸ್ವಭಾವ ಹಾಗೂ ಪ್ರವೃತ್ತಿಯನ್ನೂ ಪ್ರತಿನಿಧಿಸುತ್ತವೆ"[೮] ಎಲ್ಲ ಸಂದರ್ಭಗಳಿಗಿಂತ ಹೆಚ್ಚು ಕಠಿಣವಾದ ಸನ್ನಿವೇಶವನ್ನು ನಿರ್ಮಾಣ ಮಾಡುವುದರ ಮೂಲಕ ಕವಿ, ಕುಲಾಚಾರ ನಿಷ್ಠೆಯು ಸತ್ಯದ ಮುಂದೆ ಗೌಣವೆಂದು ಹರಿಶ್ಚಂದ್ರನು ಭಾವಿಸುವಂತೆ ಮಾಡಿದ್ದಾನೆಯೇ ಹೊರತು ಜಾತಿ ಕುಲಗಳನ್ನು ಕುರಿತಂಥ ಮೇಲು ಕೀಳು ಭಾವನೆ ಹರಿಶ್ಚಂದ್ರನಲ್ಲಿ ನಿರಸನ ಹೊಂದಿತೆಂಬಂತೇನೂ ನಿರ್ವಹಿಸಿಲ್ಲ. 'ಹರಿಶ್ಚಂದ್ರ ವೀರಬಾಹುಕನ ಮಾತಿಗೆ ಮೌನಿಯಾಗಿದ್ದು ಅವನು ಅನಿವಾರ್ಯತೆಗೆ ಶರಣಾದದ್ದರ ಸೂಚನೆಯೇ ಹೊರತು, ಆತನಲ್ಲಿ ಹೊಲೆಯರೆಂಬ ಸಾಮಾಜಿಕ ವರ್ಗದ ಬಗೆಗೆ ಒಂದು ಬಗೆಯ ತಾತ್ವಿಕ ಜ್ಞಾನೋದಯವಾಯಿತೆಂಬುದರ ಸೂಚನೆ ಅಲ್ಲ. ಹರಿಶ್ಚಂದ್ರನಿಗೆ ಕಡೆಗೂ ಈ ಸಾಮಾಜಿಕ ಸ್ತರವನ್ನು ಕುರಿತ ಒಂದು ಸಮಾನತಾ ದೃಷ್ಟಿ ಲಭಿಸಿತೆನ್ನುವ ಸೂಚನೆ ಎಲ್ಲೂ ಬರುವುದಿಲ್ಲ."[೯]

ಮುಂದೆಯೂ ಹರಿಶ್ಚಂದ್ರ ತಾನು ಹೊಲೆಯನ ಆಳಾಗುವಂತಾಯಿತಲ್ಲಾ ಎಂದು ಮರುಗುತ್ತಾನೆ. 'ಚಾಂಡಾಲಕಿಂಕರನಾಗಿ ದೋಷಕ್ಕೆ ನಡುಗದೆ ಕುಲಾಚಾರಮಂ ಬಿಟ್ಟು ಜಗಕೆ ನಗೆಗೆಡೆಯಾದ ಪಾತಕ ಹರಿಶ್ಚಂದ್ರನವನನ್ನೇನೆಂದು ನೆನೆದಪೆ"(೧೨-೪೩)- ಹರಿಶ್ಚಂದ್ರ ಚಂದ್ರಮತಿಗೆ ಹೇಳುವ ಮಾತಿದು "ಚಾಂಡಾಲ ಸೇವಕನಾದ ಪಾಪಿಯಂ ನೀಚನನನೂನ ಪಾತಕನೆನ್ನಂ ಪೋಲ್ತು ಕೆಡದೆ "(೧೨-೪೮), "ಚಾಂಡಾಲ ಸೇವೆ ಮಾಡಿ ನಿಂದೆಯಲ್ಲದ ಸೂರ್ಯಕುಲಕೆ ಕುಂದಂ ತಂದನೆಂದು ನುಡಿಸೆಯೊ" (೧೨-೫೦) - ಲೋಹಿತಾಶ್ವನ ಹೆಣವೆಂದು ಗೊತ್ತಾದಾಗ ದುಃಖ ಬಿತ್ತರಿಸಿ ಬಂದ ಹರಿಶ್ಚಂದ್ರ ಹೆಣವನ್ನು ಉದ್ದೇಶಿಸಿ ಆಡುವ ಮಾತುಗಳಿವು. ಹರಿಶ್ಚಂದ್ರ ಚಂದ್ರಮತಿಯನ್ನು ಹೊಡೆಯುತ್ತ ಬೈಯುತ್ತ ಅವಳ ತಲೆಕಡಿಯಲೆಂದು ಸ್ಮಶಾನಕ್ಕೆ ತರುವ ಸಂದರ್ಭದಲ್ಲಿ ಬೈಗುಳದ ಮಧ್ಯೆ ಅವನ ಬಾಯಲ್ಲಿ ಬರುವ "ಹೊಲತಿ' ಎಂಬ ಮಾತನ್ನೂ ಗಮನಿಸಬೇಕು (೧೩-೧೦) "ಹೊಲೆಯನಾದವನಿನ್ನು ಸತಿಗಿತಿಯ ಕೊಲೆಗೆ ಹೇಸಿ ಬೆನ್ನೀವೆನೆ" (೧೩-೧೮) - ಚಂದ್ರಮತಿಯ ತಲೆಕಡಿಯಲು ಸಿದ್ಧನಾಗಿ ನಿಂತ ಹರಿಶ್ಚಂದ್ರನಿಗೆ ವಿಶ್ವಾಮಿತ್ರ ಪ್ರಲೋಪನೆಗಳನ್ನು ಒಡ್ಡಿದಾಗ ಹರಿಶ್ಚಂದ್ರ ಹೇಳುವ ಮಾತಿದು "ಚಾಂಡಾಲ ಕಿಂಕರನಾದ ಹೊಲೆವೇಷವನ್ನು ಹೊತ್ತು ಸುಡುಗಾಡು ಕಾದು ಶವಶಿರದಕ್ಕಿಯನು ಹೇಸದುಂಡು ಜೀವಿಸುತ ವರಪುತ್ರನಳಿದುದನು ಕಣ್ಣಾರೆ ಕಂಡು ಘನಪತಿವ್ರತೆಯಪ್ಪ ನಿಜಸತಿಯ ಕೊಂದ ನೀಚನು ಮೂರ್ಖನಾನೆನ್ನ ಠಾವಿಂಗಿದೇಕೆ ಪಾವನಮೂರ್ತಿ ಬಿಜಯಂಗೆಯ್ದಿರಿ" (೧೪-೧೫) - ಶಿವ ಪ್ರತ್ಯಕ್ಷನಾಗಿ ಹರಿಶ್ಚಂದ್ರನನ್ನು ಅಪ್ಪಿಕೊಂಡ ಸಂದರ್ಭದಲ್ಲಿ ಹರಿಶ್ಚಂದ್ರ ಹೇಳುವ ಮಾತಿದು. ಇವುಗಳನ್ನೆಲ್ಲ ನೋಡಿದರೆ ಹರಿಶ್ಚಂದ್ರನಲ್ಲಿ ಹೊಲೆಯ ಕೀಳೆಂಬ ಭಾವನೆ ಕೊನೆಯವರೆಗೂ ನಿರಸನ ಹೊಂದಿಲ್ಲವೆಂಬುದು ಸ್ಪಷ್ಟವಾಗುತ್ತವೆ ಕವಿಗೂ ಹೊಲೆಯ ಕೀಳು ಎಂಬ ಹರಿಶ್ಚಂದ್ರನ ಭಾವನೆ ತಪ್ಪು ಎಂದು ತೋರಿಸುವ ಉದ್ದೇಶವಿರಬಹುದು. ಇದನ್ನು ಕವಿ ಕಾವ್ಯ ಓದುಗನಿಗೆ ಹೊರನೋಟಕ್ಕೆ ತೋರಿಸುವುದಿಲ್ಲ. ಆಂತರಿಕವಾಗಿ ಓದುವಾಗ ಪ್ರತಿರೋಧದ ಧ್ವನಿಯನ್ನು ಕಾಣಬಹುದು. ಕೊನೆಯಲ್ಲಿ

ಘನಸತ್ಯವೇ ಜೀವವೆಂದಿರ್ದ ನಿನ್ನ ಹೊಲೆ
ಯನ ಸೇವೆ ಗುರುಸೇವೆ ಹೊತ್ತ ಹೊಲೆವೇಷ ಪಾ
ವನ ಪುಣ್ಯವೇಷ ಸುಡುಗಾಡ ರಕ್ಷಿಸಿದಿರವು ತಾ ಯಜ್ಞರಕ್ಷೆಯಿರವು
ಅನುದಿನಂ ಭುಂಜಿಸಿದ ಶವದ ಶಿರದಕ್ಕಿಯ
ಲ್ಲನಪೇಯ ಚಾಂದ್ರಾಯಣಂ ಪುತ್ರನಳಿವು ಜ
ನ್ಮನಿಕಾಯದಳಿವಂಗನಾಹನನ ಮಾಯಾಹನನವಂಜಬೇಡೆಂದನು.

(ಹ.ಕಾ. ೧೪-೭)

ಅತಿಹುಸಿವಯತಿ ಹೊಲೆಯ ಹುಸಿಯದಿಹ ಹೊಲೆಯನು
ನ್ನತಯತಿವರನು ಹುಸಿದು ಮಾಡುವ ಮಹಾಯಜ್ಞ
ಶತವೆಯ್ದೆ ಪಂಚಪಾತಕ ಸ್ತ್ಯವೆರಸಿದ ನ್ಯಾಯವದು ಲಿಂಗಾರ್ಚನೆ
ಶ್ರುತಿಮತವಿದೆನ್ನಾಜ್ಞೆ ನಿನ್ನಂತೆ ಸತ್ಯರೀ
ಕ್ಷಿತಿಯೊಳಿನ್ನಾರುಂಟು ಹೇಳೆಂದು ಪಾರ್ವತೀ
ಪತಿ ಹರಿಶ್ಚಂದ್ರನಂ ತಲೆದಡವಿ ಬೋಳೈಸಿ ಕೌಶಿಕಂಗಿಂತೆಂದನು

(ಹ.ಕಾ ೧೪-೧೦)

ಎಂಬ ಶಿವ ಹೇಳುವ ಅರ್ಥಾಂತರರೋಕ್ತಿಯ ಮಾತುಗಳ ಮೂಲಕ ಹರಿಶ್ಚಂದ್ರನ ಮಾತಿಗೆ ಸಮಾಧಾನವನ್ನು ಹೇಳುವ ಮಾತುಗಳಾಗಿವೆ. ಹರಿಶ್ಚಂದ್ರ ಪಾತ್ರದ ನಿರ್ಧಿಷ್ಟ ಸಂದರ್ಭಕ್ಕೆ ಅನ್ವಯಿಸಿ ವ್ಯಾಖ್ಯಾನಿಸಬೇಕಾದ ಮಾತುಗಳವು.

ಈ ಉದಾಹರಿಸಿದ ಎರಡೂ ಪದ್ಯಗಳಲ್ಲಿ (೧೪-೭, ೧೪-೧೦) ಸತ್ಯದ ಮಹಿಮೆಯನ್ನು ಶಿವನ ಮೂಲಕ ಸಾರುವ ಧೋರಣೆ ಪ್ರಧಾನವಾಗಿದೆಯೇ ಹೊರತು ಹೊಲೆಯ ಕೀಳಲ್ಲ ಎಂಬುದನ್ನು ಸಾರುವ ಧೋರಣೆ ಪ್ರಧಾನವಾಗಿಲ್ಲ "ಘನಸತ್ಯವೇ ಜೀವವೆಂದಿರ್ದ ನಿನ್ನ ಹೊಲೆಯನ ಗುರುಸೇವೆ" ಎಂಬ ಮಾತಿನಲ್ಲಿ ಹೊಲೆಯನ ಸೇವೆ ಗುರು ಸೇವೆ ಎಂದು ಇಲ್ಲ, 'ನಿನ್ನ' ಎಂಬ ಪದವಿದೆ. ಆ ಪದ ಮುಖ್ಯ ಯಾಕೆಂದರೆ 'ಘನಸ್ತ್ಯವೇ ಜೀವವೆಂದಿರ್ದ'ವನು ಹರಿಶ್ಚಂದ್ರ, ಅಂಥ ಹರಿಶ್ಚಂದ್ರ ಮಾಡಿದ ಹೊಲೆಯನ ಸೇವೆ ಗುರುಸೇವೆ. ಎಲ್ಲರೂ ಮಾಡಬಹುದಾದ ಹೊಲೆಯನ ಸೇವೆಯೂ ಗುರುಸೇವೆಯೂ ಆಗುತ್ತದೆ ಎಂಬಂಥ, ಹೊಲೆಯ ಕೀಳಲ್ಲ ಎಂಬಂಥ ಅರ್ಥವ್ಯಾಪ್ತಿ ಶಿವನ ಮಾತಿಗೆ ಈ ಕಾವ್ಯ ಸಂದರ್ಭದಲ್ಲಿ ಬರಲಾರದು. ಹಾಗೆಯೇ 'ಅತಿಹುಸಿವ ಯತಿ ಹೊಲೆಯ ಹುಸಿಯದಿಹ ಹೊಲೆಯನುನ್ನತ ಯತಿವರನು' ಎಂಬಲ್ಲಿಯೂ ಹೊಲೆಯ ಮತ್ತು ಯತಿ ಇಬ್ಬರನ್ನೂ ಸಮಾನರೆಂದು ಪರಿಗಣಿಸಿ ಹೇಳುವ ಧೋರಣೆ ಇದ್ದಂತಿಲ್ಲ. ಅಲ್ಲಿ ಯತಿ ಶ್ರೇಷ್ಠ, ಹೊಲೆಯ ಕನಿಷ್ಠ ಎಂಬ ಭಾವವೇ ಇದೆ. ಆದರೆ ಅದು ಅಪವಾದ ರೂಪದ ಹೊಲೆಯ ಮತ್ತು ಅಪವಾದ ರೂಪದ ಯತಿಯನ್ನು ಮಾತ್ರ ಲಕ್ಷ್ಯದಲ್ಲಿಟ್ಟುಕೊಂಡು ಹೇಳುವ ಮಾತಾಗಿವೆ.

ಈ ಹಿನ್ನೆಲೆಯಲ್ಲಿ ಮಾಯದಬಲೆಯರನ್ನು ಕುರಿತು ಕವಿ ನೀಡುವ ವಿವರಣೆಯನ್ನು ಪರಿಶೀಲಿಸಬಹುದು. "ಮುನಿಗೆ ಹೊಲೆಯಾವುದತಿಕೋಪ ಬದ್ಧದ್ವೇಷವನಿಮಿತ್ತ ವೈರವಧಟಿಂದ ಹುಟ್ಟಿದರಾಗಿ ವನಿತೆಯರು ಕಡೆಗೆ ಹೊಲತಿಯರಾಗಿ" (೭-೨) ಎಂದು ಕವಿ ಪರಿಚಯಿಸುತ್ತಾನೆ. "ವನಿತೆಯರು" ಎಂದು

ಮೊದಲು ಹೇಳಿ ಆನಂತರ "ಕಡೆಗೆ ಹೊಲತಿಯರಾಗಿ" ಎಂದು ಹೇಳಿದ್ದಾನೆ. ಆದರೆ ಮುಂದಿನ ಪದ್ಯದಲ್ಲಿ (೭-೩) ಅವರು 'ಅನಾಮಿಕೆ'ಯರಾದದ್ದಕ್ಕೆ ಕವಿ ಕೊಡುತ್ತಿರುವ ಕಾರಣಗಳನ್ನು ಲಕ್ಷ್ಯವಿಟ್ಟು ನೋಡಿದಾಗ ಆ ಪತಿಯರು ನಿಜವಾಗಿಯೂ ಜಾತಿಯಿಂದ ಹೊಲತಿಯರು ಎಂದು ಕವಿ ಖಚಿತಪಡಿಸಿಲ್ಲ. ಮುಂದೆ ವಿಶ್ವಾಮಿತ್ರನ ಮಾತುಗಳಲ್ಲಿಯೂ ಅವರು 'ಹೊಲತಿಯರು' ಎಂಬ ಅಭಿಪ್ರಾಯ ಮೂಡುವುದಿಲ್ಲ. ವಿಶ್ವಾಮಿತ್ರ ಕಾವ್ಯದುದ್ದಕ್ಕೂ ತನ್ನ 'ಬಸುರಿಂದ ಮೂಡಿರ್ದ ಕನ್ನೆಯರು" (೮-೧೧), ತಾನು ಹಡೆದವರು (೮-೨೯), ತನ್ನ ಮಕ್ಕಳು (೮-೨೧, ೩೦, ೩೬, ೭೫, ೧೩-೧೬). ಎಂದೇ ಹೇಳುತ್ತಾನೆ. ಹರಿಶ್ಚಂದ್ರ ಮಾತ್ರ ಅವರಿಗೆ ಸಂಬಂಧಪಟ್ಟಂತೆ ಅವರು ನಿಜವಾದ ಹೊಲತಿಯರು ಎಂಬ ಭಾವನೆಯಿಂದಲೇ ಉದ್ದಕ್ಕೂ ಮಾತುಗಳನ್ನು ಉಳಿಸುತ್ತ ಹೋಗುತ್ತಾನೆ. ಆದರಿಂದ ಅವರು ಜಾತಿಯಿಂದ ಹೊಲೆಯರಲ್ಲ ಎಂದು ಅಭಿಪ್ರಾಯ ಪಡಬಹುದು.

ವೀರಬಾಹುಕನನ್ನೂ ಕವಿ ನಿಜವಾದ ಹೊಲೆಯ ಜಾತಿಯವನನ್ನಾಗಿ ಮಾಡಿಲ್ಲ. ಆ ವೇಷದಲ್ಲಿರುವವನು ಯಮ, ಮಾಯದಬಲೆಯರೂ ವೀರಬಾಹುಕನೂ ಹರಿಶ್ಚಂದ್ರನಿಗೆ ಮಾತ್ರ ನಿಜವಾದ ಹೊಲೆಯರಾಗಿಯೇ ಕಾಣಿಸುತ್ತಾರೆ. ಅವನು ಅವರನ್ನು ಹೊಲೆಯರೆಂದೇ ಭಾವಿಸಿ ವ್ಯವಹರಿಸುತ್ತಾನೆ ಎಂಬ ಕಾರಣಕ್ಕಾಗಿಯೇ ಅವರು ನಿಜವಾಗಿಯೂ ಹೊಲೆಯರು ಎಂದು ಸಾಧಿಸುವುದು ಕವಿಗೆ ಸರಿಯಾಗಿ ಕಾಣುವುದಿಲ್ಲ ಅದನ್ನು ವಿರೋಧಿಸುತ್ತಾನೆ. ಈ ಕಾವ್ಯದಲ್ಲಿ ಹರಿಶ್ಚಂದ್ರನ ಸತ್ಯ ಪರೀಕ್ಷೆಗಾಗಿ ವಿಶ್ವಾಮಿತ್ರ ಸೃಷ್ಟಿಸುವ, ಒಡ್ಡುವ ಕಷ್ಟ ಕೋಟಲೆಗಳೆಲ್ಲಾ ಹರಿಶ್ಚಂದ್ರನಿಗೆ ನಿಷ್ಠುರ ವಾಸ್ತವ ಸತ್ಯಗಳಾಗಿಯೇ ಕಾಣಿಸುತ್ತದೆ. ಆ ನಿಷ್ಠುರ ವಾಸ್ತವ ಸತ್ಯಗಳನ್ನು ಅವನು ತನ್ನ ಸತ್ಯ ನಿಷ್ಠೆಯ ಬಲದಿಂದ ಎದುರಿಸುತ್ತ ದಾಟುತ್ತ ಹೋಗುತ್ತಾನೆ. ಮಾಯದಬಲೆಯರನ್ನು ಮದುವೆಯಾಗಲು ಹರಿಶ್ಚಂದ್ರ ನಿರಾಕರಿಸುವುದರ ಮೂಲಕ ಆತನ ಕುಲಾಚಾರನಿಷ್ಠೆ ಎಂಥದು ಎಂಬುದನ್ನು ರಾಘವಾಂಕ ಸೊಗಸಾಗಿ ಚಿತ್ರಿಸಿದ್ದಾನೆ. ಆತ ಸತ್ಯವಂತನಾದರೂ ಕುಲಾಭಿಮಾನ ಎದುರಾದಾಗ ಆತನ ಭಾವನೆ ಎಂಥದು ಎಂಬುದನ್ನು ತೋರಿಸಿದ್ದಾನೆ.

ಕವಿ ರಾಘವಾಂಕ ಈ ಕಾವ್ಯದಲ್ಲಿ "ಎಲ್ಲ ಸಂದರ್ಭಗಳಿಗಿಂತ ಹೆಚ್ಚು ಕಠಿಣವಾದ ಸನ್ನಿವೇಶವನ್ನು ನಿರ್ಮಾಣ ಮಾಡುವುದರ ಮೂಲಕ ಕವಿ ಕುಲಾಚಾರ ನಿಷ್ಠೆಯು ಸತ್ಯದ ಮುಂದೆ ಗೌಣವೆಂದು ಹರಿಶ್ಚಂದ್ರನು ಭಾವಿಸುವಂತೆ ಮಾಡಿದ್ದಾನೆಯೇ ಹೊರತು, ಜಾತಿ ಕುಲಗಳನ್ನು ಕುರಿತಂಥ ಮೇಲು-ಕೀಳು ಭಾವನೆ ಹರಿಶ್ಚಂದ್ರನಲ್ಲಿ ನಿರಸನ ಹೊಂದಿತೆಂಬಂತೇನೂ ನಿರ್ವಹಿಸಿಲ್ಲ"[೧೧] ಎಂಬ ಡಾ. ಜಿ.ಎಸ್. ಶಿವರುದ್ರಪ್ಪನವರ

ಮಾತು ಸಮರ್ಥನೀಯವೆನಿಸುತ್ತದೆ. ಇದಕ್ಕೆ ಮೂಲಭೂತವೆನಿಸುವ ಏಕೈಕ ಕಾರಣ, ಈಗಾಗಲೇ ಸೂಚಿಸಿರುವಂತೆ ಹೊಲೆತನವೆಂಬ ಕೀಳು ಎಂಬ ಸಾಮಾಜಿಕ ನಡವಳಿಕೆಯ ಪೂರ್ವಪರಂಪರೆಯ ಪ್ರಭಾವದಿಂದ ಬಿಡಿಸಿಕೊಳ್ಳುವುದು ಕವಿಗೆ ಅಸಾಧ್ಯವಾಗಿರುವುದರಿಂದಲೇ, ಹೊಲೆತನವೆಂದರೆ ಕೀಳು ಹೊಲೆಯರೆಂದರೆ ಮಾನವ ಸಮಾಜಕ್ಕೆ ಹೊರಗಿನವರು ಎಂಬ ಭಾವನೆ ಒಂದು ಸ್ಥಾಯೀಭಾವವಾಗಿ ಸ್ವತಃ ಕವಿಯಲ್ಲೇ ಇರುವುದು ಸ್ಪಷ್ಟವಾಗಿದೆ. ಎಂತಲೇ ತತ್ಫಲವಾದ ಅವನ ಕಾವ್ಯ ಅದರಿಂದ ಹೊರತಾಗಲು ಸಾಧ್ಯವಿದ್ದಂತಿಲ್ಲ. ಅಂದರೆ, ಹೊಲೆತನ ಅಥವಾ ಅಸ್ಪೃಶ್ಯತೆಯನ್ನು ಕುರಿತಂತೆ ಇದು ಕವಿಯ ಧೋರಣೆಯಾಗಿದೆ.

ಈ ಕಾವ್ಯದ ಕೆಲವು ಸನ್ನಿವೇಶಗಳಲ್ಲಿ ರಾಘವಾಂಕ ವಿಶಿಷ್ಟ ಅರ್ಥಗಳನ್ನು ನೀಡಿ ಬೇರೆಯಾದ ರೀತಿಯಲ್ಲಿ ವೈದಿಕ ಪರಂಪರೆಯನ್ನು ವಿರೋಧಿಸುವುದನ್ನು ಕಾಣಬಹುದು. ಉದಾ :- 'ಕರ್ಮ' ಮತ್ತು 'ನರಕ' ಮುಂತಾದ ಬಿಡಿ ಚಿತ್ರಗಳ ಮೂಲಕ ಕವಿ ಸೃಷ್ಟಿಸಿರುವ ಭಾವಶರೀರದ ಸ್ವರೂಪವನ್ನು ಮನಗಂಡುಕೊಳ್ಳಬೇಕಾದರೂ ಅತ್ಯಂತ ಜರೂರಿನದು ಎನಿಸದಿರುವಂತಿಲ್ಲ. ಏಕೆಂದರೆ, ಕರ್ಮ, ಧರ್ಮ ನರಕ ಹಾಗೂ ಸ್ವರ್ಗವೇ ಮುಂತಾದ ನಾಮಪದಗಳು ತೀರಾ ಲೋಕಾರೂಢಿಯಲ್ಲೇ ಬಳಕೆಯಾಗುವ ಮಾತುಗಳೆಂಬುದು ಸತ್ಯವಾದರೂ ಅವುಗಳನ್ನು ಕುರಿತಂತೆ ಪರಿಕಲ್ಪನಾತ್ಮಕವಾದ ಜಿಜ್ಞಾಸೆಯಲ್ಲಿ ತೊಡಗಿದಾಗ, ಅವುಗಳು ಒಂದೊಂದೂ ಸ್ವತಂತ್ರವೂ ಪ್ರತ್ಯೇಕವೂ ಆದ ಅರ್ಥ ಪರಂಪರೆಯನ್ನೇ ಹೊಂದಿರುವುದನ್ನು ವೈದಿಕ ಸಂಸ್ಕೃತಿ ಮೀಮಾಂಸೆಯಿಂದ ತಿಳಿಯಬಹುದಾಗಿದೆ. ಅಷ್ಟೇ ಅಲ್ಲದೆ, ಅವುಗಳ ಬಗೆಗೆ ಕಾವ್ಯಾತ್ಮಕವಾಗಿ ವಿಚಾರ ಮಾಡಿದಾಗಲೂ, ಅವುಗಳಿಂದ ಹೊರಡುವ ಲೋಕಾರೂಢಿಯ ಅರ್ಥಗಳು ಮಾತ್ರವಲ್ಲದೆ, ಅವು ಒಂದೊಂದೂ ಸ್ವತಂತ್ರ ನುಡಿಗಟ್ಟುಗಳಾಗಿಯೇ ಕಾವ್ಯದಲ್ಲಿ ಬಳಸಲ್ಪಟ್ಟ ಸನ್ನಿವೇಶದಿಂದ ವಿಶಿಷ್ಟವಾದ ಅರ್ಥವನ್ನೇ ಪಡೆದುಕೊಂಡು, ಕವಿ ಕರ್ಮ ಎಂಬ ಪದವನ್ನು ಯಾವ ಸನ್ನಿವೇಶದ ಪ್ರತಿನಿಧಿಯಾಗಿ ಅಥವಾ ಯಾವ ಅರ್ಥವನ್ನು ಧ್ವನಿಸಲು ಬಳಸುತ್ತಾನೆ ಎಂಬುದನ್ನು ನೋಡಬಹುದು.

ಎನ್ನದುಷ್ಕರ್ಮವಶದಿಂದಾದ ಕರ್ಮವೆಂ
ದಿನ್ನೆಗಂ ಬಗೆದೆನಾನಿಂದುತನಕಂ ಕಡೆಗೆ
ನಿನ್ನಗೊಡ್ಡಾಟವೇ ಹೊಲೆಯನಾದವನಿನ್ನು ಸತಿಗಿತಿಯ ಕೊಲೆಗೆ ಹೇಸಿ

(ಹ.ಕಾ. ೧೩-೧೮)

ಸತಿಯಾದ ಚಂದ್ರಮತಿಯ ತಲೆಯನ್ನು ಕಡಿಯಬೇಕಾದ (ಹ.ಕಾ.೧೩-೧೮) ಸಂದರ್ಭದಲ್ಲಿ ಹರಿಶ್ಚಂದ್ರ ಹೇಳುವ ಮಾತಿದು. ಪದ್ಯದ ಈ ಮೊದಲರ್ಧ ಭಾಗದಲ್ಲಿ, ಅದರಲ್ಲೂ ಮೊದಲ ಸಾಲಿನಲ್ಲೇ ಪುನರುಕ್ತಿಗೊಂಡಿರುವ 'ಕರ್ಮ' ಎಂಬ ನಾಮಪದವನ್ನು ಗಮನಿಸಬೇಕು. ಹಾಗೆಯೇ, ಈ ಕೆಳಗಿನ ಇನ್ನೊಂದು ಪದ್ಯವನ್ನು ಜೊತೆಜೊತೆಗೇ ವಿಚಾರ ಮಾಡಬಹುದು.

"ನಡುಗದಂಜದೆ ಹೆದರದೋಸರಿಸದಕಟಕಟ
ಕಡೆಯಹೊಲೆಯಂ ಮೇರೆದಪ್ಪಿಬಂದೆನ್ನ ತ
ನ್ನೊಡೆಯಂಗೆ ದಾಸನಾಗೀಗಳೆಂಬುದು ಕಾಲಗುಣವೋ ಎನ್ನನು
ಎಡಗೊಂಡ ಕರ್ಮಫಲವೋ ಕಡೆಗೆ ಮೆಣಸು ಹುಳಿ
ತಡೆ ಜೋಳದಿಂ ಕುಂದೆ ನೋಡು ನೋಡೆಂದು ಘುಡು
ಘುಡಿಸಿ ಕೋಪಾಟೋಪದಿಂ ಜರಿದು ಝುಂಕಿಸಿದನುವನಿಪನನಾಮಿಕನನು"

ವಿಶ್ವಾಮಿತ್ರನ ಸಾಲ ತೀರಿಸುವ ಸಲುವಾಗಿ ವೀರಬಾಹುಕನಿಗೆ ತನ್ನನ್ನು ತಾನೇ ಮಾರಿಕೊಳ್ಳಬೇಕಾದ ಪ್ರಸಂಗ ಈ ಪದ್ಯದ ಭಾವ. ಹಾಗೆಯೇ ಈ ಎರಡು ಪದ್ಯಗಳಲ್ಲಿ ವಿಚಾರಣೀಯವೆನಿಸುವ ಹಲವಾರು ಸಂಗತಿಗಳಿರುವುದನ್ನು ಕಾಣಬಹುದಾಗಿದೆ. ಎಂತಲೇ ಮೊದಲಿಗೆ ಈಗಾಗಲೇ ಎತ್ತಿಕೊಳ್ಳಲಾಗಿರುವ 'ಕರ್ಮ' ಎಂಬ ನಾಮಪದವನ್ನು ಕುರಿತ ಚರ್ಚೆ ಪೂರ್ಣಗೊಳಿಸಬೇಕಾಗುತ್ತವೆ. ಏಕೆಂದರೆ, ವೈದಿಕ ಸಂಸ್ಕೃತಿ ಮೀಮಾಂಸೆಯಲ್ಲಿ ಕರ್ಮಕಾಂಡವೆಂದೇ ಹೆಸರಾದ 'ಕರ್ಮಸಿದ್ಧಾಂತ' ವೈದಿಕ ತುಂಬಾ ಮಹತ್ವಪೂರ್ಣ ವಾದುದೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾದುದಿಲ್ಲ. ವಾಸ್ತವವಾಗಿ ಈ ಕರ್ಮ ಎಂಬ ನಾಮಪದದ ಬಳಕೆಯಿಂದ, ಸನ್ನಿವೇಶಕ್ಕೆ ಸೂಕ್ತವಾದ ಪದವನ್ನು ಬಳಸಿರುವ ತೃಪ್ತಿಯೂ, ಕಾವ್ಯದಲ್ಲಿ ಸಾರ್ಥಕವಾದ ಸಾಲುಗಳ ನಿರ್ಮಾಣವಾಯಿತೆಂಬ ಯಶಸ್ಸಿನ ಭಾವನೆ ಕೂಡ ಕವಿಗಿರಬಹುದು. ಅಷ್ಟೇ ಏಕೆ ಕವಿಗೆ ಮಾತ್ರವಲ್ಲದೆ, ಓದುಗನ ಮನದಲ್ಲೂ ಆ ತೃಪ್ತಿ ಮತ್ತು ಸಾರ್ಥಕತೆ ಉಂಟಾಗದಿರದು. 'ಕರ್ಮ' ಮತ್ತು 'ಕರ್ಮಫಲ' ಎಂಬ ಮಾತುಗಳು ಕೇವಲ ಲೋಕರೂಢಿಯ ಮಾತುಗಳಷ್ಟೇ ಆಗಿ ಉಳಿಯುತ್ತದೆ. ಅವುಗಳಿಂದ ಉಂಟಾಗುವ ಬಿಡಿ ಚಿತ್ರಗಳೂ, ಆ ಬಿಡಿ ಚಿತ್ರಗಳಿಂದ ಕೊಡುಗೆಯಾಗಿ ನಿರ್ಮಾಣವಾಗುವ ಒಂದು ನಿರ್ಧಿಷ್ಟ ಭಾವಶರೀರವನ್ನು, ಅದರ ಉದ್ದೇಶವನ್ನೂ ಇಲ್ಲಿ ಕವಿ ಓದುಗನಿಗೆ ಮನಗಾಣಲಿತ್ನಿಸಿದ್ದಾನೆ. ಏಕೆಂದರೆ ಕರ್ಮ ಎಂಬ ಬಿಡಿಚಿತ್ರವನ್ನು ಬಳಸಿರುವ ಎರಡು ಸಂದರ್ಭಗಳೂ ಅಸ್ಪೃಶ್ಯರಿಗೆ ಸಂಬಂಧಿಸಿದುದಾಗಿದೆ. ಮೊದಲನೆಯದು, ಅಸ್ಪೃಶ್ಯನಿಗೆ ತನ್ನನ್ನು ತಾನು ಮಾರಿಕೊಳ್ಳಬೇಕಾಗಿ ಬಂದಿರುವುದು

ಹರಿಶ್ಚಂದ್ರನಿಗೆ ಕರ್ಮಫಲವಾಗಿ ಪ್ರಾಪ್ತವಾಗಿದೆ. ಎರಡನೆಯದು ಹರಿಶ್ಚಂದ್ರ ಅಸ್ಪೃಶ್ಯನ ಆಳಾಗಬೇಕಾಗಿ ಬಂದಿರುವುದೇ ಅಲ್ಲದೆ, ತನ್ನ ಹೆಂಡತಿಯ ತಲೆಯನ್ನು ತಾನೇ ಕಡಿಯಬೇಕಾಗಿದೆ. ಅದೂ ಒಬ್ಬ ಅಸ್ಪೃಶ್ಯನ ಆಳಾಗಿ, ಅಂದರೆ ಆದರ ಅರ್ಥವಿಷ್ಟೇ. ಈ ಸ್ಥಿತಿಯನ್ನು ಮುಟ್ಟಿರುವುದು ಹರಿಶ್ಚಂದ್ರನಿಗೆ ತನ್ನ 'ಕರ್ಮಫಲ'ವಾಗಿ ಪರಿಣಮಿಸಿದೆ.

ಅಂದರೆ ಹೊಲೆಮಾದಿಗರಾಗಿ ಹುಟ್ಟುವುದೇ ತಮ್ಮ ಪೂರ್ವಜನ್ಮದ ಕರ್ಮಫಲದಿಂದಾಗಿ ಎಂಬರ್ಥ ತನ್ನ ತಾನೇ ಈ ಕಾವ್ಯದ ಸಂದರ್ಭದಲ್ಲಿ ಸೃಷ್ಟಿಯಾಗುವುದನ್ನು ಗಮನಿಸಬೇಕು. ಹಾಗಾಗಿ, ವೈದಿಕ ಧಾರ್ಮಿಕ ನೆಲೆಯಲ್ಲಿ ಕರ್ಮ ಎಂಬ ಮಾತಿಗೆ ಈ ಪರಿಯ ಅರ್ಥ ಪರಂಪರೆಯೇ ಇರುವುದನ್ನು ಮನಗಂಡವರಾದುದರಿಂದಲೇ ಶರಣರು ಆ ಪದವನ್ನು ಲೋಕಾರೂಢಿಯ ನೆಲೆಯಿಂದ ಹಿಡಿದು ಬೌದ್ಧಿಕ ಎತ್ತರದವರೆಗೂ ದೂರ ಬಿಟ್ಟದ್ದು.

ಇನ್ನು ಉದ್ಭವಿಸುವ ಎರಡು ಪದ್ಯಭಾಗಗಳ ಬಗೆಗಿನ ಅನ್ಯ ವಿಚಾರಗಳ ಮಂಥನದಲ್ಲಿ ತೊಡಗಬಹುದು. 'ನಡುಗದಂಜದೆ ಹೆದರದೋಸರಿಸದಕಟಕಟ ಕಡೆಯ ಹೊಲೆಯಂ ಮೇರದಪ್ಪಿ ಬಂದೆನ್ನ ಎಂಬ ಮಾತಿನಲ್ಲಿರುವ ಭಾವಸರಣಿಯನ್ನು ಮೊದಲು ಪರಿಭಾವಿಸಬೇಕು. ಏಕೆಂದರೆ, ಕಡೆಯ ಹೊಲೆಯರಾದ ಅಸ್ಪೃಶ್ಯರಿಗೆ ಒಂದು 'ಮೇರೆ' ಅಥವಾ ಒಂದು 'ಮಿತಿ' ಅಥವಾ 'ಎಲ್ಲೆ' ಇದೆ ಎಂತಲೇ ಆ ಎಲ್ಲೆಯನ್ನು ಮೀರಿ ಅಸ್ಪೃಶ್ಯರು ಮುಂದೆ ಹೋಗಬಾರದು. ಹಾಗೆ ಮೇರೆ ಮೀರುವುದು ಧರ್ಮಬಾಹಿರ ಕೃತ್ಯವಾಗಿದ್ದು, ಅದರ ಪರಿಣಾಮದ ಎಚ್ಚರವಿರಬೇಕು ಎನ್ನುತ್ತಾನೆ ಕವಿ. ಅಂತಲೇ ಹರಿಶ್ಚಂದ್ರನನ್ನು ಕೊಳ್ಳಲು ಬಂದ ಅಸ್ಪೃಶ್ಯನನ್ನು 'ನಡೆಗದಂಜದೆ ಹೆದರದೋಸರಿಸದಕಟಕಟ ಕಡೆಯ ಹೊಲೆಯಂ ಮೇರೆದಪ್ಪಿ ಬಂದೆನ್ನ' ಎಂದು ವರ್ಣಿಸುತ್ತಾನೆ ಕವಿ. ಇಲ್ಲೆಲ್ಲ ವೈದಿಕ ಸಂಸ್ಕೃತಿಯಲ್ಲಿನ ಹೊಲೆ ಮಾದಿಗರು, ಕರ್ಮ, ಕರ್ಮಫಲ ಮುಂತಾದ ಒಂದೇ ಅರ್ಥದ ಬಳಕೆಯನ್ನು ನೋಡಿದಾಗ, ಕವಿ ರಾಘವಾಂಕನ ಕಾವ್ಯಧರ್ಮ ಶರಣ ಧರ್ಮಕ್ಕೆ ವಿರುದ್ಧವಾದುದು ಎಂಬುಮಷ್ಟೇ ಆಗಿದ್ದರೆ, ಅದೊಂದು ಸಾಮಾನ್ಯ ಘಟನೆ ಎನಿಸಬಹುದಿತ್ತು. ಅಂದರೆ, ಅಸ್ಪೃಶ್ಯ ಅಥವಾ ಹೊಲೆಮಾದಿಗರೆಂದರೆ, ಉಪಮಾನವರು ಅಥವಾ ಸಮಾಜ ಬಾಹಿರರು ಅಥವಾ ಧರ್ಮಬಾಹಿರರು ಅಸ್ಪೃಶ್ಯರಾಗಿ ಹುಟ್ಟಿ ತಮ್ಮ ಪೂರ್ವಜನ್ಮದ ಕರ್ಮಫಲವನ್ನು ಭೋಗಿಸುತ್ತಿರುವವರು ಎಂಬ ವೈದಿಕ ಸಂಸ್ಕೃತಿಯ ಹುಸಿ ಮೌಲ್ಯಗಳಿಂದ ಬಿಡಿಸಿಕೊಳ್ಳಲಾಗದ ದೌರ್ಬಲ್ಯ ಕವಿ ರಾಘವಾಂಕನನ್ನು ಅಪಾರವಾಗಿ ಕಾಡಿದೆ ಎಂಬುದೆ ಇಲ್ಲಿ ವಿಶೇಷವಾಗಿ ಗ್ರಹಿಸಬಹುದು.

ರಾಘವಾಂಕ ಜೀವಿಸುತ್ತಿದ್ದ ಸಮಾಜದ ವೈದಿಕ ಪರಂಪರೆಯ ಮೇಲ್ ವರ್ಗದವರು ಕರ್ಮ, ನರಕವೆಂಬ ಪದವನ್ನು ಬಳಸಿ ಕೆಳವರ್ಗದವರ ಮೇಲೆ ದಬ್ಬಾಳಿಕೆಯನ್ನು ಯಾವ ರೀತಿಯಲ್ಲಿ ನಡೆಸುತ್ತಿದ್ದರು ಎಂಬುದನ್ನು ಕಾವ್ಯದಲ್ಲಿ ತೋರಿಸಿ ಅದನ್ನು ಯಾವ ರೀತಿ ವಿರೋಧಿಸಬಹುದು ಎಂಬುದನ್ನು ತಿಳಿಸುತ್ತಾನೆ.

ತಮ್ಮ ಕರ್ಮಫಲದಿಂದಾಗಿ ಅಸ್ಪೃಶ್ಯರಾಗಿ ಹುಟ್ಟಿ ತಮ್ಮದೇ ಆದ ಕರ್ಮಫಲವನ್ನು ಭೋಗಿಸುತ್ತ, ನರಕಕ್ಕೆ ಮಾತ್ರ ಯೋಗ್ಯರಾದ ಅಸ್ಪೃಶ್ಯರ ಸಹವಾಸ ಮಾಡಿದವರು ನರಕಕ್ಕೆ ಹೋಗುತ್ತಾರೆ. ಕವಿ ರಾಘವಾಂಕ ತುಂಬಾ ನಿರ್ಭಿಡೆಯಿಂದ ಚಿತ್ರಿಸುತ್ತಾನೆ.

ಹವಣನಾರಯ್ಯಲೆಂದನುಗೆಯ್ದಿರಲ್ಲದೀ
ನವನರಕಮಂ ಮಾಡಹೇಳಿದವರುಂಟೆ ನಿ
ಮ್ಮವನು ನಾ ನಿಮ್ಮ ಮನದನುವನಟಿಯೆನೆ ಮುನಿಪ ಕೇಳೆಂದನವನೀಶನು
(ಹ.ಕಾ.೮-೨೪)

ವಿಶ್ವಾಮಿತ್ರ ತನ್ನ ಮಾಯದಬಲೆಯರನ್ನು ಮದುವೆಯಾಗುವಂತೆ ಹರಿಶ್ಚಂದ್ರನನ್ನು ಒತ್ತಾಯ ಮಾಡಿದಾಗ, ಅದಕ್ಕೆ ಹರಿಶ್ಚಂದ್ರನ ಪ್ರತಿಕ್ರಿಯೆಯನ್ನು ಕವಿ ಮೇಲಿನಂತೆ ಚಿತ್ರಿಸಿದ್ದಾನೆ. ಇಲ್ಲಿಂದ ಮುಂದಿನದು ಇನ್ನೊಂದು ಪದ್ಯ :

ಉತ್ತಮದ ರವಿಕುಲದೊಳುದಿಸಿ ಚಾಂಡಾಲತ್ವ
ವೆತ್ತ ಸತಿಯರ್ಗೆಳಸಿ ಘೋರನರಕಾಳಿಗನಿ
ಮಿತ್ತ ಹೋಹವನಲ್ಲ ಬೆಸಸಬೇಡಿದನೆಂದು ಭೂಭುಜಂ ಕೈಮುಗಿದನು

ಯಥಾಪ್ರಕಾರ, ಈ ಹಿಂದೆಯೇ ತಿಳಿಸಿರುವಂತೆ ಅಸ್ಪೃಶ್ಯರ ಹುಟ್ಟು ಹಾಗೂ ಸಾವು ಎಲ್ಲವೂ ನರಕಕ್ಕೆ ಮಾತ್ರ ಸಮನಾದವು, ಅವರ ಆ ನರಕ ಅವರ ಪೂರ್ವಜನ್ಮದ ಕರ್ಮಫಲವಾಗಿದೆ ಎಂಬುದಕ್ಕೆ ಈ ಪದ್ಯಭಾಗಗಳಲ್ಲೂ ಆಧಾರಗಳನ್ನು ಕಾಣಬಹುದಾಗಿದೆ. ಅಲ್ಲದೆ ಆ ಜಾತಿಯ ಸತಿಯರ ಸಹವಾಸ ಮಾಡುವುದರಿಂದ ನರಕ ಪ್ರಾಪ್ತವಾಗುತ್ತದೆ ಎಂಬುದನ್ನು ಕವಿ ಕಾವ್ಯದ ಸಂದರ್ಭದಲ್ಲಿ ಸೃಷ್ಟಿಸಿದ್ದರೂ, ಅದು ಕವಿಯ ಕೇವಲ ಕಾವ್ಯಧರ್ಮ ಮಾತ್ರವಾಗಿರದೆ, ಅದು ಅವನ ತಾತ್ವಿಕ ಧೋರಣೆಯ ಒಂದು ಅವಿಭಾಜ್ಯ ಅಂಗವೂ ಆಗುತ್ತಿರುವುದನ್ನು ಅಲ್ಲಗಳೆಯಲು ಸಾಧ್ಯವಿರುವಂತಿಲ್ಲ.

ಹರಿಶ್ಚಂದ್ರ ಕಾವ್ಯದಲ್ಲಿ ರಾಘವಾಂಕನಿಗೆ, 'ಕುಲ'ದ ಪ್ರಶ್ನೆ ಏಕೆ ಮುಖ್ಯವಾಗುತ್ತದೆ? ಇದಕ್ಕೆ ಉತ್ತರವನ್ನು ನಾವು ರಾಘವಾಂಕನ ವೈಯುಕ್ತಿಕ - ಸಾಮಾಜಿಕ ಸಂದರ್ಭದಲ್ಲಿ ಹುಡುಕಬೇಕು - ಬಸವಣ್ಣನವರ ಹನ್ನೆರಡನೆಯ ಶತಮಾನದಲ್ಲಾದ ಮಹಾನ್ ರಾಜಕೀಯ -ಸಾಮಾಜಿಕ ಕ್ರಾಂತಿಯ ನಂತರ ರಾಘವಾಂಕನು ಬರುತ್ತಾನೆ ಮತ್ತು ಮುಖ್ಯವಾಗಿ, ರಾಘವಾಂಕನ ಕಾಲದಲ್ಲಿ ಆ ಕ್ರಾಂತಿ ತನ್ನ ಮೊನಚನ್ನು, ಅರ್ಥವನ್ನು ಕಳೆದುಕೊಂಡಿರುವುದಿಲ್ಲ. ಆದ್ದರಿಂದಲೇ, ಕುಲ-ಜಾತಿ ನಿರ್ಮೂಲಕ್ಕಾಗಿ ಜನ್ಮ ತಾಳಿದ ವೀರಶೈವ ವೈಚಾರಿಕತೆಯನ್ನು ತನ್ನದಾಗಿಸಿಕೊಂಡ ರಾಘವಾಂಕನಿಗೆ ಹರಿಶ್ಚಂದ್ರನ ಕಥೆಯಲ್ಲಿ ಮುಖ್ಯವಾಗುವುದು 'ಕುಲ'ದ ಪ್ರಶ್ನೆ. ಅಲ್ಲದೆ ಅಂದಿನ ಪರಿವರ್ತಶೀಲ ಸಮಾಜದಲ್ಲಿ ಸಾಧಾರಣವಾಗಿ ಎಲ್ಲಾ ಕುಟುಂಬಗಳಲ್ಲಿಯೂ ಭಿನ್ನ ಭಿನ್ನ ಧರ್ಮವನ್ನು ಒಪ್ಪಿಕೊಂಡ ಸದಸ್ಯರಿರುತ್ತಿದ್ದರು. ರಾಘವಾಂಕನ ಕುಟುಂಬದಲ್ಲಿಯೂ, ಪ್ರಾಯಃ ಇಂತಹ ಪರಿಸ್ಥಿತಿಯಿದ್ದಿತು. ಅವನ ತಂದೆ ವೈದಿಕ ಬ್ರಾಹ್ಮಣನಾದರೆ ತಾನು ಮತ್ತು ತನ್ನ ಸೋದರ ಮಾವ (ಹರಿಹರ) ವೀರಶೈವರು. ಇಂತಹ ಪರಿಸ್ಥಿತಿಯನ್ನು ಅನಿವಾರ್ಯವಾಗುತ್ತಿದ್ದ ವೈಚಾರಿಕ ದ್ವಂದ್ವ ಹಾಗೂ ಘರ್ಷಣೆಯನ್ನು ಹರಿಶ್ಚಂದ್ರ ಕಾವ್ಯದಲ್ಲಿ ಕಾಣಬಹುದು.

ಉದಾ : ವೀರಶೈವ ರಾಘವಾಂಕನಿಗೆ ವೈದಿಕ ದೇವ ದೇವತೆಗಳಲ್ಲಿ ಅಷ್ಟೇನೂ ಗೌರವವಿಲ್ಲ. ಆದ್ದರಿಂದ ದೇವೇಂದ್ರನನ್ನು ವರ್ಣಿಸುವಾಗಲೆಲ್ಲಾ ರಂಬೆಯನ್ನು ಸೂಳೆಯಾಗಿ ಹೊಂದಿರುವ ಎಂದೇ ಮತ್ತೆ ಮತ್ತೆ ಹೇಳುತ್ತಾನೆ ('ವರ ರಂಭೆ ಸೂಳೆ, ಶಚಿರಾಣಿ' 'ಶಚೀಸತಿಯ ಗಂಡ ರಂಭೆಯ ರಸಿಕನು' ಇತ್ಯಾದಿ) ದೇವೇಂದ್ರನ ಆಸ್ಥಾನ ವರ್ಣನೆ ಆಸ್ಥಾನದ ಸಂಪತ್ತಿಗೆ, ವೈಭವಕ್ಕೆ ಒತ್ತು ಕೊಡುತ್ತದೆಯೇ ಹೊರತು ಇತರ ಗುಣಗಳಿಗಲ್ಲ, 'ಇಬ್ಬರು ಮುನಿಗಳು ಕಾದುವಾಗ ಇರಬಾರದು ಏಳಬಾರದು ಎಂಬಂತಹ ಸ್ಥಿತಿಯಲ್ಲಿ ಆಸ್ಥಾನಿಕರೆಲ್ಲರೂ ಚಿಂತಾಕ್ರಾಂತರಾಗಿದ್ದರು ಇತ್ಯಾದಿ ಮಹಾಮುನಿಗಳಾದ ವಸಿಷ್ಠ ವಿಶ್ವಾಮಿತ್ರರನ್ನೂ ರಾಘವಾಂಕನು ಅಷ್ಟೇನೂ ಗೌರವಯುತವಾಗಿ ಚಿತ್ರಿಸಿಲ್ಲ. ಅವರಲ್ಲಿದ್ದ ಕೋಪದ 'ಹೊಲೆ' ಯನ್ನು ಒತ್ತು ಕೊಟ್ಟು ವಿರೋಧಿಸುತ್ತಾನೆ.

ಈ ಎಲ್ಲಾ ದೃಷ್ಟಿಯಿಂದ ರಾಘವಾಂಕನ ಕೃತಿಗಳನ್ನು ನೋಡಿದರೆ ಆ ಕಾಲದ ಸಾಮಾಜಿಕ ಪ್ರಜ್ಞೆ ಆತನ ಕಾವ್ಯಗಳಲ್ಲಿ ಬಳಸಿರುವುದಲ್ಲದೆ ಒಳಹೊಕ್ಕು ಬೆರಸಿರುವುದನ್ನೂ ಕಾಣಬಹುದು. ಕಾವ್ಯದಲ್ಲಿ ಯುಗ ಪ್ರಜ್ಞೆಗೂ ಯುಗ ಧರ್ಮಕ್ಕೂ ಉಂಟಾದ

ಸಂಘರ್ಷದ ಚಿತ್ರವಿದೆ. ಮತೀಯ ಹೋರಾಟ ಪರಿಮಿತ ಅರ್ಥದಲ್ಲಿ ಅಂದಿನ ಯುಗಧರ್ಮ. ರಾಘವಾಂಕ ಈ ಯುಗಧರ್ಮವನ್ನು ಅದರ ಪರಿಮಿತಿಯಿಂದ ಮೇಲೆತ್ತಿ ನಿರಂತರ ಆಧ್ಯಾತ್ಮಿಕ ಅಭೀಪ್ಸೆಯ ಸಮಷ್ಟಿ ಪ್ರಜ್ಞೆಯಾಗಿಸುವಲ್ಲಿ ಸೋತಿರಬಹುದು. ಆದರೆ ಅಂದಿನ ಪರಿಸ್ಥಿತಿಯನ್ನು ಓದುಗನ ಮನಸ್ಸಿನ ಮೇಲೆ ಅರ್ಥವಾಗುವ ರೀತಿಯಲ್ಲಿ ಚಿತ್ರಿಸಿದ್ದಾನೆ.

ಹರಿಶ್ಚಂದ್ರ ಚಾರಿತ್ರವು ದೇವಲೋಕ ಪುರಾಣ, ಸಾಮಂತಶಾಹಿ ಮತ್ತು ಊಳಿಗಮಾನ್ಯಶಾಹಿ ಇವುಗಳ ಸಂಬಂಧದ ಕಥನವನ್ನು ಬೆರೆಸಿ ಹೇಳಲು ಪ್ರಯತ್ನಿಸಿದೆ. ಇಂದ್ರ ಮುಂತಾದವರು ದೇವಲೋಕವನ್ನು, ವಿಶ್ವಾಮಿತ್ರ ವಸಿಷ್ಟರು ಪುರಾಣಲೋಕವನ್ನು ಸೂರ್ಯವಂಶ ಮತ್ತು ಚಂದ್ರವಂಶದ ಪ್ರಸ್ತಾಪ, ಕುಲನಿಷ್ಠೆ ಮತ್ತು ಕುಲನಿಷ್ಠೆಯ ಪ್ರತಿಷ್ಠೆಗಳು ಸಾಮಂತಶಾಹಿ ಸಮಾಜ, ಪ್ರಾದೇಶಿಕ ನಿಷ್ಠೆ, ಜಾತಿ ನಿಷ್ಠೆ, ಮಾದಿಗ,ಹೊಲತಿಯರು, ಪುರುಷ ಪ್ರಧಾನ ವ್ಯವಸ್ಥೆ ಮುಂತಾದವು ಉಳಿಗಮಾನ್ಯ ಶಾಹಿಯನ್ನು ಪ್ರತಿನಿಧಿಸುತ್ತದೆ.

ಹರಿಶ್ಚಂದ್ರನ ಕುಲನಿಷ್ಠೆ ಹಾಗೂ ಕುಲನಿಷ್ಠೆಯ ಪ್ರತಿಷ್ಠೆಯನ್ನು ಪಲ್ಲಟಿಸಿ ಕುಲಸಂಕರ ಮಾಡಬೇಕು, ಎಂಬುದು ವಿಶ್ವಾಮಿತ್ರನ ಉದ್ದೇಶ ಮತ್ತು ಹಠ. ಆದರೆ ಏನೆಲ್ಲವೂ ಹೋದರೆ ಹೋಗಲಿ ಕುಲಸಂಕರಕ್ಕೆ ಜಾತಿ ಸಂಕರಕ್ಕೆ ಮಾತ್ರ ಅವಕಾಶ ಕೊಡದೆ ಕುಲನಿಷ್ಠೆಯನ್ನು ಬಳಸುವ ಅವನ ಹಠ ಎಷ್ಟರ ಮಟ್ಟಿಗೆ ಎಂದರೆ ಹೆಣದ ಮೇಲಿನ ಅಕ್ಕಿಯನ್ನು ಗೋವಿಗೆ ತಿನಿಸಿ, ಅದರ ಸೆಗಣಿಯಿಂದ ಬರುವ ಅಕ್ಕಿಯನ್ನು ಪವಿತ್ರಗೊಳಿಸಿಕೊಂಡು ಉಣ್ಣುವ ಮಟ್ಟಕ್ಕೂ ಹೋಗುತ್ತದೆ. ನಿಜವಾಗಿಯೂ ಇಡೀ ಕೃತಿಯಲ್ಲಿ ಕುಲನಿಷ್ಠೆ ಮತ್ತು ಕುಲಸಂಕರಗಳ ನಡುವೆ ಬಹಳ ದೊಡ್ಡ ಸಂಘರ್ಷ ನಡೆಯುತ್ತದೆ. ಹರಿಶ್ಚಂದ್ರನು ತನ್ನ ಹೆಂಡತಿಯ ತಲೆ ಕಡಿಯುವ ಸನ್ನಿವೇಶವು ಈ ಸಂಘರ್ಷದ ಪರಾಕಾಷ್ಠೆ.

ಹರಿಶ್ಚಂವ್ರ ಹೆಂಡತಿಯ ತಲೆಯನ್ನಾದರೂ ಕಡಿದಾನು. ಆದರೆ ಕುಲಸಂಕರಕ್ಕೆ ತಯಾರಿಲ್ಲ. ಇದು ಊಳಿಗಮಾನ್ಯ ಸಮಾಜದ ಕುಲನಿಷ್ಠೆಯನ್ನೂ ಒಂದು ಕಡೆ ಎತ್ತಿ ಹೇಳಿದೆ. ಮತ್ತೊಂದು ಕಡೆ ರಾಜ್ಯ ವ್ಯವಸ್ಥೆ ಜಾತಿ ಸಂಕರವನ್ನೂ ವಿರೋಧಿಸುತ್ತಿದ್ದ ವಿಧಾನವನ್ನು ಹೇಳುತ್ತದೆ. ಯಾಕೆಂದರೆ ವಿಶ್ವಾಮಿತ್ರನಿಗೆ ಹರಿಶ್ಚಂದ್ರನ ರಾಜ್ಯ ಬೇಕಾಗಿಲ್ಲ. ಅವನು ಬಿಟ್ಟು ಹೋದ ಆಸ್ತಿ, ಸಂಪತ್ತು ಯಾವುದೂ ಬೇಕಾಗಿಲ್ಲ. ತನ್ನ ಮಕ್ಕಳನ್ನು ಮದುವೆಯಾಗಬೇಕಷ್ಟೇ. ಆದರೆ ಹರಿಶ್ಚಂದ್ರ ಏನು ಬೇಕಾದರೂ ಮಾಡಿಯಾನು, ಮದುವೆಯೊಂದನ್ನು ಹೊರತುಪಡಿಸಿ.

ವಿಶ್ವಾಮಿತ್ರ ಸಂಪತ್ತು ಹಾಗೂ ರಾಜ್ಯ ಲೋಭಿಯಲ್ಲ, ಜಾತಿ ಸಂಕರದ ಹಕ್ಕೊತ್ತಾಯವನ್ನು ಮುಂದಿಡುವವನು ಅಷ್ಟೆ. ಈ ನಿಟ್ಟಿನಲ್ಲಿ ಇವನು ಕೆಳಜಾತಿಯ ಮತ್ತು ವಚನಕಾರರ ಜಾತಿ ಸಂಕರ ಆಶಯ ಪ್ರತಿನಿಧಿಯಂತೆ ಕಾಣುತ್ತಾನೆ. ವಿಶ್ವಾಮಿತ್ರನಿಗೆ ರಾಜ್ಯ ಮುಖ್ಯ ಅಲ್ಲವೆ ಅಲ್ಲ. ಜಾತಿ ಸಂಕರ ಮುಖ್ಯ ಹರಿಶ್ಚಂದ್ರನಿಗೆ ಜಾತಿಸಂಕರ ಎಂದರೆ ತನ್ನ ಎಲ್ಲ ಬಗೆಯ ಅವಸಾನ ಮತ್ತು ಅಧೋಗತಿ. ಈ ವಿನ್ಯಾಸದಲ್ಲಿ ನೋಡಿದರೆ ಹರಿಶ್ಚಂದ್ರ ಚಾರಿತ್ರ ಜಾತಿಸಂಕರದ ಸಾಮಾಜಿಕ ಶ್ರೇಣೀಕರಣದ ಪ್ರಶ್ನೆಯನ್ನು ಮತ್ತು ರಾಜ್ಯಧಿಕಾರದ ಗಾಹವನ್ನು ಸಶಕ್ತವಾಗಿ ಎದುರುಬದುರು ಮಾಡುತ್ತದೆ. ಜಾತಿ ಶ್ರೇಣೀಕರಣದ ಚೌಕಟ್ಟುಗಳನ್ನು ಮುರಿಯಬೇಕು. ಅದೇ ಕಾಲಕ್ಕೆ ರಾಜ್ಯ ವ್ಯವಸ್ಥೆಯೂ ಸಮಗ್ರವಾಗಿ ಬದಲಾಗಬೇಕು. ಆದಕ್ಕಾಗಿ ಅದು ವಿಶ್ವಾಮಿತ್ರನ ಮೂಲಕ ಜಾತಿ ಸಂಕರಕ್ಕೆ ಒತ್ತಾಯ ಹೇರುತ್ತವೆ.

ಹರಿಶ್ಚಂದ್ರನ ಚಾರಿತ್ರ್ಯದಲ್ಲಿ ಪ್ರಭುತ್ವವು ತನಗೆ ಎದುರಾದ ಸಮಸ್ಯೆಗಳನ್ನು ತಾನು ಬಿಡಿಸಿಕೊಳ್ಳುವ ಭಾಗವಾಗಿ ತನ್ನನ್ನು ತಾನು ನವೀಕರಣ ಮಾಡಿಕೊಳ್ಳುವ ಹುನ್ನಾರದ ಸೂಕ್ಷ್ಮಗಳು ಕೃತಿಯಲ್ಲಿ ಕಾಣುತ್ತವೆ. ಹಾಗಾಗಿ ರಾಜನ ಸತ್ಯ, ರಾಜತ್ವದ ಸತ್ಯಗಳು ಪ್ರಧಾನವೆಂದೂ, ಅವು ಶಾಶ್ವತ ಮತ್ತು ಸಾರ್ವಕಾಲಿಕ ಎಂದೂ ತೋರಿಸುವ ಪ್ರಯತ್ನವಿದೆ. ಆದರಿಂದ ಈ ವಾದಸರಣಿಗೆ ಉಳಿದೆಲ್ಲವನ್ನು ಪೂರಕವಾಗಿ ಮತ್ತು ಅಧೀನವಾಗಿ ಸಂಯೋಜಿಸಲಾಗಿದೆ. ಜನರಿಂದ ರಾಜ್ಯ ಮತ್ತು ರಾಜತ್ವದ ಬಗ್ಗೆ ಸಕರಾತ್ಮಕ ಅಭಿಪ್ರಾಯವನ್ನು ರೂಪಿಸಲಾಗಿದೆ. ಆದ್ದರಿಂದ ಅಯೋಧ್ಯೆಯ ಜನರು ರಾಜನಾಗದೇ ಇರುವ ವಿಶ್ವಾಮಿತ್ರನನ್ನು ವಿರೋಧಿಸುತ್ತಾರೆ. ರಾಜನಾಗಿರುವ ಹರಿಶ್ಚಂದ್ರನನ್ನು ಹೊಗಳುತ್ತಾರೆ. 'ಹರನೆಂಬುದೆ ಸತ್ಯ ಸತ್ಯವೆಂಬುದೆ ಹರ.......' ಎಂಬುದು ಮೇಲ್ನೋಟಕ್ಕೆ ಕಾಣುತ್ತದೆ. ಆದರೆ ಅವರ ಆಳದಲ್ಲಿ 'ರಾಜನೆಂಬುದೆ ಸತ್ಯ ಸತ್ಯವೆಂಬುದೆ ರಾಜ, ರಾಜ್ಯವೆಂಬುದೆ ಸತ್ಯ ಸತ್ಯವೆಂಬುದೆ ರಾಜ್ಯ......' ಎಂಬ ರಾಜಶಾಹಿಯ ಮಂತ್ರ, ಆಳುವ ವರ್ಗದ ಕುತಂತ್ರ ಅಡಗಿದೆ. ಕೃತಿಯ ಒಳಗೆ ನಿಜವಾಗಲೂ ಈ ತಾತ್ವಿಕ ಸೃಜನಶೀಲತೆ ಕ್ರಿಯಾಶೀಲವಾಗಿದೆ. ಆದಕ್ಕಾಗಿಯೇ ಕೃತಿಯಲ್ಲಿ ಊಳಿಗಮಾನ್ಯ ರಾಜಕೀಯ ಪರಿಭಾಷೆಗಳಾದ ಸೂಳೆಯರ ವಿಕೃತ ವರ್ಣನೆ, ಹೊಲೆಮಾದಿಗರ ಅವಹೇಳವ, ಮನುಷ್ಯರ ಮಾರಾಟ ಇವು ಮೇಲುಗೈ ಸಾಧಿಸಿವೆ

ಹರಿಶ್ಚಂದ್ರನನ್ನು ಕುಟುಂಬ ಸಮೇತ ರಾಜ್ಯ ಮತ್ತು ರಾಜತ್ವದಿಂದ ಪಲ್ಲಟಿಸಿ ಸಾಮಾಜಿಕವಾಗಿ ಅಧೋಲೋಕಕ್ಕೆ ತರಲಾಗುತ್ತದೆ. ಹರಿಶ್ಚಂದ್ರನ ಮತ್ತು ಆತನ ಕುಟುಂಬದ ಈ ಸ್ಥಿತಿಗೆ ಕಾರಣನಾಗುವವನು ವಿಶ್ವಾಮಿತ್ರ. ಹರಿಶ್ಚಂದ್ರನ ಕುಟುಂಬದ

ಅಧೋಗತಿಯನ್ನು ಅನುಕಂಪ, ಸಹಾನುಭೂತಿ ಹಪಾಹಪಿಗಳೊಂದಿಗೆ ತೀವ್ರ ಸಂವೇದನಾಶೀಲತೆಯಿಂದ ಚಿತ್ರಿಸಲಾಗಿದೆ. ರಾಜ ಹಾಗೂ ರಾಜಶಾಹಿಯ ಬಗೆಗಿನ ಈ ಅನುಕಂಪ ಮತ್ತು ಸಹಾನುಭೂತಿಗಳು ನಿರ್ಣಾಯಕನಾಗಿ ಪ್ರಭುತ್ವ ಪ್ರಣೀತ ವೈಭೋಗದಲ್ಲಿ ಸೃಷ್ಟಿಯಾದವು. ಆಳುವ ವರ್ಗದ ದುಃಖದುಮ್ಮಾನಗಳನ್ನು ಜನತೆಯ ದುಃಖ-ದಮ್ಮಾನಗಳೆಂದು ಬಂಧಿಸಲು ಮತ್ತು ಉತ್ತರಿಸಲು ಪ್ರಯತ್ನಿಸುತ್ತದೆ. ಆ ಮೂಲಕ ಜನತೆಯ ನಿಜವಾದ ದುಃಖದುಮ್ಮಾನಗಳನ್ನು ಮುಚ್ಚಿಡಲು ಅದು ಪ್ರಯತ್ನಿಸುತ್ತದೆ. ಆದರೆ ಜನತೆಯ ದುಃಖದುಮ್ಮಾನಗಳನ್ನು ಪ್ರಭುತ್ವ ವರ್ಗ ತನ್ನದೆಂದು ಬಿಂಬಿಸುವುದಿಲ್ಲ. ಹರಿಶ್ಚಂದ್ರ ಮತ್ತು ಆತನ ಕುಟುಂಬದವರಿಗೆ ವಿಶ್ವಾಮಿತ್ರನಿಂದ ಭೌತಿಕ ನಷ್ಟಗಳಾದವು ಎಂದು ಕೃತಿ ಮಂಡಿಸುತ್ತಾ ಹೋಗುತ್ತದೆ. ಹರಿಶ್ಚಂದ್ರನ ಕುಟುಂಬವನ್ನು ಕೇಂದ್ರಕ್ಕೆ ತಂದು ಅವರಿಗೆ ಆದ ಭೌತಿಕ ನಷ್ಟಗಳನ್ನು ಕೃತಿ ಹೇಳುತ್ತಾ ಹೋಗುತ್ತದೆ. ಮೊದಲು ಹರಿಶ್ಚಂದ್ರನ ರಾಜ್ಯ ಹೋಗುತ್ತದೆ. ಅಂದರೆ ಸಂಪತ್ತು ಮತ್ತು ಅಧಿಕಾರದಿಂದ ಹರಿಶ್ಚಂದ್ರನನ್ನು ಕುಟುಂಬ ಸಮೇತ ಕೃತಿ ಬೇರ್ಪಡಿಸುತ್ತದೆ. ಅನಂತರ ಹರಿಶ್ಚಂದ್ರ ತನ್ನ ಹೆಂಡತಿ ಮತ್ತು ಮಗನನ್ನು ಮಾರಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಈ ಹಂತದಲ್ಲಿ ಹರಿಶ್ಚಂದ್ರನು ಹೆಂಡತಿ ಮತ್ತು ಮಗನಿಂದ ದೂರವಾಗುತ್ತಾನೆ. ಕೊನೆಯಲ್ಲಿ ಹರಿಶ್ಚಂದ್ರ ಹೊಲೆಯನಾದ ವೀರಬಾಹುಕನಿಗೆ ಮಾರಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆಗ ಹರಿಶ್ಚಂದ್ರನನ್ನು ರವಿಕುಲ ಪ್ರತಿಷ್ಠೆ ರಾಜತ್ವ ಪ್ರತಿಷ್ಠೆಗಳಿಂದ ಬೇರ್ಪಡಿಸುತ್ತದೆ. ಹೀಗೆ ಹರಿಶ್ಚಂದ್ರನನ್ನು ಬೇರ್ಪಡಿಸಿ ವಿವರಿಸುವ ಪ್ರತಿ ಹಂತದಲ್ಲೂ ಅವನ ಬಗ್ಗೆಯೇ ಮಾತ್ರ ಅನುಕಂಪ ಸಹಾನುಭೂತಿಗಳು ಉಂಟಾಗುವಂತೆ ಮಾಡುತ್ತದೆ. ಈ ಅನುಕಂಪ, ಸಹಾನುಭೂತಿಗಳ ನೆಲೆಯಲ್ಲಿ ಹರಿಶ್ಚಂದ್ರ ಸತ್ಯವನ್ನು ಪರಿಪಾಲಿಸಿದೆ ಎಂದು ನಿರ್ಣಯಿಸಲು ವೇದಿಕೆಯನ್ನು ನಿರ್ಮಾಣ ಮಾಡಲಾಗಿದೆ. ಹರಿಶ್ಚಂದ್ರ ಸಂಪತ್ತು, ಅಧಿಕಾರ, ರಾಜ್ಯ, ಹೆಂಡತಿ, ಮಗ ಮುಂತಾದವರನ್ನು ಕಳೆದುಕೊಳ್ಳುತ್ತಾ ಹೋಗುತ್ತಾನೆ. ಹೀಗೆ ಕಳೆದುಕೊಂಡ ಪ್ರತಿ ಹಂತದಲ್ಲಿ ಹರೀಶ್ಚಂದ್ರನ ಬಗ್ಗೆ ಆತನ ರಾಜ್ಯದ ಜನರ ಅನುಕಂಪವೂ ಜೊತೆಗೆ ಸಾಂಪ್ರದಾಯಿಕ ಓದುಗ ವರ್ಗದ ಅನುಕಂಪವೂ ಸೃಷ್ಟಿಯಾಗುತ್ತದೆ. ಇದಕ್ಕೆ ವಿರುದ್ಧವಾಗಿ ವಿಶ್ವಾಮಿತ್ರನ ಬಗ್ಗೆ ಆಕ್ರೋಶ ಸೃಷ್ಟಿಯಾಗುತ್ತವೆ. ಅಂದರೆ ವಿಶ್ವಾಮಿತ್ರನ ವಿರುದ್ಧದ ಆಕ್ರೋಶವೇ ಹರಿಶ್ಚಂದ್ರನ ಪರವಾದ ಅನುಕಂಪವಾಗಿ ರೂಪಾಂತರವಾಗಿದೆ.

ಕೃತಿಯನ್ನು ವಿಶ್ವಾಮಿತ್ರನ ಪಾತ್ರವನ್ನು ಮರೆತು ನೋಡಿದರೆ ಹರಿಶ್ಚಂದ್ರನ ಬಗ್ಗೆ ಯಾವ ಅನುಕಂಪವೂ ಮೂಡುವುದಿಲ್ಲ. ಹರಿಶ್ಚಂದ್ರ ಭೌತಿಕವಾಗಿ ಕಳೆದುಕೊಳ್ಳುವುದರ ಮೂಲಕ ತನ್ನ ರಾಜ್ಯದ ಜನರ ಅನುಕಂಪವನ್ನು ಪಡೆದುಕೊಳ್ಳುತ್ತಾ ಹೋಗುತ್ತಾನೆ.

ಹರಿಶ್ಚಂದ್ರ ಭೌತಿಕವಾಗಿ ಕುಗ್ಗುವಷ್ಟೂ ತೊಂದರೆಗಳನ್ನು ಅನುಭವಿಸಿದಷ್ಟೂ ರಾಜ ನೈತಿಕತೆಯಲ್ಲಿ ಹಿಗ್ಗುತ್ತ, ಮೇಲೇರುತ್ತ ಹೋಗುತ್ತಾನೆ. ಹರಿಶ್ಚಂದ್ರ ಹೊಲೆಯನ ವೇಷ ಹಾಕುತ್ತಾನೆ. ಹೊಲೆಯ ಮಾಡುವ ಕೆಲಸ ಮಾಡುತ್ತಾನೆ. ಕೊನೆಗೆ ಹೊಲೆಯನ ಆಳಾಗುತ್ತಾನೆ. ಹೊಲೆಯನ ಆಳಾಗಿ ಊಳಿಗಮಾನ್ಯ ಶಾಹಿಯ ಕಟ್ಟಳೆಗೆ ಅನುಗುಣವಾಗಿ ತನ್ನ ಹೆಂಡತಿಯ ತಲೆ ಕಡಿಯುವ ಪರಿಸ್ಥಿತಿ ನಿರ್ಮಾಣವಾಗುತ್ತವೆ. ಈ ಪರಿಸ್ಥಿತಿಯು ಹರಿಶ್ಚಂದ್ರನ ಅಥವಾ ಯಾವುದೇ ಮನುಷ್ಯನ ಅತ್ಯಂತ ದುಸ್ತರ ಕ್ಷಣಗಳು ಎಂಬಂತೆ ಭಾವತೀವ್ರತೆಯ ಮೇರುಸ್ಥಿತಿಯಲ್ಲಿ ಕೃತಿ ನಿರೂಪಿಸುತ್ತದೆ. ಒಂದು ಕಡೆ ಹರಿಶ್ಚಂದ್ರನ ದುಸ್ತರತೆ ಮತ್ತು ವಿಶ್ವಾಮಿತ್ರನ ಕಠೋರತೆಗಳನ್ನು ಪ್ರತ್ಯಕ್ಷವಾಗಿ ನಿರೂಪಿಸುತ್ತದೆ. ಮತ್ತೊಂದು ಕಡೆ ಹರಿಶ್ಚಂದ್ರನ ಸ್ಥಿತಿಯ ಬಗ್ಗೆ ಅದಮ್ಯ ಅನುಕಂಪವನ್ನು ಜೊತೆಗೆ ವಿಶ್ವಾಮಿತ್ರನ ಹಠಮಾರಿತನದ ಬಗ್ಗೆ ತೀವ್ರ ಆಕ್ರೋಶವನ್ನೂ ಪ್ರಚೋದಿಸುತ್ತದೆ. ಈ ಅನುಕಂಪ ಮತ್ತು ಆಕ್ರೋಶಗಳು ಪರಸ್ಪರ ಸಂಘರ್ಷಿಸುತ್ತವೆ. ಈ ಸಂಘರ್ಷದ ಮುಂದಿನ ಹಂತವೆ ಶಿವ ಪ್ರತ್ಯಕ್ಷನಾಗಲು ನೆಪವಾಗುತ್ತದೆ. ಕೊನೆಗೆ ವಿಶ್ವಾಮಿತ್ರನನ್ನು ವಿರೋಧಿಸುವ ನೆಪದಲ್ಲಿ ಹರಿಶ್ಚಂದ್ರನ ಕುಟುಂಬ ಮತ್ತು ಅವನ ರಾಜ್ಯದ ಬಗ್ಗೆ ಅನುಕಂಪ ಹಾಗೂ ಸಹಾನುಭೂತಿಗಳು ಸೃಷ್ಟಿಯಾಗುವಂತೆ ಮಾಡುತ್ತದೆ. ವಿಶ್ವಾಮಿತ್ರನನ್ನು ವಿರೋಧಿಸದ ಹೊರತು ಹರಿಶ್ಚಂದ್ರ ಮತ್ತು ಆತನ ರಾಜ್ಯದ ಬಗ್ಗೆ ಅನುಕಂಪ ಹುಟ್ಟುವುದಿಲ್ಲ. ಇವೆರಡೂ ಆಯಾಮಗಳು ಕೃತಿಯಲ್ಲಿ ಪರಸ್ಪರ ಮುಖಾಮುಖಿಯಾಗುತ್ತಾ ಬರುತ್ತದೆ. ವಿಶ್ವಾಮಿತ್ರನನ್ನು ಒಂದು ಕಡೆ ವಿರೋಧಿಸುವ ಮೂಲಕ ಹರಿಶ್ಚಂದ್ರನ ರಾಜ್ಯದ ಜನತೆಯಿಂದ ತಾನು ಅನುಕಂಪ ಹಾಗೂ ಸಹಾನುಭೂತಿಯನ್ನು ಪಡೆಯುತ್ತಾನೆ. ಒಂದು ವೇಳೆ ಪ್ರಭುತ್ವದ ಮೇಲೆ ಜನತೆಯ ಅಸಹನೆ ವಿರೋಧಗಳು ಬಂದಾಗ ಪ್ರಭುತ್ವವು ಇವುಗಳನ್ನು ನಯವಾಗಿ ಶಮನ ಮಾಡುತ್ತಿದೆ. ಜನತೆಯ ಅಭಿಪ್ರಾಯಗಳು, ಭಾವನೆಗಳು ಪ್ರಭುತ್ವದ ಪರವಾಗಿರುವಂತೆ, ಆಳುವವರ ಪರವಾಗಿರುವಂತೆ ಪ್ರಚೋದಿಸುತ್ತದೆ. ಪ್ರಭುತ್ವವು ಇಂತಹ ಅಭಿಪ್ರಾಯಗಳನ್ನು ತನ್ನ ಕುಲುಮೆಯಲ್ಲಿ ಸೃಷ್ಟಿಸುತ್ತದೆ. ಆದರೆ ಅವು ಜನತೆಯ ನೆಲೆಯಲ್ಲಿ ಸೃಷ್ಟಿಯಾದುವು ಎಂದು ನಂಬುವಂತೆ ಮಾಡುತ್ತದೆ.

ಕುಲನಿಷ್ಠೆ, ಕುಲಪ್ರತಿಷ್ಠೆ, ಜಾತಿನಿಷ್ಠೆ, ಜಾತಿಪ್ರತಿಷ್ಠೆಗಳ ನೆಲೆಯಲ್ಲಿ ನಿಂತು ಕುಲಸಂಕರ ಹಾಗೂ ಜಾತಿಸಂಕರಗಳನ್ನು ವಿರೋಧಿಸುವ ಆಯಾಮವು ಹರಿಶ್ಚಂದ್ರನ ಮೂಲಕ ಕ್ರಿಯಾಶೀಲವಾಗಿದೆ. ಹಾಗಾಗಿ ಹೊಲತಿಯರನ್ನು ಮದುವೆಯಾಗು ಎಂದು ವಿಶ್ವಾಮಿತ್ರ ಒತ್ತಾಯಿಸಿದಾಗ, ಹರಿಶ್ಚಂದ್ರ ಅದನ್ನು ಬಲವಾಗಿ ವಿರೋಧಿಸುತ್ತಾನೆ. ಅಂದರೆ ಜಾತಿಸಂಕರ ಮತ್ತು ಕುಲಸಂಕರಗಳನ್ನು ಬಲವಾಗಿ ವಿರೋಧಿಸುತ್ತಾನೆ.

ವಿಶ್ವಾಮಿತ್ರನು ಕುಲಸಂಕರ ಹಾಗೂ ಜಾತಿ ಸಂಕರಗಳ ಒತ್ತಾಯವನ್ನು ಹರಿಶ್ಚಂದ್ರನ ಮುಂದೆ ಸತತವಾಗಿ ಒಡ್ಡುತ್ತಾ ಕುಲನಿಷ್ಠೆ ಹಾಗೂ ಜಾತಿನಿಷ್ಠೆಗಳನ್ನು ಅಲ್ಲಾಡಿಸುತ್ತಾನೆ. ಈ ಕೃತಿಯಲ್ಲಿ ರಾಘವಾಂಕನು ಊಳಿಗಮಾನ್ಯ ಶಾಹಿಯು ಜಾತಿ ಮತ್ತು ಕುಲಗಳನ್ನು ಗಟ್ಟಿಗೊಳಿಸುವ ಒಂದು ಆಯಾಮ ಅದೇ ಕಾಲಕ್ಕೆ ಅವು ಸಂಕರಗೊಳ್ಳಬಹುದಾಗಿದ್ದ ಪರಿಸ್ಥಿತಿಯ ಒಳ ಒತ್ತಡದ ಸೂಕ್ಷ್ಮಗಳ ಇನ್ನೊಂದು ಆಯಾಮ ಇವೆರಡೂ ಆಯಾಮಗಳು ಕೃತಿಯಲ್ಲಿ ಸಂಘರ್ಷಾತ್ಮಕವಾಗಿ ಚಲನಶೀಲವಾಗಿದೆ.

ಕುಲಸಂಕರದ ಆಶಯವನ್ನು ವಚನಕಾರರ ಹಿನ್ನೆಲೆಯಲ್ಲಿ 'ಹರಿಶ್ಚಂದ್ರ ಚಾರಿತ್ರ' ಅದ್ಭುತವಾಗಿ ಮುರಿದು ಕಟ್ಟಿದೆ. 'ವಿಶ್ವಾಮಿತ್ರನ ಕೋಪ'ದಿಂದ ಹೊಲತಿಯರು ಸೃಷ್ಟಿಯಾದರೆಂದು ಕೃತಿ ಹೇಳುತ್ತದೆ. ಇದನ್ನು ವಾಚ್ಯಾರ್ಥದಲ್ಲಿ ತೆಗೆದುಕೊಂಡರೆ ಆ ಹೊಲತಿಯರು ಕೇವಲ ವಿಶ್ವಾಮಿತ್ರನ ಸೃಷ್ಟಿ ಅಷ್ಟೇ. ಆದರೆ ಹೊಲತಿಯರು ಸಾಮಾಜಿಕ ವಸ್ತು ಸ್ಥಿತಿ ಎಂಬುದನ್ನು ಗಂಭೀರವಾಗಿ ಪರಿಗಣಿಸಬೇಕು. ಆದರಿಂದ ಅವರನ್ನು ಕಾಲ್ಪನಿಕ ಪಾತ್ರಗಳು ಎಂದು ಸರಳೀಕರಿಸಬಾರದು. ಹೊಲತಿಯರು ಹರಿಶ್ಚಂದ್ರ ಮತ್ತು ವಿಶ್ವಾಮಿತ್ರರಿಗೆ ನಡೆಯುವ ಸಂಭಾಷಣೆ ಇಡೀ ಕೃತಿಯಲ್ಲಿ ಬಹಳ ಮುಖ್ಯ ಭಾಗ.

ಹರಿಶ್ಚಂದ್ರ ಚಾರಿತ್ರದ ಏಳು ಮತ್ತು ಎಂಟನೆ ಸ್ಥಲಗಳನ್ನು ಕುಲಸಂಕರ ಮತ್ತು ಕುಲನಿಷ್ಠೆಯ ತದ್ವಿರುದ್ಧ ಜೀವನ ಧೋರಣೆಗಳನ್ನು ಕೃತಿ ಬಹಳ ಗಂಭೀರವಾಗಿ ಎದುರು ಬದುರು ಮಾಡಿದೆ. ಜಾತಿ ನಿಷ್ಠೆ ಮತ್ತು ಕುಲನಿಷ್ಠೆಯನ್ನು ಹರಿಶ್ಚಂದ್ರನ ಮೂಲಕವೂ ಜಾತಿಸಂಕರ ಮತ್ತು ಕುಲಸಂಕರಗಳನ್ನು ವಿಶ್ವಾಮಿತ್ರನ ಮೂಲಕವೂ ತ`ಂಬ ಪರಿಣಾಮಕಾರಿಯಾಗಿ ಚಿತ್ರಿಸಿದೆ. ವಿಶ್ವಾಮಿತ್ರ ಮತ್ತು ಹರಿಶ್ಚಂದ್ರರನ್ನು ಕುರಿತು ಪಾತ್ರ ಪರಿಚಯದ ರೀತಿಯಲ್ಲಿ ವಿಶ್ಲೇಷಣೆ ಮಾಡಲಾರದು. ಬದಲಾಗಿ ಅಸಮಾನತೆಯ ಸಮಾಜದ ಎರಡು ತದ್ವಿರುದ್ಧ ಧೋರಣೆಗಳನ್ನು ಮುಖಾಮುಖಿ ಮಾಡಲು ಕೃತಿ ಆರಿಸಿಕೊಂಡಿರುವ ಸಾಮಾಜಿಕ ವಸ್ತುಸ್ಥಿತಿಗಳು ಎಂಬುದು ಬಹಳ ಮುಖ್ಯ. ಇಲ್ಲಿ ಹೊಲತಿಯರನ್ನು ಮದುವೆಯಾಗುವುದಿಲ್ಲ ಎಂದು ಹರಿಶ್ಚಂದ್ರ ಹೇಳುತ್ತಿರುವುದು ಒಂದು ಕಡೆ ರಾಜಧರ್ಮವೂ ಹೌದು ಮತ್ತೊಂದು ಕಡೆ ಅದು ಸಾಮಂತಶಾಹಿ ಹಾಗೂ ಊಳಿಗಮಾನ್ಯ ಶಾಹಿ ವ್ಯವಸ್ಥೆಯ ಧೋರಣೆಯೂ ಹೌದು ವಿಶ್ವಾಮಿತ್ರನು ಹೊಲತಿಯರನ್ನು ಮದುವೆಯಾಗು ಮದುವೆಯಾಗು ಎಂದು ಮೇಲಿಂದ ಮೇಲೆ ಒತ್ತಾಯಿಸುತ್ತಾ ಇರುವುದು ಕುಲನಿಷ್ಠೆ ಮತ್ತು ಜಾತಿನಿಷ್ಠೆಗಳನ್ನು ಒಡೆದು ಅದನ್ನು ಸಂಕರಗೊಳಿಸಬೇಕು ಎಂದು ಶೋಷಿತಪರ ದೃಷ್ಟಿಕೋನವೂ ಹೌದು. ಮತ್ತೊಂದು ಕಡೆ ಅದು ವಚನಕಾರರ ಆಶಯದ ಧೋರಣೆಯೂ ಹೌದು. ಜಾತಿನಿಷ್ಠೆ ಹಾಗೂ

ಕುಲನಿಷ್ಠೆಗೆ ವಿಶ್ವಾಮಿತ್ರ ಹಾಗೂ ಹೊಲತಿಯರ ಈ ಒತ್ತಾಯವೇ ಬಹು ದೊಡ್ಡ ಸಾಮಾಜಿಕ ಪ್ರತಿರೂಪವಾಗಿದೆ.

ಹೊಲತಿಯರನ್ನು ಮದುವೆಯಾಗಲು ನಿರಾಕರಿಸುವ ರಾಜ ಹರಿಶ್ಚಂದ್ರ ವಚನಕಾರರ ಆಶಯವನ್ನು ಮುಂದುವರಿಸಲಾರ ಎಂಬ ಪರೋಕ್ಷ ಧ್ವನಿ ಕೂಡಾ ಕೃತಿಯಲ್ಲಿದೆ. ಆ ಮೂಲಕ ಜನತೆಯ ಪರವಾದ ಆಶಯವೊಂದನ್ನು ರಾಜ್ಯ ಮತ್ತು ರಾಜತ್ವ ಯಾವುದೇ ಆಯಾಮದಲ್ಲೂ ಪರಿಗಣಿಸುವುದಿಲ್ಲ ಹಾಗೂ ಮುಂದುವರಿಸುವುದಿಲ್ಲ ಎಂಬುದನ್ನು ಕೃತಿ ತನ್ನ ಸೃಜನಶೀಲತೆಯ ಆಳದಲ್ಲಿ ಗುನುಗುನಿಸುತ್ತಿದೆ. ವಿಶ್ವಾಮಿತ್ರನ ಬಗ್ಗೆ, ಹೊಲತಿಯರ ಬಗ್ಗೆ ಹರಿಶ್ಚಂದ್ರನ ಮೂಲಕ ಹೇಳಿಸುವ ಮಾತುಗಳ ವಿಶೇಷಣಗಳೆಲ್ಲ ರಾಜನ ಹಾಗೂ ಹರಿಶ್ಚಂದ್ರನ ಕ್ಷುಲ್ಲಕ ಮನೋಧರ್ಮವನ್ನು ವಿಕೃತ ದೃಷ್ಟಿಕೋನಗಳನ್ನು ಅನಾವರಣ ಮಾಡುತ್ತವೆ. ಹಾಗಾಗಿ ಹರಿಶ್ಚಂದ್ರ ಚಾರಿತ್ರ ಕೆಳಜಾತಿಯ ಪರವಾದ ಆಶಯವನ್ನು ವಿಶ್ವಾಮಿತ್ರನ ಮೂಲಕ ನಿರೂಪಿಸುತ್ತಿದೆ ಹರಿಶ್ಚಂದ್ರನ ಮೂಲಕ ಅಲ್ಲ. ಹೊಲತಿಯರ ಬಗ್ಗೆ ಹರಿಶ್ಚಂದ್ರ ಆಡುವ ಮಾತುಗಳು ಸ್ತ್ರೀಯರನ್ನು ಹೊಲತಿಯರನ್ನು ರಾಜ ಹಾಗೂ ವ್ಯವಸ್ಥೆ ಹೇಗೆ ಪರಿಗಣಿಸುತ್ತಿತ್ತು ಎಂಬುದು ಪ್ರತ್ಯಕ್ಷ ಉದಾಹರಣೆ.

ಹರಿಶ್ಚಂದ್ರ ಸತ್ಯಕ್ಕಾಗಿ ರಾಜ್ಯ, ಹೆಂಡತಿ ಮತ್ತು ಮಗನನ್ನೇ ತೊರೆದ ಎಂಬಂತೆ ಭಾಷೆಯನ್ನು ದುಂದುವೆಚ್ಚ ಮಾಡಿ ಅವನನ್ನು ವೈಭವೀಕರಿಸಲಾಗಿದೆ. ಆದರೆ ಹೊಲತಿಯರನ್ನು ಹೀಯಾಳಿಸಿದ್ದು, ಅವರನ್ನು ಮದುವೆಯಾಗಲು ನಿರಾಕರಿಸಿದ್ದು ಅವನ ಆ ಸ್ಥಿತಿಗೆ ಕಾರಣವಾಯಿತು ಎಂದು ಆಲೋಚಿಸಲು ಸಾಧ್ಯವಿದೆ. ಇದು ಹರಿಶ್ಚಂದ್ರನ ಕುಲನಿಷ್ಠೆಯನ್ನು ಎತ್ತಿ ತೋರಿಸುತ್ತದೆಯೇ ಹೊರತು ಅವನು ರಾಜ್ಯ, ಹೆಂಡತಿ ಮತ್ತು ಮಗನನ್ನು ತ್ಯಾಗ ಮಾಡಿದ ಎಂಬುದನ್ನಲ್ಲ. ಯಾಕೆಂದರೆ ಹರಿಶ್ಚಂದ್ರ ಕೆಳಜಾತಿ ಮತ್ತು ಸ್ತ್ರೀ ವಿರೋಧಿ ಎಂಬುದನ್ನು ಪಠ್ಯವೇ ತನ್ನ ಆಂತರಿಕವಾದ ಅನಂತ ಧ್ವನಿ ಸಾಧ್ಯತೆಗಳ ಮೂಲಕ ಬಿಚ್ಚಿಡುತ್ತಿದೆ. ಕುಲದ ಪ್ರಸ್ತಾಪವು ಕೃತಿ ಎರಡನೆಯ ಸ್ಥಲದಲ್ಲೂ ನೋಡಬಹುದು.

ಸಿಡಿಲು ಹೊಡೆವಡೆ ಹಿಡಿವ ಕೊಡೆ ಕಾವುದೇ ಮುನಿದು
ಪೊಡವಿ ನುಂಗುವಡೆ ಮನ ತಾಂಗುವುದೆ ಕವಿದು ಹೆ
ಗ್ಗಡಲುಕ್ಕಿ ಜಗವ ಮೊಗೆವಡೆ ಮೆಳೆಗಳಡ್ಡಬರವೇ ಹೇಳು ಮುನಿಪ ನಿನ್ನ
ಬಡಬೋಧೆಗೀಧೆಗಳು ಗಕ್ಷಿಸುವುವಲ್ಲ ನಾಂ

ಕಡುಮುಳಿದ ಬಳಿಕಲೇಗವವು ನೀ ಹೇಳದಿ
ರ್ದಡೆ ಮದನಹರನಾಣೆ ಹೋಗೆಂದು ಕೌಶಿಕಂ ನುಡಿದನು ವಸಿಷ್ಠ ಮುನಿಗೆ
(ಹ.ಕಾ.೨, ೩೧)

ಎಂದು ವಿಶ್ವಾಮಿತ್ರ ವಸಿಷ್ಠನನ್ನು ಇಂದ್ರ ಸಭೆಯಲ್ಲಿ ಭರ್ತಿಸಿದಾಗ ವಸಿಷ್ಠ ವಿಶ್ವಾಮಿತ್ರನ ಕುಲದ ಪ್ರಶ್ನೆಯನ್ನು ಎತ್ತುತ್ತಾನೆ.

ಕುಲವ ನಾಲಗೆಯರುಹಿತೆಂಬ ನಾಣ್ಣುಡಿಗಿಂದು
ನೆಲೆಯಾಯ್ತುಲಾ ಬ್ರಹ್ಮಋಷಿ ಯಾದಡೊಳಗು ನಿ
ರ್ಮಳವಪ್ಪುದಯ್ಯ ನೀಂ ರಾಜರ್ಷಿ ಕೋಪಿಸದೆ ಧಟ್ಟಿಸದೆ ಕೆಡೆನುಡಿಯದೆ
ನಿಲಲೆಂತು ಬಲ್ಲೆಯೆನಲೆನ್ನ ನೀನೀಗ ಹೆ
ಪ್ಪಳಿಸದಾಡಿದೆಯೆಂದಡಹುದಹುದು ನಿನ್ನಲಿಹ
ನೆಲೆಯಾಡಿತೆನೆ ಕೌಶಿಕಂ ಕುಪಿತನಾದವನಾದ
(ಹ.ಕಾ. ೨.೩೨)

ಕವಿ ಬಣ್ಣಿಸುವನು. ವಿಶ್ವಾಮಿತ್ರನ 'ಕಡೆನುಡಿ' ಗಳಿಗೂ ಅವನ ಕ್ಷತ್ರಿಯ ಕುಲಕ್ಕೂ ವಸಿಷ್ಠ ಇಲ್ಲಿ ಸ್ಪಷ್ಟವಾಗಿ ಸಂಬಂಧ ಕಲ್ಪಿಸುತ್ತಾನೆ. ಇದು ಕೋಪದಲ್ಲಿ ಅಡಿದ ಮಾತಾಗಿರದೆ ವಸಿಷ್ಠನ ನಂಬುಗೆಗಳನ್ನು ಅಭಿವ್ಯಕ್ತಿಸುವ ಮಾತಾಗಿರುವುದನ್ನು ಗಮನಿಸಬೇಕು. ತನ್ನನ್ನು ಕಾಣಲು ಬಂದ ಶಿಷ್ಯ ಹರಿಶ್ಚಂದ್ರನನ್ನು ಬೀಳ್ಕೊಡುವಾಗ ವಸಿಷ್ಠ ನೀಡುವ ಉಪದೇಶದಲ್ಲಿ ಕುಲಾಚಾರಕ್ಕೆ ಆದ್ಯತೆಯಿರುವುದೂ ಸೂಚಕವಾಗಿದೆ

ಎನ್ನನೊಲುವೊಡೆ ಕುಲಾಚಾರಮಂ ಬಿಡದಿರ್ಪ
ಡುನ್ನತಿಕೆ ಬೇಹಡುತ್ತಮಕೀರ್ತಿ ಕೆಡದಿಹಡೆ
ನನ್ನಿಯುಳಿವೊಡೆ ಮಗನೆ ಹೋಗದಿರು ಮರೆದು ವಿಶ್ವಾಮಿತ್ರನಾಶ್ರಮಕ್ಕೆ
(ಹ.ಕಾ. ೫:೭೩)

ಕುಲಾಚಾರ, ಕೀರ್ತಿ, ಇವು ಹರಿಶ್ಚಂದ್ರ ದೃಢವಾಗಿ ನಂಬಿಕ ಮೌಲ್ಯಗಳು. ಕಾವ್ಯದುದ್ದಕ್ಕೂ ಅವನು ನಡೆಸುವ ಹೋರಾಟ ಈ ಮೌಲ್ಯಗಳನ್ನು ರಕ್ಷಿಸಿಕೊಳ್ಳುವ ಹೋರಾಟವಾಗಿದೆ. ಕೃತಿಯಲ್ಲಿ ಹರಿಶ್ಚಂದ್ರನ ಮೌಲ್ಯಗಳನ್ನು ಕಠಿಣ ಪರೀಕ್ಷೆಗೆ ಒಡ್ಡುವ ಸನ್ನಿವೇಶ ೭ನೆಯ ಸ್ಥಲದಲ್ಲಿ ಬರುವ ಮಾಯದಬಲೆಯರ ಮಾಯದಬಲೆಯ ಪ್ರಸಂಗ ಕುಲಕ್ಕೆ ಸಂಬಂಧಿಸಿದ ಸನ್ನಿವೇಶವಾಗಿದೆ. ಹರಿಶ್ಚಂದ್ರ 'ಹುಸಿ' ಮಾಡುವುದಕ್ಕೆಂದು

ವಿಶ್ವಾಮಿತ್ರ ಹುಟ್ಟಿಸಿದ 'ಇಬ್ಬರು ಸತಿಯರು' ಹೊಲತಿಯರಾಗುವುದಕ್ಕೆ ಕಾರಣ ಅವರು ವಿಶ್ವಾಮಿತ್ರನಲ್ಲಿರುವ 'ಹೊಲೆ' ಯಿಂದ ಹುಟ್ಟಿದವರು ಎನ್ನುವುದು ಕವಿಯ ವಿವರಣೆ.

ಈ ಕೃತಿಯಲ್ಲಿ ವಸಿಷ್ಠ ವಿಶ್ವಾಮಿತ್ರರ ಸಂಘರ್ಷವಿರುವುದನ್ನು ಕಾಣಬಹುದು.

ಕುಲದ ವಿಷಯದಲ್ಲಿ ರಾಘವಾಂಕನಲ್ಲಿ ತಾಕಲಾಟ ಇರುವಂತೆ ಈ ಮುನಿಗಳ ಕಲ್ಪನೆಯಲ್ಲಿಯೂ ಸಮಸ್ಯೆಗಳಿವೆ. ಒಬ್ಬರನ್ನು ಇನ್ನೊಬ್ಬರು ವಿರೋಧಿಸುವುದನ್ನು ಕಾಣಬಹುದು. ಋಷಿ ಪರಂಪರೆಯಲ್ಲಿ ಕೂಡ ಮತ್ಸರ, ವಿರೋಧ ಅಹಂಕಾರವನ್ನು ರಾಘವಾಂಕನು ಚಿತ್ರಿಸಿದ್ದಾನೆ. ವಸಿಷ್ಠನಲ್ಲಿ ಯಾವ ದೋಷಗಳನ್ನೂ ಕಾಣುವುದಿಲ್ಲ. 'ಕುಲವ ನಾಲಗೆಯರುಹಿತು' ಎಂದು ಅವನು ವಿಶ್ವಾಮಿತ್ರನನ್ನು ಹೀಯಾಳಿಸುವುದನ್ನೂ ಕೂಡ ಅವನು ಖಂಡಿಸುವುದಿಲ್ಲ. ವಸಿಷ್ಠ ವಿಶ್ವಾಮಿತ್ರ ಇಬ್ಬರು ಮಾಡಿದ ಪಣವನ್ನು ಹರಿಶ್ಚಂದ್ರನಿಗೆ ವಸಿಷ್ಠ ತಿಳಿಸುವುದಿಲ್ಲ. ಅವನಾಗಿ ತನ್ನ ಆಶ್ರಮಕ್ಕೆ ಬಂದು ತನ್ನನ್ನು ಕಂಡಾಗ ವಿಶ್ವಾಮಿತ್ರನ ಆಶ್ರಮವನ್ನು ಪ್ರವೇಶಿಸಬೇಡ ಎಂದು ಹೇಳಿ ರಾಜಗುರುವಾಗಿ ತನ್ನ ಕರ್ತವ್ಯವನ್ನು ನೆರವೇರಿಸುತ್ತಾನೆ. ಆದರೆ, ರಾಘವಾಂಕ ನಿರ್ಮಿಸಿದ ವಿಶ್ವಾಮಿತ್ರನ ಪಾತ್ರದಲ್ಲಿ ಗೊಂದಲಗಳಿವೆ. ತಾನು

ಭಕ್ತಿ ಶ್ರಮೆ ದಮೆ ಯೋಗ ಯಾಗ ಶ್ರುತಿಮತಮಯ ವಿ
ರಕ್ತಿ ಘೋರವ್ರತ ತಪೋನಿಷ್ಠೆ ಜಪ ಗುಣಾ
ಸಕ್ತತೆ ಸ್ನಾನ ಮೌನ ಧ್ಯಾನವಾಚಾರ ಸ್ಥತಪ ನಿತ್ಯ ನೇಮ
ಯುಕ್ತಿ ಶೈವಾಗಮಾವೇಶ ಲಿಂಗಾರ್ಚನಾ
ಸಕ್ತಿಯಿಂ ಬೆಳೆದ ಪುಣ್ಯದೊಳರ್ಧಮಂ ಸುಧಾ
ಭಕ್ತರಱಿಯಲು ಕೊಡುವೆನಾ ಹರಿಶ್ಚಂದ್ರ ಹುಸಿಯಂ ನುಡಿಯದಿರಲೆಂದನು

(ಹ.ಕಾ.೨:೨೭)

ಪುಣ್ಯವನ್ನು ಬೆಳೆದವನೆಂದು ವಿಶ್ವಾಮಿತ್ರನೇ ಹೇಳಿಕೊಳ್ಳುತ್ತಾನೆ. ವಸಿಷ್ಠನಂತೆ ಬ್ರಹ್ಮರ್ಷಿಯಾಗದಿದ್ದರೂ ಆತನೂ ವೈದಿಕ ಸಂಸ್ಕೃತಿಯ ಉಪಾಸಕನೇ. ವಸಿಷ್ಠನನ್ನು ಅವನು ವಿರೋಧಿಸುವುದು ಈ ನೆಲೆಯಲ್ಲಲ್ಲ. ರಾಘವಾಂಕ ಗುರುತಿಸುವಂತೆ ಅದರ ನೆಲೆಯಿರುವುದು ಅವನ ಸ್ವಭಾವದಲ್ಲಿ

ತೀವಿದೊಡ್ಡೋಲಗದ ನಡುವೆ ತನ್ನಂ ಮೊದಲೊ
ಳೋವಿ ನುಡಿಸದ ಕೋಪವೊಂದಾ ವಸಿಷ್ಠಮುನಿ
ಯಾವುದಂ ಪೇಳ್ದಡದನಲ್ಲೆಂಬ ಭಾಷೆಯೆರಡಖಿಳಜೀವಾವಳಿಯಲಿ

ಭಾವಿಪಡೆ ಕುಂದನಲ್ಲದೆ ಲೇಸ ಕಾಣದಿಹ
ಭಾವ ಮುಪ್ಪುರಿಗೊಂಡು ಕುಡಿವರಿದು ಕಡುಗೋಪ
ವಾವರಿಸಿ ಕೌಶಿಕಂ ನಿಂದು ನಿಲ್ ನುಡಿಯಬೇಡೆಂದು ಜಳಿದಿಂತೆಂದನು
(ಹ.ಕಾ ೨.೮)

ಅಭಿಮಾನ, ಛಲ, ದೋಷಕ ದೃಷ್ಟಿ ಇವು ಇಲ್ಲಿ ಮಿಶ್ವಾಮಿತ್ರನ ಸ್ವಭಾವ ಗುಣಗಳಿಂದೇ ವರ್ಣಿತವಾಗದೆ.

.... ಹಿಂದಣರಸುಗಳನುದ್ಧರಿಸಲೆಂದವತರಿಸಿದ
ವಸುಧಾಧಿಪತಿ ಹರಿಶ್ಚಂದ್ರನಾತನ ಸತ್ಯ
ದೆಸಕಮಂ ಪೊಗಳಲೆನ್ನಳವೆ ಫಣಿಪತಿಗರಿದು (ಹ.ಕಾ.೨: ૮)

ಎಂಬ ವಸಿಷ್ಠನ ಘೋಷಣೆಯನ್ನು ವಿರೋಧಿಸುವುದಕ್ಕೆ ಅವನಿಗೆ ಬೇರೆ ಕಾರಣಗಳೂ ಇವೆ "ಸತ್ಯಲೇಶವಂತವನಾಳ್ವ ದೇಶದೊಳು ಕೇಳರಿಯೆನು"ಎಂಬ ವಿಶ್ವಾಮಿತ್ರನ ಹೇಳಿಕೆ ವಸ್ತುಸ್ಥಿತಿಯಿಂದ ದೂರವಾದುದು. ಶುನಶ್ಯೇಪನ ಪ್ರಸಂಗವನ್ನು ಅವನು ಸಾಕಷ್ಟು ವಿವರವಾಗಿಯೇ ವರ್ಣಿಸುತ್ತಾನೆ.

ಹಿರಿದು ಹುಸಿಗಬುಧಿಪತಿ ಮುನಿದು ಮಾಡಿದ ಜಳೋದರವ ಭಾವಿಸದೆ
ಕಂಗೆಟ್ಟ ಜಾಡ್ಯಂ ಮಹಾ
ಧ್ವರಕೆ ಪಶುವಂ ಮಗನ ಮಾಡಲಾಱದೆ ಮೋಹದಿಂದಜೀಗರ್ತಮುನಿಯ
ವರಸುತ ಶುನಶ್ಯೇಪನಂ ತಂದು ಯಾಗವಿಧಿ
ಗರಿದು ಬೇಳಲ್ಕೆ ಮನದಂದ ಪಾತಕನು ಭೂ
ವರನನೇತಕ್ಕೆ ಹೇಸದೆ ಹೊಗಳ್ವೆಯೆಂದು ವಸಿಷ್ಠನಂ ಕೆಡೆನುಡಿದನು
(ಹ.ಕಾ.೨:೧೯)

ಈ ಆಪಾದನೆಗೆ ವಸಿಷ್ಠನಲ್ಲಿ ಉತ್ತರವಿಲ್ಲ. ವಿಶ್ವಾಮಿತ್ರನು ಶುನಶ್ಯೇಪನನ್ನು ರಕ್ಷಿಸಿದವನೆನ್ನುವ ಸತ್ಯ ಅವನಿಗೂ ತಿಳಿದಿದೆ. ಹರಿಶ್ಚಂದ್ರನಲ್ಲಿದ್ದ ವಸಿಷ್ಠನ ನಂಬುಗೆ ಇದಕ್ಕೆ ಕೃತಿಯಲ್ಲಿ ಎಲ್ಲಿಯೂ ಧಕ್ಕೆ ಬರುವುದಿಲ್ಲ. ಅಹಂಕಾರದಿಂದ ಹುಟ್ಟಿದುದಲ್ಲ. ಆದರೆ ವಿಶ್ವಾಮಿತ್ರ ಅದನ್ನು ಅಹಂಕಾರದ ನೆಲೆಯಿಂದಲೇ ಆಹ್ವಾನಿಸುತ್ತಾನೆ. ಎಲ್ಲರಲ್ಲಿಯೂ ಕುಂದು ಕಾಣುವ ಅವನು ಅಹಂಕಾರದ ನೆಲೆಯಿಂದಲೇ ಆಹ್ವಾನಿಸುತ್ತಾನೆ. ಎಲ್ಲರಲ್ಲಿಯೂ ಕುಂದು ಕಾಣುವ ಅವನು ಹರಿಶ್ಚಂದ್ರನ ಶ್ರೇಷ್ಠತೆಯನ್ನು ಪ್ರಶ್ನಿಸಿದರಲ್ಲಿ ಆಶ್ಚರ್ಯವೇನಿಲ್ಲ.

ತನ್ನ ಪಣವನ್ನು ಸಾಧಿಸಲು ವಿಶ್ವಾಮಿತ್ರ ಹೂಡಿದ ಉಪಾಯಗಳಲ್ಲಿ ಕುಟಿಲೋಪಾಯಗಳು ಆಗಿರುವುದು ಅವರ ಚಾರಿತ್ರ್ಯದ ಮೇಲೆ ಮತ್ತಷ್ಟು ಬೆಳಕು ಚೆಲ್ಲುತ್ತದೆ. ಮೊದಲನೆಯದಾಗಿ 'ನಿಜವೈರದಂತಸ್ಥ ಎರಿಯದ ಮುನಿಗಳನ್ನು ಕರೆದು ಹರಿಶ್ಚಂದ್ರನನ್ನು ಸುವರ್ಣಯಾಗಕ್ಕೆ ಪ್ರೇರೇಪಿಸುವಂತೆ ಅವರನ್ನು ನಿಯೋಜಿಸುತ್ತಾನೆ. ವಸಿಷ್ಠನಿಲ್ಲದ ವೇಳೆ ಸಾಧಿಸಿ ಅಯೋಧ್ಯೆಗೆ ತೆರಳಿ 'ಪಿರಿಯ ಕರಿಯಂ ಮೆಟ್ಟಿ ಕವಡೆಯಂ ಮಿಡಿದೊಡಿನಿತುದ್ದಮಂ ಪೋಪುದದರ ಸರಿಯೆನಿಸಿ ಸುರಿದ' ಹೊನ್ನನ್ನು ದಾನವಾಗಿ ಬೇಡುತ್ತಾನೆ. ಹರಿಶ್ಚಂದ್ರ ಅದನ್ನೂ ನೀಡಿದಾಗ ಆ ರಾಶಿಯನ್ನು ಅವನ ಭಂಡಾರದಲ್ಲಿಯೇ ನ್ಯಾಸವಾಗಿರಿಸಿ, ತನ್ನ ಆಶ್ರಮಕ್ಕೆ ಮರಳುತ್ತಾನೆ. ಈ ಉಪಾಯ ಫಲಿಸದಿದ್ದಾಗ ದುರ್ಬದ್ಧಿಯಂ ನೆನೆದು' ಉತ್ಪತ್ತಿ ಮಂತ್ರದ ಪ್ರಯೋಗದಿಂದ ಮೃಗ ಸಂಕುಳಗಳನ್ನು ಸೃಷ್ಟಿಸಿ ನಾಡಬೆಳೆಗಳು ಕೆಡುವಂತೆ ಮಾಡುತ್ತಾನೆ. ಅವುಗಳ ಬೇಟೆಗೆಂದು ಬಂದ ಅರಸನನ್ನು ಮಾಯಾವರಾಹದ ಸೃಷ್ಟಿಯ ಮೂಲಕ ತನ್ನ ಆಶ್ರಮಕ್ಕೆ ಸೆಳೆಯುತ್ತಾನೆ. ಹೊಲತಿಯನ್ನು ಹುಟ್ಟಿಸಿ ಅವರ ಮೂಲಕ ಹರಿಶ್ಚಂದ್ರನನ್ನು ಕುಲಭ್ರಷ್ಟನನ್ನಾಗಿ ಮಾಡುವ ಹಂಚಿಕೆಯನ್ನು ಹೊಡುತ್ತಾನೆ. ಈ ತಂತ್ರವೂ ನಿಷ್ಫಲವಾದಾಗ ಸ್ವತಃ ಅವನನ್ನು ಸಂಧಿಸಿ ಅವನ ಮೇಲೆ ಸರ್ವಾಪಹರಣದ ಕಾರ್ಯದ ಅಪಾದನೆಯನ್ನು ಹೋರಿಸುತ್ತಾನೆ.

ಎಡಬಿಡದೆ ಬೇಡಿ ಕಾಡುವಿರಾದಡಿನ್ನು ಕೇಳ್
ಕಡೆಗನ್ನ ಸರ್ವರಾಜ್ಯವನಾದಡಂ ನಿಮಗೆ
ಕೊಡಹಡೆವೆನ್ನೆಸಲ್ಲದೀಯೊಂದು ತೇಜಮಂ ಕೊಡೆನೆಂದು ಭೂಪಾಲನು
(ಹ.ಕಾ. ೮:೩೨)

ಎಂಬ ಹರಿಶ್ಚಂದ್ರನ ಮಾತನ್ನೇ ದಾನವೆಂದು ಪರಿಗಣಿಸಿ ಮೋಸದಿಂದ ಅವನ ರಾಜ್ಯವನ್ನೇ ಅಪಹರಿಸುತ್ತಾನೆ. 'ಹೇಗನೊಪ್ಪಿಸಿದವಂಗೆಲ್ಲಿಯದು ಸುಂಕ' ಎಂಬ ರಾಜನ ಸಯುಕ್ತಿಕ ವಾದವನ್ನು ತಿರಸ್ಕರಿಸಿ ತಾನು ಅವನಲ್ಲಿದ್ದ ನ್ಯಾಸಕ್ಕೆ ಅವನನ್ನು ಸಾಲಗಾರನನ್ನಾಗಿ ಮಾಡುತ್ತಾನೆ. ನಲ್ವತೆಂಟು ದಿನಗಳ ತನ್ನ ಶಿಷ್ಯರಲ್ಲಿಯೇ ಹುಸಿಯಾಸೂಯ ನೀಚವೃತ್ತಿ ನಿರ್ದಾಕ್ಷಿಣ್ಯ ನಿಷ್ಕರುಣ ನೀತಿಗಳಲ್ಲಿ ಹೆಸರಾದ ನಕ್ಷತ್ರಕನನ್ನು ತೆರಕಾರನೆಂದು ನಿಯಾಮಿಸುತ್ತಾನೆ. ತನ್ನ ಸತಿ, ಸುತರನ್ನು ಕಾಶಿಯಲ್ಲಿ ಮಾರಿ ಅವಧಿ ಮುಗಿಯುವುದರೊಳಗೆಯೆ ಹರಿಶ್ಚಂದ್ರ ಸಂದಾಯ ಮಾಡಿದರೂ, ಇನ್ನೊಂದು ನೆಪದಿಂದ ಅವನು ತನ್ನನ್ನು ಚಾಂಡಾಲನಿಗೆ ಮಾರಿಕೊಂಡು ಚಾಂಡಾಲ ವೃತ್ತಿಯನ್ನು ಕೈಕೊಳ್ಳುವ ಅನಿವಾರ್ಯ ಸ್ಥಿತಿಯನ್ನು ಉಂಟು ಮಾಡುತ್ತಾನೆ. ಲೋಹಿತಾಶ್ವ ಹಾವು

ಕಡಿದು ಸಾಯುವುದು, ಚಂದ್ರಮತಿ ರಾಜಕುಮಾರನ ಕೊಲೆಯ ಅಪಾದನೆಗೆ ಗುರಿಯಾಗುವುದು ಕೂಡ ಅವನ ಕಾರಸ್ಥಾನದಿಂದಾಗಿಯೇ.

ಈ ಎಲ್ಲ ಸಂದರ್ಭಗಳಲ್ಲಿ ರಾಘವಾಂಕ ವಿಶ್ವಾಮಿತ್ರನನ್ನು ನೋಡುವ ದೃಷ್ಟಿ ಅವನು ಬಳಸುವ 'ಸುಜನಮೃಗಧೀರ' 'ಕಪಟಪಟು', 'ಮುನಿರಕ್ಕಸ' 'ದುರ್ಮಂತ್ರ' 'ಕಡುಮೂರ್ಖ' ಮೊದಲಾದ ವಿಶೇಷಣ ಪದಗಳಲ್ಲಿ ಸ್ಫುಟನಾಗುತ್ತದೆ. ವಿಶ್ವಾಮಿತ್ರನ 'ಒಳಗು ನಿರ್ಮಳವಿಲ್ಲ' ಎಂಬ ವಸಿಷ್ಠನ ವಾದವನ್ನೇ ಸಮರ್ಥಿಸುತ್ತಾ ರಾಘವಾಂಕ ಅವನಲ್ಲಿ 'ಹೊಲೆ'ಯ ಲಕ್ಷಣಗಳನ್ನು ಕಾಣುತ್ತಾನೆ.

ರಾಜಪ್ರಭುತ್ವವನ್ನು ಮನ್ನಿಸುವುದು ಅಂದರೆ ಆದರ ಭಾಗವಾಗಿ ವರ್ಣಪದ್ಧತಿಯನ್ನು ಯಾಗ ಪದ್ಧತಿಯನ್ನು ಕೂಡಾ ಮನ್ನಿಸುವುದು ಎಂದರ್ಥ. ಆದರೆ ರಾಜತ್ವದ ಅಹಂಕಾರವನ್ನು ಕಂಗೆಡಿಸುವಂತಹ ಪ್ರಶ್ನೆಗಳನ್ನು ಹಾಕುವ ಹೊಲೆಯರನ್ನು, ಕೆಳವರ್ಗದವರನ್ನು ಎದುರಾಳಿಗಳಾಗಿ ಚಿತ್ರಿಸುವ ಮೂಲಕ ತಾತ್ಕಾಲಿಕವಾಗಿಯಾದರೂ ಅದನ್ನು ಅಲುಗಾಡಿಸುವುದರ ಮೂಲಕ ಪ್ರತಿರೋಧದ ಗುಣವನ್ನು ಈ ಕಾವ್ಯದಲ್ಲಿ ಕಾಣಬಹುದು.

ಒಟ್ಟಿನಲ್ಲಿ ರಾಘವಾಂಕನ 'ಹರಿಶ್ಚಂದ್ರ ಚಾರಿತ್ರ್ಯ'ದಲ್ಲಿ ಹರಿಶ್ಚಂದ್ರ ಸತ್ಯಕ್ಕಾಗಿ ಬದುಕುತ್ತಾನೆ. ಇಲ್ಲಿ ಸತ್ಯವೆಂದರೆ ವಸ್ತುಸ್ಥಿತಿಯಲ್ಲ, ನಿಜಸ್ಥಿತಿಯಲ್ಲ. ಹರಿಶ್ಚಂದ್ರನ ನುಡಿಯ ಬದ್ಧತೆಗೆ ಮೂಲ ಕಾರಣ ಕುಲಾಚಾರ. ಇಲ್ಲಿ ಹರಿಶ್ಚಂದ್ರನ ಸತ್ಯಾಸತ್ಯತೆಯ ಪ್ರಶ್ನೆಯೊಂದೇ ಮುಖ್ಯವಾಗುವುದಿಲ್ಲ. ಆ ರಾಜನಾಗಿ 'ರಾಜತ್ವ' ಪದವಿಯನ್ನು ಹೊಂದಿದ ಕಾರಣ ಅಧಿಕಾರವನ್ನು ಜನಹಿತದ ಸಲುವಾಗಿ ಬಳಸಬೇಕೆಂದು ರಾಘವಾಂಕನು ಸೂಚಿಸುತ್ತಾನೆ. ಅಂದರೆ ಪ್ರಜೆಗಳನ್ನು ಸಮಾನ ಪ್ರೀತಿಯಿಂದ ನೋಡಿಕೊಳ್ಳಬೇಕು ಎಂದಾಗ ರಾಜ ತಾನು ಇತರರಿಗಿಂತ ಶ್ರೇಷ್ಠನು, ಕುಲದಲ್ಲಿ ಅಧಿಕನು ಎಂದು ಬೀಗುವುದಿಲ್ಲ. ಹಿಂದಣ ರಾಜರುಗಳೆಲ್ಲ ತಾವು ಸೂರ್ಯವಂಶ ಪ್ರಸೂತರು ಎಂದು ತಿಳಿದು ಜಾತಿ ವ್ಯವಸ್ಥೆಯನ್ನು ಯಥಾಪ್ರಕಾರ ಮುಂದುವರೆಸಿಕೊಂಡು ಬಂದರು. ಈ ಅಂಶದಲ್ಲಿ ಪುರೋಹಿತರು ಮತ್ತು ರಾಜರುಗಳು ಪರಸ್ಪರ ತಮ್ಮ ತಮ್ಮ ಮೇಲ್ಮೈಯನ್ನು ಎತ್ತಿ ಹಿಡಿಯುತ್ತ ಉಳಿದ ಜನಸಮೂಹವನ್ನು ಕೀಳೆಂದು ಪರಿಗಣಿಸುತ್ತಿದ್ದರು. ರಾಘವಾಂಕ ರಾಜರುಗಳ ಅಧಿಕಾರದ ಅತಂತ್ರತೆಯನ್ನು ಮತ್ತು ಜಾತಿ ವ್ಯವಸ್ಥೆಯ ಮೇಲು-ಕೀಳಿನ ತಾರತಮ್ಯವನ್ನು ಒಟ್ಟಿಗೆ ಪ್ರತಿರೋಧದ ನೆಲೆಯಲ್ಲಿ ನೋಡಲು ಪ್ರಯತ್ನಿಸಿದ್ದಾನೆ.

ಅಡಿ ಟಿಪ್ಪಣಿಗಳು

೧. ಶಿವರುದ್ರಪ್ಪ ಜಿ.ಎಸ್., "ಪರಂಪರೆ ಮತ್ತು ರಾಘವಾಂಕನ ಪ್ರತಿಭೆ" ಪರಿಶೀಲನೆ ಪು.೫೨ (ಮೊದಲ ಮುದ್ರಣ)

೨. ಶಿವರುದ್ರಪ್ಪ ಜಿ.ಎಸ್. "ಪರಂಪರೆಮತ್ತು ರಾಘವಾಂಕನಪ್ರತಿಭೆ" ಪರಿಶೀಲನೆ ಪು.೫೫

೩. ದಿ. ವೆಂಕಣ್ಣಯ್ಯ ಟಿ.ಎಸ್. ಮತ್ತು ಕೃಷ್ಣಶಾಸ್ತ್ರಿ ಎ.ಆರ್., ಹರಿಶ್ಚಂದ್ರ ಕಾವ್ಯ ಸಂಗ್ರಹ, ಪೀಠಿಕೆ XXIII

೪. ಡಾ. ಮುಗಳಿ ರಂ. ಶ್ರೀ, ಕನ್ನಡ ಸಾಹಿತ್ಯ ಚರಿತ್ರೆ ಪು. ೧೮೩

೫. ಡಾ. ಮುಗಳಿ ರಂ. ಶ್ರೀ, ಕನ್ನಡ ಸಾಹಿತ್ಯ ಚರಿತ್ರೆ ಪು. ೧೮೩

೬. ಕುವೆಂಪು, ಸಾಹಿತ್ಯದಲ್ಲಿ ಪ್ರತಿಮಾ 'ರಸೋ ವೈಸಃ', ಪು.೫೬

೭. ಡಾ. ಚಿದಾನಂದಮೂರ್ತಿ, ಮಧ್ಯಕಾಲೀನಕನ್ನಡಸಾಹಿತ್ಯ ಮತ್ತು ಅಸ್ಪೃಶ್ಯತೆ, ಪು.೧೨೨.

೮. ಶಿವರುದ್ರಪ್ಪ ಜಿ.ಎಸ್., ಹರಿಶ್ಚಂದ್ರ ಕಾವ್ಯ ರಾಘವಾಂಕ, (ಸಂ.ವಿ. ಸೀತಾರಾಮಯ್ಯ ಪು.೮೨)

೯. ಶಿವರುದ್ರಪ್ಪ ಜಿ.ಎಸ್., ಹರಿಶ್ಚಂದ್ರ ಕಾವ್ಯ ರಾಘವಾಂಕ (ಸಂ. ವಿ. ಸೀತಾರಾಮಯ್ಯ ಪು.೮೭.

೧೦. ಶಿವರುದ್ರಪ್ಪ ಜಿ.ಎಸ್. ಪೂರ್ವೋಕ್ತ ಪು.೮೭

ಅಧ್ಯಾಯ - ಐದು

ಅಧ್ಯಯನದ ಫಲಶ್ರುತಿ

ರಾಘವಾಂಕನ ಕಾವ್ಯ ಸಾಧನೆಯ ಒಟ್ಟು ನೋಟದಲ್ಲಿ ಎದ್ದು ಕಾಣುವ ಮುಖ್ಯವಾದ ಅಂಶವೆಂದರೆ ಅಂದಿನ ಸಮಷ್ಟಿ ಮನಸ್ಸಿನೊಡನೆ ಸಂಗಟಗೊಂಡು ಅದನ್ನು ಪ್ರತಿಬಿಂಬಿಸಿದಲ್ಲದೆ ಆ ಯುಗ ಪ್ರಜ್ಞೆಯನ್ನು ಪ್ರಭಾವಿತಗೊಳಿಸಲು ಸಮರ್ಥನಾದುದು. ಇದನ್ನು ಸಾಹಿತ್ಯದ ಐತಿಹಾಸಿಕ ದೃಷ್ಟಿಯಿಂದ ನೋಡಿದರೆ ಕನ್ನಡ ಸಾಹಿತ್ಯದ ಪರಿವರ್ತನೆಯ ಯುಗದಲ್ಲಿ ಅವರ ಬೆಳವಣಿಗೆಯನ್ನು ನಿರ್ದೇಶಿಸಿದ ಕ್ರಾಂತಿಕಾರಿ ಯಾಗುತ್ತಾನೆ, ಮಾನವ ಮೌಲ್ಯಗಳ ಸಂಘರ್ಷ ಮತ್ತು ವಿಕಾಸ ದೃಷ್ಟಿಯಿಂಗ ನೋಡಿದಾಗ ಆಂತರಿಕ ಅಭೀಷ್ಟೆ ಆದರ್ಶಗಳನ್ನು ಮೂರ್ತಿಮತ್ತಾಗಿಸಿದ ದಾರ್ಶನಿಕನಾಗುತ್ತಾನೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ವ್ಯಾಪ್ತಿಗಳನ್ನು ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ರಾಘವಾಂಕನ ಜೀವನ ಮತ್ತು ಕೃತಿಗಳ ವಿವರಗಳನ್ನು ನೀಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ, ಪಂಪ, ರನ್ನ, ಜನ್ನ, ವಚನಕಾರರ ಕೃತಿಗಳಲ್ಲಿ ಹಾಗೂ ಹರಿಹರನ ಕೃತಿಗಳಲ್ಲಿ ಪ್ರತಿರೋಧ ಯಾವ ರೀತಿ ಅಭಿವ್ಯಕ್ತಗೊಂಡಿದೆ ಎಂಬ ಬಗ್ಗೆ ಅಧ್ಯಯನ ನಡೆಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಪ್ರತಿರೋಧ ಎನ್ನುವ ಗ್ರಹಿತೆಯನ್ನು ಚರ್ಚಿಸಿ, ರಾಘವಾಂಕ ತನ್ನ ಕಾಲಘಟ್ಟದ ಸಾಮಾಜಿಕ ಬದುಕಿನ ರೀತಿಯನ್ನು ಕುಲದ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಹೇಗೆ ಕಾವ್ಯ ರಚಿಸುವಲ್ಲಿ ಯಶಸ್ವಿಯಾಗಿದ್ದಾನೆ ಎಂಬುದನ್ನು ವಿಶ್ಲೇಷಿಸಲಾಗಿದೆ.

ಹರಿಶ್ಚಂದ್ರನ ಜೊತೆ ಹೊಲತಿಯರ, ವೀರಬಾಹುಕನ ಮುಖಾಮುಖಿಯಿದ್ದು 'ಹೊಲೆಯ ಮಾದಿಗ' ಎಂಬ ಜಾತಿ ಸಮಸ್ಯೆಯನ್ನು ಚರ್ಚಿಸಲಾಗಿದೆ. ಸಾಂಸ್ಕೃತಿಕವಾಗಿ 'ಉನ್ನತ'ದ ಸಂಕೇತವಾಗಿ 'ರಾಜ' ಕೆಳಸ್ತರದ ಸಂಕೇತವಾಗಿ 'ಹೊಲೆ ಮಾದಿಗ' ಎಂಬ

ಅಸ್ಪೃಶ್ಯತೆಯ ಮುಖಾಮುಖಿ ಕಾವ್ಯದಲ್ಲಿದ್ದು, ಅದು ಏನನ್ನು ಧ್ವನಿಸುತ್ತದೆ ಎಂಬ ಚರ್ಚೆಯನ್ನು ಸಂಪ್ರಬಂಧದಲ್ಲಿ ಕೈಗೊಳ್ಳಲಾಗಿದೆ.

ಆದ್ದರಿಂದಲೇ ಹರಿಶ್ಚಂದ್ರ, ಕೇಂದ್ರಿತ ಕಾವ್ಯವನ್ನಾಗಿ ಮಾತ್ರ, ಗಮನಿಸುವ ಅಗತ್ಯವಿದೆ ಎಂಬುದನ್ನು ಈ ಅಧ್ಯಯನದಲ್ಲಿ ಕೈಕೊಳ್ಳಲಾಗಿದೆ.

ಈ ಅಧ್ಯಯನವೂ ಅಂತಿಮವಲ್ಲ. ರಾಘವಾಂಕನಂತಹ ವಿರಾಟ್ ಪ್ರತಿಭೆಯ ಸೃಷ್ಟಿ ಅವನ ಅಧ್ಯಯನಕ್ಕೆ ಅಂತಿಮ ತೆರೆಯನ್ನು ಎಳೆಯಲಾಗದು ಎಂಬುದು ಬಹುಶಃ ಎಲ್ಲರೂ ಒಪ್ಪಿಕೊಳ್ಳುವ ಸಂಗತಿ ಎಂದುಕೊಂಡಿದ್ದೇನೆ.

ಶಿವನಾಂದ ಎಸ್., ೨೦೦೩
ಹರಿಹರನ ರಗಳೆಗಳು ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ,

ಹಿರೇಮಠ ಆರ್.ಸಿ., ೧೯೯೧
ಮಹಾಕವಿ ರಾಘವಾಂಕ, ಪ್ರಸಾರ ವಿದ್ಯಾನಿಧಿ ಪ್ರಕಾಶನ, ಗದಗ.

ಲೇಖನಗಳು

ಕುರ್ತಕೋಟಿ ಕೀರ್ತಿನಾಥ, ೧೯೯೫
ರಾಘವಾಂಕ, ಕನ್ನಡ ಸಾಹಿತ್ಯ ಸಂಗಾತಿ, ಪ್ರಕಟಕರು: ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕುರ್ತಕೋಟಿ ಕೀರ್ತಿನಾಥ, ೧೯೯೫
ಹರಿಶ್ಚಂದ್ರ ಕಾವ್ಯ, ಕನ್ನಡ ಸಾಹಿತ್ಯ ಸಂಗಾತಿ, ಪ್ರಕಟಕರು: ಕನ್ನಡ ವಿಶ್ವವಿದ್ಯಾಲಯ, ಹಂಪಿ

ದೇವೀರಪ್ಪ ಎಚ್., ೧೯೭೬
ರಾಘವಾಂಕನ ಕಾಲ ಜೀವನ ವ್ಯಕ್ತಿತ್ವ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಪ್ರಕಟಕರು: ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

ಬಸವರಾಧ್ಯ ಎನ್., ೧೯೮೦
ಹರಿಹರ ರಾಘವಾಂಕ, ಪ್ರಕಟಕರು: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಮರುಳಸಿದ್ಧಪ್ಪ ಕೆ., ೧೯೭೫
ರಾಘವಾಂಕ, ಷಟ್ಪದಿ ಸಾಹಿತ್ಯ, ಪ್ರಕಟಕರು: ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

ರಾಮೇಗೌಡ, ೧೯೭೧
ರಾಘವಾಂಕ : ಇತಿವೃತ್ತ, ಕನ್ನಡ ಸಾಹಿತ್ಯ ಚರಿತ್ರೆ, ಪ್ರಕಟಕರು: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಹಿರೇಮಠ, ಎಸ್. ಎಂ., ೨೦೦೬
ಹರಿಶ್ಚಂದ್ರ ಕಾವ್ಯ - ದಾಸೋಹಕಾವ್ಯ ಪ್ರಕಟಕರು: ವಿದ್ಯಾನಿಧಿ ಪ್ರಕಾಶನ, ಗದಗ

ಆಧಾರ ಗ್ರಂಥಗಳು

ಮೂಲ ಪಠ್ಯಗಳು

ಬಸವರಾಜು ಎಲ್., ೨೦೦೦
ಪಂಪನ ಸಮಸ್ತ ಭಾರತ ಕಥಾಮೃತ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ವಿವೇಕ ರೈ ಬಿ.ಎ., ೨೦೦೪
(ಸಂ) ರಾಘವಾಂಕನ ಸಮಗ್ರ ಕಾವ್ಯ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಡಾ. ನಾರಾಯಣ ಎ.ವಿ. ೧೯೯೪
ವಚನ ಪರಿಸರ, ನೇತ್ರಾ ಮುದ್ರಾಣಾಲಯ, ಬೆಂಗಳೂರು

ಶಿವಕುಮಾರ್ ಕೆ. ಪೈ., ೧೯೯೪
ರಾಘವಾಂಕನ ಹರಿಶ್ಚಂದ್ರ, ಪ್ರೀತಿ ಪ್ರಕಾಶನ, ಮೈಸೂರು

ಅಧ್ಯಯನ ಕೃತಿಗಳು

ನಾಯಕ ಜಿ.ಎಸ್., ೨೦೦೩
'ಹರಿಶ್ಚಂದ್ರ ಕಾವ್ಯ : ಓದು, ವಿಮರ್ಶೆ' ರಾಘವೇಂದ್ರ ಪ್ರಕಾಶನ, ಅಂಕೋಲಾ, ಉ.ಕನ್ನಡ

ಮುಗಳಿ ರಂ. ಶ್ರೀ., ೨೦೦೫
ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು

ರಾಗೌ., ೧೯೮೨
ರಾಘವಾಂಕ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ವೆಂಕಟರಾಮಪ್ಪ ಕೆ., ೧೯೭೫
ಕವಿ ರಾಘವಾಂಕ, ಪ್ರಕಟಕರು: ಡಿ.ವಿ.ಕೆ. ಪ್ರಕಾಶನ, ಮೈಸೂರು

ಶಂಕರ ನಾರಾಯಣ ರಾವ್ ಎಮ್. ಎಂ., ೧೯೭೮
ಯಶೋಧರ ಚರಿತ್ರೆ, ಪ್ರಕಟಕರು: ಶಾರಾದ ಮುನಿರ, ಮೈಸೂರು,